# ಗಣಪತ್ಯುಪನಿಷತ್ತು

(ಅಥರ್ವಶೀರ್ಷಮಂತ್ರಗಳು ಮತ್ತು ಸರಳಕನ್ನಡಾನುವಾದ)



ಅಧ್ಯಾತ್ಮವಿದ್ಯಾಪ್ರವೀಣ

ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ

ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ – 573 211

# ಸಂಸ್ಥಾಪಕರ ಸ್ಮರಣೆ



ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯದಿಂದ ಶ್ರೀ ಶಂಕರ ಭಗವತ್ಪಾದರು ಸರ್ವದಾ ಸ್ಮರಣೀಯರು. ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು- ವೈ. ಸುಬ್ಬರಾಯರು, ಜನನ 5.1.1880) ಶ್ರೀಶಂಕರವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ-ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯಭಾಷ್ಯಗಳಿಗೆ ಹತ್ತಿದ್ದ ಕೊಳೆಯನ್ನು, ಮುತ್ತಿದ್ದಧೂಳನ್ನು ತೊಡೆದು ಶಾಂಕರ ವೇದಾಂತದ ನೈಜತಿರುಳನ್ನು ಕಂಡುಕೊಂಡರು. ಶಾಂಕರವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಅಭಿನವಶಂಕರರಾದರು.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು 'ಪುರುಷ ಸರಸ್ವತೀ' ಎಂಬ ಅನ್ವರ್ಥ ನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮ ವಿಚಾರಕರಾದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮದ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರಸಂಪರ್ಕ, ಅಧ್ಯಾತ್ಮಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀಗೋಂದಾವಳಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳಾದ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತಿ ಮಹಾಸ್ವಾಮಿಗಳವರಿಂದ ಕಾಲಟಿಯಲ್ಲಿಯೇ ಭಾಷ್ಯಶಾಂತಿ ಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರಗನ್ನು ನೀಡಿದವು.

1937ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. 1948ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರ ಕೇಂದ್ರವಾಗಿದೆ. ಪೂಜ್ಯರು 1975ನೇ ಆಗಸ್ಟ್ 5ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ. ಈಚೆಗೆ 28.07.2008ರಂದು ಪ್ರತಿಷ್ಠೆಗೊಂಡ ಶ್ರೀ ಶ್ರೀಗಳವರ ಅಮೃತಶಿಲಾವಿಗ್ರಹವು ಹೊಳೆನರಸೀಪುರದ ಸಮಾಧಿಮಂದಿರದಲ್ಲಿ ರಾರಾಜಿಸುತ್ತಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹೀ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥
'' ಓಂ ನಮೋ ಭಗವತೇ ಸಚ್ಚಿದಾನಂದಾಯ ''

# ಗಣಪತ್ಯುಪನಿಷತ್ತು

(ಅಥರ್ವಶೀರ್ಷಮಂತ್ರಗಳು ಮತ್ತು ಸರಳಕನ್ನಡಾನುವಾದ)

ಬರೆದವರು :

ಅಧ್ಯಾತ್ಮವಿದ್ಯಾಪ್ರವೀಣ

ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ

ಕ್ರಮಾಂಕ : 287

Price List Catalog Sl.No. : 209

ಅಧ್ಯಾತ್ಮ ಪ್ರಕಾಶಕಾರ್ಯಾಲಯ

ಹೊಳೆನರಸೀಪುರ - 573 211, ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ

ದೂರವಾಣಿ: 08175-273820

www.adhyatmaprakasha.org.

e-mail: secretary@adhyatmaprakasha.org

coordinator_apk@yahoo.com

ಬೆಂಗಳೂರು ಶಾಖೆ :

ನಂ. 68 (ಹೊಸ ನಂ. 6), 6ನೇ ಮುಖ್ಯರಸ್ತೆ (ಎ.ಪಿ.ಕೆ. ರಸ್ತೆ), 2ನೇ ಬ್ಲಾಕ್,

ತ್ಯಾಗರಾಜನಗರ, ಬೆಂಗಳೂರು - 560 028. ದೂ : 080-2676 5548

e-mail: shankara.bhaskara@gmail.com

2022

GANAPATHYUPANISHATTU -
Written by: **Sri H. S. Lakshminarasimha Murthy**
Published by: Adhyatma Prakasha Karyalaya, Holenarasipura-573211,
Hassan District, Karnataka State, INDIA.
**Phone: 08175-273820**

website : www.adhyatmaprakasha.org
e-mail : secretary@adhyatmaprakasha.org
coordinator_apk@yahoo.com

1ನೆಯ ಮುದ್ರಣ : 2022; 1000 ಪ್ರತಿಗಳು

ಮುದ್ರಣ ಕಾಗದ : **70 GSM NS Maplitho**

ಪುಟಗಳು : 48

ಬೆಲೆ : ರೂ. 30/-

© ಅಧ್ಯಾತ್ಮಪ್ರಕಾಶಕಾರ್ಯಾಲಯದವು

*ಪ್ರತಿಗಳು ದೊರೆಯುವ ಸ್ಥಳ :*
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573 211, ದೂರವಾಣಿ: 08175-273820
e-mail: secretary@adhyatmaprakasha.org

ಬೆಂಗಳೂರು ಶಾಖೆ :
ಅಧ್ಯಾತ್ಮಪ್ರಕಾಶಕಾರ್ಯಾಲಯ
ನಂ. 68, (ಹೊಸ ನಂ. 6), ಎ.ಪಿ.ಕೆ. ರಸ್ತೆ, 2ನೇ ಬ್ಲಾಕ್,
ತ್ಯಾಗರಾಜನಗರ, ಬೆಂಗಳೂರು - 560 028 ದೂ : 080-2676 5548
e-mail: shankara.bhaskara@gmail.com

ಮುದ್ರಣ :
ಶ್ರೀರಾಮ ಪ್ರಿಂಟರ್ಸ್
ನಂ.47, ಬಿಕೆಎಂ ಕಾಂಪ್ಲೆಕ್ಸ್, ಸುಪ್ರಜಾನಗರ, ಚುಂಚಗಟ್ಟ ಮುಖ್ಯರಸ್ತೆ,
ಬೆಂಗಳೂರು - 560 062. ಮೊಬೈಲ್: 98453 46197

# ಪ್ರಕಾಶಕರ ಬಿನ್ನಹ

ಗಣಪತಿ ಅಥರ್ವಶೀರ್ಷವು ವೈದಿಕವಾಗಿ ಅತ್ಯಂತ ಪ್ರಸಿದ್ಧವಾಗಿದೆ. ಸಾಮಾನ್ಯವಾಗಿ ಎಲ್ಲ ಪೂಜೆಗಳ ಆರಂಭದಲ್ಲಿಯೂ ಈ ಮಂತ್ರಗಳನ್ನು ಪಠಿಸುವ ರೂಢಿಯಿದೆ. ಈ ಮಂತ್ರಗಳ ಪುರಶ್ಚರಣೆಯನ್ನು ಮಾಡುವದು, ಮೋದಕ, ಲಾಜ, ಸಾಜ್ಯಸಮಿತ್ತು, ದೂರ್ವೆ – ಇವುಗಳಿಂದ ಹೋಮಿಸಿ ಕಾಮನಾಪೂರ್ತಿ ಯನ್ನು ಮಾಡಿಕೊಳ್ಳುವದೂ ಪ್ರಸಿದ್ಧವಾಗಿದೆ. ಜಪವನ್ನು ಮಾಡುವಾಗ ಮಂತ್ರಗಳ ಅರ್ಥ, ವಿವರಣೆಗಳು ಮನಸ್ಸಿಗೆ ಬಂದರೆ ಉಪಾಸ್ಯದೇವತೆಯ ಸ್ವರೂಪವು ಮನಸ್ಸಿನಲ್ಲಿ ಮೂಡಲು ಅತ್ಯಂತ ಸಹಾಯಕವಾಗುತ್ತದೆ. ಆ ಉದ್ದೇಶದಿಂದ ಅಧ್ಯಾತ್ಮಪ್ರಕಾಶಕಾರ್ಯಾಲಯದ ಪಂಡಿತರಾಗಿದ್ದ ಅಧ್ಯಾತ್ಮವಿದ್ಯಾಪ್ರವೀಣ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ಈ ಉಪನಿಷತ್ತಿಗೆ ಭಾವಾರ್ಥ ಹಾಗೂ ಆಧ್ಯಾತ್ಮಿಕ ವಿವರಣೆಯನ್ನು ಸರಳವಾಗಿ ಬರೆದು ವಾಚಕರಿಗೆ ಅನುಗ್ರಹಿಸಿದ್ದಾರೆ.

ಈ ವಿವರಣೆಗಳು 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಯ ಅಧ್ಯಾತ್ಮಸಂದೇಶಗಳು ಎಂಬ ಶೀರ್ಷಿಕೆಯಲ್ಲಿ ಜನವರಿ 1994 ರಿಂದ ಜುಲೈ 1994 ರವರೆಗೆ ಪ್ರಕಟವಾಗಿದ್ದವು. ಇವನ್ನು ಪುಸ್ತಕರೂಪದಲ್ಲಿ ತಂದರೆ ವಾಚಕರಿಗೆ ಅನುಕೂಲವೆಂದು ಶ್ರೀಯುತ ಹೆಚ್.ಕೆ. ಸುಬ್ಬರಾಯರು, ಬೆಂಗಳೂರು ಇವರು ಸಲಹೆಯನ್ನು ನೀಡಿದರು. ಅದರಂತೆಯ ಪುಸ್ತಕವನ್ನು ಪ್ರಕಟಿಸಲು ಯೋಜಿಸ ಲಾಯಿತು. ಅಂತೆಯೇ ಈ ಪುಸ್ತಕಪ್ರಕಟಣೆಯ ಸಂಪೂರ್ಣ ವೆಚ್ಚವನ್ನು ಸುಬ್ಬರಾಯರೇ ಭರಿಸಿರುತ್ತಾರೆ. ಅವರಿಗೆ ಸಕಲ ಶ್ರೇಯಸ್ಸನ್ನು ಶ್ರೀಶ್ರೀಗಳವರು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

ಎಂದಿನಂತೆ ವಾಚಕರು ಪುಸ್ತಕವನ್ನು ಬರಮಾಡಿಕೊಂಡು ಕಾರ್ಯಾಲಯ ದಲ್ಲಿ ನಿರಂತರವಾಗಿ ನಡೆಯುತ್ತಿರುವ ಅಧ್ಯಾತ್ಮಪ್ರಸಾರ ಕಾರ್ಯದಲ್ಲಿ ಭಾಗಿಗಳಾಗ ಬೇಕೆಂದು ಪ್ರಾರ್ಥಿಸುತ್ತೇವೆ.

ಶುಭಕೃತ್ ಸಂವತ್ಸರ
ಆಷಾಢ ಶುದ್ಧ ಬಿದಿಗೆ
1-7-2022

**ಪ್ರಕಾಶಕರು**

# ವಿಷಯಾನುಕ್ರಮಣಿಕೆ


| | | | |
|---|---|---|---|
| 1. | ಗಣಪತಿಯ ತತ್ತ್ವ | – | 1 |
| 2. | ಗಣಪತಿಯಲ್ಲಿ ಪ್ರಾರ್ಥನೆ | – | 6 |
| 3. | ಸೃಷ್ಟಿ–ಸ್ಥಿತಿ–ಲಯ–ಕರ್ತನಾದ ಗಣಪತಿ | – | 12 |
| 4. | ಸರ್ವದೇವಾತ್ಮಕನಾದ ಗಣಪತಿ | – | 18 |
| 5. | ಗಣಪತಿಯ ಮೂಲಮಂತ್ರ | – | 23 |
| 6. | ನಮೋ ಗಣಪತಯೇ | – | 29 |
| 7. | ಫಲಶ್ರುತಿ | – | 35 |
| 8. | ಗಣೇಶಾಥರ್ವಶೀರ್ಷಸ್ವಾಹಾಕಾರಮಂತ್ರಾಃ | | 42 |

॥ ಓಂ ॥

# ಗಣಪತ್ಯುಪನಿಷತ್ತು

## ಗಣಪತಿಯ ತತ್ತ್ವ

ಓಂ ॥ ನಮಸ್ತೇ ಗಣಪತಯೇ । ತ್ವಮೇವ ಪ್ರತ್ಯಕ್ಷಂ ತತ್ತ್ವಮಸಿ ।
ತ್ವಮೇವ ಕೇವಲಂ ಕರ್ತಾಸಿ । ತ್ವಮೇವ ಕೇವಲಂ ಧರ್ತಾಸಿ ।
ತ್ವಮೇವ ಕೇವಲಂ ಹರ್ತಾಸಿ । ತ್ವಮೇವ ಸರ್ವಂ ಖಲ್ವಿದಂ ಬ್ರಹ್ಮಾಸಿ।
ತ್ವಂ ಸಾಕ್ಷಾದಾತ್ಮಾಸಿ ನಿತ್ಯಮ್ ॥ – ಗಣಪತ್ಯುಪನಿಷತ್ತು 1

**ಭಾವಾರ್ಥ** : ಗಣಪತಿಗೆ ನಮಸ್ಕಾರ. ಎಲೈ (ದೇವನೆ), ನೀನೇ ಪ್ರತ್ಯಕ್ಷವಾಗಿ ತತ್ತ್ವಮಸಿ ಆಗಿರುತ್ತೀಯೆ, ನೀನೊಬ್ಬನೇ ಕರ್ತೃವೂ ಧಾರಯಿತೃವೂ ಹರಣ ಮಾಡುವವನೂ ಆಗಿರುವೆ. ನೀನೇ ಈ (ಜಗತ್ತ)ನ್ನೆಲ್ಲ ವ್ಯಾಪಿಸಿರುವ ಬ್ರಹ್ಮವಾಗಿರುವೆಯಷ್ಟೆ! ನೀನೇ ಸಾಕ್ಷಾದಾತ್ಮನಾಗಿರುವೆ.

[ಈ ಉಪನಿಷತ್ತಿನಲ್ಲಿ ಪರಮಾತ್ಮನನ್ನು 'ಗಣಪತಿ' ಎಂದು ಹೆಸರಿಸಿ ಸ್ತುತಿಮಾಡಲಾಗಿದೆ. ಇರುವವನು ದೇವನೊಬ್ಬನೇ. ಅವನನ್ನೇ ಬೇರೆಬೇರೆಯ ಹೆಸರುಗಳಿಂದ ಪ್ರಾಜ್ಞರು ಕರೆಯುವರು. ಆ ದೇವನು ಇಡಿಯ ಜಗತ್ತಿನ ಸೃಷ್ಟಿಕರ್ತನೂ ಪಾಲಕನೂ ಸಂಹಾರಕನೂ ಆಗಿರುವನಲ್ಲದೆ ಸಕಲ ಪ್ರಾಣಿಗಳ ಆತ್ಮನೂ ಆಗಿರುವನು – ಎಂದಭಿಪ್ರಾಯ.]

## ಗಣಪತ್ಯುಪನಿಷತ್ತು

'ಅಧ್ಯಾತ್ಮಪ್ರಕಾಶ'ದ ವಾಚಕರೊಬ್ಬರ ಸೂಚನೆಯಂತೆ ಗಣಪತ್ಯುಪನಿಷತ್ತನ್ನು ಈಗ ಸಂದೇಶ ಲೇಖನಕ್ಕೆ ಆರಿಸಿಕೊಳ್ಳಲಾಗಿದೆ. ಇದುಕೂಡ ಅಷ್ಟೋತ್ತರಶತೋಪ ನಿಷತ್ತುಗಳಲ್ಲಿಯೇ ಅಡಕವಾಗಿದ್ದು 92ನೆಯ ಉಪನಿಷತ್ತಾಗಿದೆ. ಮತ್ತು ಅಥರ್ವ ವೇದಕ್ಕೆ ಸೇರಿದೆ. ಇದಕ್ಕೆ ಒಂದು ವ್ಯಾಖ್ಯಾನ ಅಥವಾ ಭಾಷ್ಯವು ಇರುವದಾಗಿ ತಿಳಿದುಬಂದಿದೆಯಾದರೂ ಆ ಗ್ರಂಥವು ನನಗೆ ಸಿಕ್ಕಿರುವದಿಲ್ಲ. ಆದರೂ ಹೆಚ್ಚಿನ ಗೂಢಾರ್ಥಗಳಿಲ್ಲದೆ ಸರಳವಾಗಿರುವದರಿಂದ ಯಥಾಮತಿಯಾಗಿ ವಿವರಣೆಯನ್ನು

ಬರೆಯಲು ಉಪಕ್ರಮಿಸಿದ್ದೇನೆ. ಇನ್ನು ಮುಂದೇನಾದರೂ ಯಾವದಾದರೂ ವ್ಯಾಖ್ಯಾನವು ದೊರೆತರೆ ಅದನ್ನು ಸಮಯಾನುಸಾರವಾಗಿ ಬಳಸಿಕೊಳ್ಳಲಾಗುವದು. ಈ ಉಪನಿಷತ್ತು ವೈದಿಕವೃಂದದಲ್ಲಿಯೂ ಪೂಜೆ, ಪಾರಾಯಣ, ಜಪ, **ಹೋಮಾದಿಗಳಲ್ಲಿ** ಈಗ ಬಳಕೆಯಲ್ಲಿರುವದರಿಂದ ಇದರ ವಿವರಣವು ಭಕ್ತರಿಗೆ ಹೆಚ್ಚು ಉಪಯೋಗಕರವಾದೀತೆಂದು ಭಾವಿಸಿದೆ. ಇದಕ್ಕೆ ಪಾಠಾಂತರಗಳೂ ಸಾಕಷ್ಟು ಇವೆ. ಆದರೆ ಇಲ್ಲಿ ವಾರಣಾಸಿ ವ್ಯಾಸಪ್ರಕಾಶನದ 'ಈಶಾದ್ಯಷ್ಟೋತ್ತರ ಶತೋಪನಿಷದಃ' (1983) ಎಂಬ ಗ್ರಂಥದ ಪಾಠವನ್ನು ಅನುಸರಿಸಿ ವಿವರಣೆ ಯನ್ನು ಕೊಡಲಾಗಿದೆ.

ಋಗ್ವೇದ-ಯುಜುರ್ವೇದಗಳಲ್ಲಿ 'ಗಣಾನಾಂ ತ್ವಾ' ಎಂಬ ಮಂತ್ರವು ಉಕ್ತವಾಗಿದೆ. ಋಗ್ವೇದದಲ್ಲಿ 'ಗಣಪತಿಸೂಕ್ತ'ವೆಂದೇ ಪ್ರಸಿದ್ಧವಾದ ಭಾಗವಿದೆ. ಈ ಸೂಕ್ತದ ಋಕ್ಕುಗಳಲ್ಲಿ ಗಣಪತಿಯನ್ನು 'ಬ್ರಹ್ಮಣಸ್ಪತಿ' ಎಂದೂ ಕರೆಯಲಾಗಿದೆ. ಆದರೆ ಈಗ ನಾವು ಆರಾಧಿಸುತ್ತಿರುವ ನಾಮರೂಪಾಕಾರಗಳ ಪೌರಾಣಿಕ ಗಣಪತಿಯ ವರ್ಣನೆ ಇಲ್ಲಿ ಇರುವದಿಲ್ಲ. ಈ ಉಪನಿಷತ್ತಿನಲ್ಲಿ ಮಾತ್ರ ಪೌರಾಣಿಕ ಗಣಪತಿಯ ವರ್ಣನೆಯೂ ಸೇರಿದೆ. ಆದ್ದರಿಂದ ಇಲ್ಲಿರುವ ಮಂತ್ರಗಳ ಆನುಪೂರ್ವಿಗೆ ತಕ್ಕಂತೆ ಅಭಿಪ್ರಾಯವನ್ನು ತಿಳಿಸಲಾಗುವದು. ಪ್ರಾರಂಭಕ್ಕೆ ಗಣಪತಿಯೆಂದರೆ ಪರಬ್ರಹ್ಮವೇ ಎಂಬ ವಾಕ್ಯಗಳಿವೆ. ವೇದಾಂತಪ್ರತಿಪಾದ್ಯವಾದ ಬ್ರಹ್ಮವನ್ನು ಇಲ್ಲಿ ಗಣಪತಿಯೆಂದು ಸ್ತುತಿಸಿರುವದು ಸ್ಪಷ್ಟವಾಗಿ ಕಂಡುಬರುತ್ತದೆ. ಸಕಲದೇವತೆಗಳೂ ಪರಬ್ರಹ್ಮದಲ್ಲಿ ಅಡಕವಾಗಿರುವದರಿಂದ ಆ ಬ್ರಹ್ಮವನ್ನು ಯಾವ ದೇವತೆಯ ರೂಪದಿಂದ ಸ್ತುತಿಸಿದರೂ ತಪ್ಪೇನೂ ಇಲ್ಲ. ಪರಬ್ರಹ್ಮವು ತಾನೊಂದೇ ಆಗಿದ್ದರೂ ಆಯಾ ದೇವತಾವಿಶೇಷರೂಪದಿಂದಲೂ ಭಕ್ತರಿಗೆ ಉಪಾಸ್ಯವೂ ಪ್ರಾಪ್ಯವೂ ಆಗಿರುತ್ತದೆ. ಪ್ರಕೃತ ಗಣಪತಿ-ಎಂಬ ಹೆಸರಿನಿಂದ ಆರಾಧಿಸಲ್ಪಡುವ ಈ ಪರಬ್ರಹ್ಮದ ತತ್ತ್ವವನ್ನು ತಿಳಿಯೋಣ.

'ನಮಸ್ತೇ ಗಣಪತಯೇ' ಎಂಬಿದು ಗಣಪತಿಗೆ ನಮಸ್ಕಾರ- ಎಂದು ತಿಳಿಸುತ್ತದೆ. ಗಣ ಎಂದರೆ ಗುಂಪು ಎಂದರ್ಥ. ಆಧ್ಯಾತ್ಮಿಕವಾಗಿ ಮನುಷ್ಯನ ಶರೀರದಲ್ಲಿಯೇ ಕೈ, ಕಾಲು, ತಲೆ- ಮುಂತಾದ ದೇಹಾವಯಗಣಗಳು, ಕಣ್ಣು, ಕಿವಿ- ಮುಂತಾದ ಜ್ಞಾನೇಂದ್ರಿಯಗಣಗಳು, ಪ್ರಾಣಾಪಾನಾದಿವಾಯುಗಣಗಳು,

ವಾಕ್ಕು, ಮನಸ್ಸು, ಬುದ್ಧ್ಯಾದಿಗಣಗಳು, ಹೀಗೆ ಗುಂಪುಗುಂಪಾಗಿ ಕಾರ್ಯಕರಣ ಸಂಘಾತವು ಶಬ್ದಸ್ಪರ್ಶಾದಿಗುಣಗಳ ಗುಂಪು, ಆಕಾಶದಲ್ಲಿ ಗ್ರಹಗಳ ಗುಂಪು, ನಕ್ಷತ್ರಗುಂಪುಗಳು, ಆಧಿದೈವಿಕವಾಗಿ ಶಾಸ್ತ್ರಪ್ರಸಿದ್ಧರಾದ ದೇವಗಣಗಳು, ಋಷಿಗಳ ಗುಂಪು, ಪಿತೃಗಳ ಗುಂಪು– ಹೀಗೆ ಎಷ್ಟೋ ಗಣಗಳು ಕಂಡುಬರುತ್ತವೆ. ಭೂಮಿಯಮೇಲೆ ಸಹ ವ್ಯವಹಾರದಲ್ಲಿ ಮನುಷ್ಯವರ್ಗ, ಪ್ರಾಣಿವರ್ಗ, ಸಸ್ಯವರ್ಗ – ಹಾಗೂ ಇವುಗಳಲ್ಲಿಯೂ ಅವಾಂತರಗುಂಪುಗಳು– ಹೀಗೆ ಗಣಗಳ ಸಂಖ್ಯೆಯು ಅಪರಿಮಿತವಾಗಿದೆ. ಇಂಥ ಎಲ್ಲಾ ಗಣಗಳಲ್ಲಿಯೂ ಯಾವದೊಂದನ್ನೂ ಬಿಡದೆ ಎಲ್ಲಕ್ಕೂ ಒಡೆಯನಾಗಿರುವವನೇ **ಗಣಪತಿ**ಯೆನಿಸುವನು. ಇವನು ಪರಮಾತ್ಮನಲ್ಲದೆ ಬೇರೆ ಯಾರು ತಾನೆ ಆಗಲು ಸಾಧ್ಯವಾದೀತು? ಅವನನ್ನೇ ಗಣಪತಿಯೆಂದು ಕರೆದು ಇಲ್ಲಿ ನಮಸ್ಕರಿಸಲಾಗಿದೆ.

ಈಗ ಇಂಥ ಗಣಪತಿಯಾದ ಪರಬ್ರಹ್ಮವನ್ನು ನೀನೇ 'ತತ್ತ್ವಮಸಿ' ಎಂಬ ತತ್ತ್ವವಾಗಿರುವೆ– ಎಂದು ಸ್ತುತಿಸಲಾಗಿದೆ. ವೇದಾಂತಶಾಸ್ತ್ರದಲ್ಲಿ ತತ್ತ್ವಮಸಿವಾಕ್ಯವನ್ನು ಮಹಾವಾಕ್ಯವೆನ್ನುವರು. ತತ್ ಎಂದರೆ ಜಗನ್ಮೂಲವಾಗಿರುವ ಪರಬ್ರಹ್ಮವು. ತ್ವಂ ಎಂದರೆ ಜಗತ್ತಿನಲ್ಲಿ ಜೀವರುಗಳ ರೂಪದಲ್ಲಿ ಒಂದೊಂದು ಶರೀರದಲ್ಲಿಯೂ ಬಿಡಿಬಿಡಿಯಾಗಿದ್ದುಕೊಂಡು ನಾನು– ಎಂಬ ಅಭಿಮಾನಿಯಾಗಿ ಕರ್ತೃಭೋಕ್ತೃವೆನಿಸಿರುವ ಜೀವನು. ಈ ಜೀವರೂಪವು ಪ್ರತಿಬಿಂಬದಂತಿದ್ದು ಬಿಂಬಕ್ಕಿಂತ ಅನನ್ಯವಾಗಿರುವದು. ಕನ್ನಡಿಯಲ್ಲಿ ತೋರುವ ಪ್ರತಿಬಿಂಬವು ಮುಖಕ್ಕಿಂತ ಬೇರೆಯಾಗಿ ಸ್ವತಂತ್ರವಾಗಿ ಎಂದಾದರೂ ಇರುವದೇನು? ಹಾಗೆಯೇ ಅದು ಬಿಂಬವಿಲ್ಲದೆ ತೋರುವದಾದರೂ ಸಾಧ್ಯವೆ? ಆದ್ದರಿಂದ ಪ್ರತಿಬಿಂಬವೆಂದರೆ ಬಿಂಬವೇ– ಎಂದಾಯಿತು. ಹಾಗೆಯೇ ಈ ಪ್ರಪಂಚದಲ್ಲಿ ತೋರಿಕೊಳ್ಳುತ್ತಿರುವ ಬ್ರಹ್ಮಾದಿಸ್ಥಾವರಾಂತವಾದ ಉಪಾಧಿಗಳಲ್ಲಿ ಆಯಾ ಜೀವರೂಪದಿಂದ ಪ್ರಕಟವಾಗಿರುವ ಚೈತನ್ಯಾಭಾಸವು ನಿಜವಾಗಿ ಮೂಲಭೂತವಾದ ಬ್ರಹ್ಮಚೈತನ್ಯವೇ ಆಗಿದೆ. ಇದನ್ನೇ ವೇದಾಂತದಲ್ಲಿ 'ತತ್ತ್ವಮಸಿ' ಎಂದು ತಿಳಿಸಲಾಗಿದೆ. ಪ್ರಕೃತ ಇಂಥ ತಾನೊಂದೇ ಆಗಿರುವ ಬ್ರಹ್ಮಚೈತನ್ಯವು ತನ್ನಂತೆಯೇ ತೋರುತ್ತಿರುವ ಚೈತನ್ಯಾಭಾಸವನ್ನೂ ವ್ಯಾಪಿಸಿ ಅವೆಲ್ಲವೂ ತಾನೇ ಆಗಿದ್ದುಕೊಂಡಿದೆ. ಈ ನಿಜವನ್ನೇ ಇಲ್ಲಿ ಹೊರಗೆಡವಲಾಗಿದೆ.

ಈಗ ಮುಂದಿನ ವಾಕ್ಯಗಳಲ್ಲಿ ನೀನೇ ಕರ್ತಾ, ಧರ್ತಾ, ಹರ್ತಾ – ಎಂದು ಸ್ತುತಿಸಲಾಗಿದೆ. ಜಗತ್ತು ಎಂಬಿದು ಒಂದು ಕಾರ್ಯವು. ಇದು ಹುಟ್ಟುವ ಮೊದಲೂ ಇರಲಿಲ್ಲ. ಪ್ರಲಯದ ಅನಂತರವೂ ಇರುವದಿಲ್ಲ. ಹಾಗಾದರೆ ಹುಟ್ಟುವ ಮುಂಚೆ ಇದು ಎಲ್ಲಿರುತ್ತದೆ? ಹೇಗಿರುತ್ತದೆ? ಹಾಗೂ ಇದನ್ನು ಉಂಟು ಮಾಡುವವರಾರು? ಎಂದರೆ 'ಪರಮಾತ್ಮನೇ' ಎಂಬಿದು ಉತ್ತರವಾಗಿದೆ. ಈ ಬ್ರಹ್ಮಾಂಡವೆಲ್ಲವೂ ಹುಟ್ಟುವ ಮುಂಚೆಯೇ ಇತ್ತು. ಆದರೆ ಈಗಿನಂತೆ ನಾಮರೂಪಾತ್ಮಕವಾಗಿ ಬಿಡಿಬಿಡಿಯಾಗಿರಲಿಲ್ಲ. ತುಪ್ಪವು ತಾನು ಉಂಟಾಗುವ ಮುಂಚೆ ಹೇಗೆ ಹಾಲಾಗಿತ್ತೋ ಹಾಗೆಯೇ ಇದು– ಎಂಬೀ ಜಗತ್ತೂ ಸೃಷ್ಟಿಗೆ ಪೂರ್ವದಲ್ಲಿ ಬ್ರಹ್ಮವೇ ಆಗಿತ್ತು. ಅನಂತರ ಸೃಷ್ಟಿಕಾಲಕ್ಕೆ ಬ್ರಹ್ಮದಿಂದಲೇ ಹೊರಬಂದಿತು. ಇದಕ್ಕೆ ಬ್ರಹ್ಮವೇ ನಿಮಿತ್ತಕಾರಣವೂ ಉಪಾದಾನಕಾರಣವೂ ಆಗಿರುತ್ತದೆ. ಆದ್ದರಿಂದ ಜಗತ್ತಿನ ಅಪೇಕ್ಷೆಯಿಂದ ಬ್ರಹ್ಮವನ್ನು **ಕರ್ತಾ** ಎಂದಿದೆ. ಹಾಗೆಯೇ ಧರ್ತಾ ಎಂದರೆ ಧರಿಸಿರುವ ಆಧಾರವು ಎಂದರ್ಥ. ಹೇಗೆ ನಾವು ಒಂದು ಹೊಸಮನೆಯನ್ನು ನಿರ್ಮಿಸಿದರೆ ಅದನ್ನು ಭೂಮಿಯೇ ಧರಿಸಿರುತ್ತದೆಯೋ ಎಲ್ಲಿಯವರೆಗೆ ಮನೆಯಿರುತ್ತದೋ ಅಲ್ಲಿಯವರೆಗೂ ಅದಕ್ಕೆ ಭೂಮಿಯೇ ಆಧಾರವೋ ಹಾಗೆ ಪ್ರಪಂಚವು ತಾನು ಇದ್ದುಕೊಂಡಿರುವವರೆಗೂ ಭಗವಂತನ ಆಧಾರದಲ್ಲಿಯೇ ಇರುತ್ತದೆ. ಆದ್ದರಿಂದ ಅವನನ್ನು **ಧರ್ತಾ** ಎಂದು ಕರೆದಿದೆ. ಇನ್ನು ಈ ಪ್ರಪಂಚವನ್ನು ನಾಶಮಾಡುವವನೂ ಆ ಭಗವಂತನೇ ಆಗಿರುತ್ತಾನೆ. ಆತನು ಸರ್ವಸ್ವತಂತ್ರನಾದ್ದರಿಂದ ಪ್ರಾಣಿಗಳ ಕರ್ಮಾಪೇಕ್ಷೆಯಿಂದ ಪ್ರಲಯಕಾಲವು ಬಂದರೆ ಈ ಪ್ರಪಂಚವನ್ನೆಲ್ಲ ತನ್ನಲ್ಲಿಯೇ ಅಡಕಮಾಡಿಕೊಂಡುಬಿಡುತ್ತಾನೆ. ಆ ಕಾಲಕ್ಕೆ ಅವನನ್ನು ಬಿಟ್ಟು ಬೇರೇನೂ ಉಳಿದಿರುವದಿಲ್ಲ. ಹೀಗೆ ಅವನು **ಹರ್ತಾ** ಎನಿಸುವನು. ಈ ರೀತಿಯಲ್ಲಿ ಜಗತ್ತಿನ ಸೃಷ್ಟಿ, ಸ್ಥಿತಿ, ಲಯ– ಎಂಬ ವ್ಯಾಪಾರಗಳನ್ನು ಕಾಲಕಾಲಕ್ಕೆ ಕೈಗೊಳ್ಳುವ ಆ ಭಗವಂತನು ಕರ್ತಾ, ಧರ್ತಾ, ಹರ್ತಾ– ಎನಿಸಿಕೊಂಡು ಎಲ್ಲರಿಗೂ ಎಲ್ಲಾ ಕಾಲಕ್ಕೂ ಆತ್ಮನಾಗಿಯೂ, ಇರುವದಲ್ಲದೆ ಗಣಪತಿಯೆಂದೂ ಸ್ತುತಿಸಲ್ಪಟ್ಟಿರುತ್ತಾನೆ.

ಈಗ ಬ್ರಹ್ಮ, ಆತ್ಮಾ– ಎಂಬ ಶಬ್ದಗಳಿಂದ ಗಣಪತಿಯನ್ನು ಸ್ತುತಿಸಿರುವದನ್ನು ಕುರಿತು ವಿಚಾರಮಾಡೋಣ. 'ಈ ನಾಮರೂಪಾತ್ಮಕ ಪ್ರಪಂಚವೆಲ್ಲವೂ ಬ್ರಹ್ಮ

ಸ್ವರೂಪನಾದ ನೀನೇ ಆಗಿರುವೆ; ಹಾಗೂ ಸಾಕ್ಷಾದಾತ್ಮನಾಗಿರುವೆ' ಎಂದು ಇಲ್ಲಿ ಮತ್ತೆ ವರ್ಣಿಸಲಾಗಿದೆ. ಬ್ರಹ್ಮ ಎಂದರೆ ದೊಡ್ಡದು ಎಂದರ್ಥ. ಆದರೆ ಇಲ್ಲಿ ದೊಡ್ಡದಷ್ಟೇ ಬ್ರಹ್ಮವಲ್ಲ. ನಿತ್ಯಶುದ್ಧಬುದ್ಧಮುಕ್ತಸ್ವಭಾವವೂ ಸರ್ವಜ್ಞವೂ ಸರ್ವ ಶಕ್ತಿಸಮನ್ವಿತವೂ ಆಗಿರುವ ವಸ್ತುವು– ಎಂದರ್ಥ. ಏಕೆಂದರೆ ಬ್ರಹ್ಮಶಬ್ದವನ್ನು ಬಿಡಿಸಿ ಅರ್ಥಮಾಡಿದರೆ ಈ ಅಭಿಪ್ರಾಯವು ಸೂಚಿತವಾಗುತ್ತದೆ. ಆದ್ದರಿಂದ 'ಎಲೈ ಗಣಪತಿಯೆ, ನೀನು ಬ್ರಹ್ಮವಾಗಿರುವೆ'– ಎಂದು ತಿಳಿಸಿದೆ. ಮತ್ತೂ ಮುಂದುವರೆದು ನೀನು ಸಾಕ್ಷಾದಾತ್ಮನಾಗಿರುವೆ– ಎಂದೂ ವರ್ಣಿಸಿದೆ. ಆತ್ಮನೆಂದರೆ ಎಲ್ಲವನ್ನೂ ವ್ಯಾಪಿಸಿರುವ ಪದಾರ್ಥವು. ಹಾಗೂ ಎಲ್ಲಕ್ಕೂ ಒಳಗಿರುವ ವಸ್ತು ಎಂದರ್ಥವಾಗುತ್ತದೆ. ಆದ್ದರಿಂದ ಆತ್ಮನೆಂದರೆ ಪ್ರತ್ಯಗಾತ್ಮನೆಂದೇ ಅಭಿಪ್ರಾಯ. ಮತ್ತು ಆತ್ಮಾ ಎಂದರೆ ಸ್ವರೂಪ– ಎಂದೂ ಅರ್ಥವಾಗುತ್ತದೆ. ಎಲ್ಲಾ ಪ್ರಾಣಿಗಳ ಹಾಗೂ ಎಲ್ಲಾ ವಸ್ತುಗಳ ತಿರುಳಾಗಿಯೂ ಹೆಚ್ಚೇಕೆ? ಎಲ್ಲಾ ವಸ್ತುಗಳು ತಾನೇ ಆಗಿಯೂ ನಾನಾ ರೂಪಾಕಾರಗುಣಭೇದಗಳಿಂದ ಯಾವದೊಂದು ವಸ್ತುವೇ ಆಗಲಿ– ಮತ್ತೊಂದಕ್ಕಿಂತ ಭಿನ್ನವಾಗಿ ತೋರಿದರೂ ಸ್ವರೂಪದಿಂದ ಅದು ಆತ್ಮನಾಗಿಯೇ ಇದ್ದುಕೊಂಡಿರುತ್ತದೆಯಾಗಿ ಗಣಪತಿಯು ಎಲ್ಲದರ ಸಾಕ್ಷಾದಾತ್ಮನೂ ಆಯಾ ವಸ್ತುವಿನ ನಿಜಸ್ವರೂಪನೂ ಆಗಿದ್ದುಕೊಂಡು ಆತ್ಮನೆನಿಸಿಕೊಂಡಿರುತ್ತಾನೆ –ಎಂದು ಇಲ್ಲಿ ಹೋಗಳಿದೆ.

ಈ ಉಪನಿಷತ್ತನ್ನು ವೈದಿಕರು **ಹೋಮಕ್ಕೂ** ಬಳಸುತ್ತಾರೆ. ಆ ಸಂದರ್ಭದಲ್ಲಿ ಫಲಶ್ರುತಿಯನ್ನು ಹೊರತುಪಡಿಸಿ ಈ ಉಪನಿಷತ್ತನ್ನು ಹತ್ತು ಭಾಗಗಳಾಗಿ ವಿಂಗಡಿಸಿರುತ್ತಾರೆ. ಆ ವಿಭಾಗದಂತೆ ಈವರೆಗಿನ ಭಾಗವು ಒಂದು ಮಂತ್ರವೆನಿಸಿರುತ್ತದೆ. ಇನ್ನು ಎರಡನೆಯ ಮಂತ್ರವು ಹೀಗಿದೆ.

**ಓಂ ॥ ಋತಂ ವಚ್ಮಿ । ಸತ್ಯಂ ವಚ್ಮಿ ॥ – ಗಣಪತ್ಯುಪನಿಷತ್ತು 2.**

ಇದು ಮಂತ್ರದ್ರಷ್ಟಾರನಾದ ಋಷಿಯೇ ಹೇಳಿರತಕ್ಕ ಮಾತುಗಳಾಗಿವೆ. ಈವರೆಗೆ ಗಣಪತಿಯನ್ನು ಕುರಿತು ಸ್ತೋತ್ರಮಾಡಿದ್ದರಲ್ಲಿ ತಾನು ಯಥಾರ್ಥವನ್ನೇ ನುಡಿದಿದ್ದೇನೆ –ಎಂದು ಆತನು ಪ್ರತಿಜ್ಞೆಮಾಡುತ್ತಿದಾನೆ. ಮತ್ತು ನಾನು ಹೇಳಿರುವದು ಸತ್ಯವು– ಎಂದು ಸ್ಪಷ್ಟಗೊಳಿಸುತ್ತಿದಾನೆ. ಯಾವನೇ ಆದರೂ ಒಂದು ವಿಚಾರವನ್ನು ಪ್ರಕಟಿಸಬೇಕಾದರೆ ಅದು ಅವನಿಗೆ ಚೆನ್ನಾಗಿ ತಿಳಿದಿರಬೇಕು, ಅಬಾಧಿತವಾಗಿರಬೇಕು.

ಮತ್ತು ನಿಜವಾಗಿರಲೇಬೇಕು. ಆಗಲೇ ಅದು ತತ್ತ್ವ, ಯಥಾರ್ಥವೆನಿಸುವದು. ಈ ಯಥಾರ್ಥವು ವಸ್ತುಜ್ಞಾನದಿಂದ ಕಂಡುಕೊಳ್ಳತಕ್ಕದ್ದೇ ಹೊರತು ಯಾವನೊಬ್ಬನೂ ತನ್ನ ಮನಸ್ಸಿನಲ್ಲಿ ಕಲ್ಪಿಸಿದ್ದಾಗಲಿ, ಊಹೆಮಾಡಿದ್ದಾಗಲಿ – ಅಲ್ಲ. ಆದ್ದರಿಂದ ಇಲ್ಲಿ 'ಗಣಪತಿ' ಎಂಬ ತತ್ತ್ವದ ನಿಜವನ್ನರಿತ ಜ್ಞಾನಿಯು ತಾನು ಯಥಾವತ್ತಾಗಿ ಕಂಡುಕೊಂಡಂತೆ 'ಜಗತ್ತಿನ ಇರವು, ಉತ್ಪತ್ತಿ, ನಾಶಗಳಿಗೆ ಕಾರಣವಾಗಿ, ಹಾಗೂ ಜಗತ್ತು ಹುಟ್ಟುವದಕ್ಕಿಂತಲೂ ಮೊದಲೇ ಇದ್ದುಕೊಂಡಿದ್ದು, ಪ್ರಲಯವಾದಮೇಲೂ ಉಳಿದುಕೊಂಡಿರುವ ಸರ್ವಾತ್ಮಕವಾದ ಬ್ರಹ್ಮವೇ ಅದು ಎಂಬಿದು ನಿಜ; ಇದನ್ನು ನಾನು ದೃಢಪಡಿಸಿ ಹೇಳುತ್ತಿದೇನೆ' ಎಂಬ ಮಟ್ಟದಲ್ಲಿ 'ಋತಂ ವಚ್ಮಿ । ಸತ್ಯಂ ವಚ್ಮಿ' ॥ ಎಂದಿರುತ್ತಾನೆ. ಋಷಿಗಳೆಲ್ಲರೂ ಹೀಗೆಯೇ ತಾವು ಕಂಡುಕೊಂಡ ಅನುಭವಗಮ್ಯವಾದ ತತ್ತ್ವವನ್ನೇ ಜಗತ್ತಿಗೆ ಹೊರಪಡಿಸಿದ್ದಾರೆ. ಕೆಲವು ವಿಷಯಗಳಲ್ಲಿ ಒಬ್ಬ ಋಷಿಗೂ ಮತ್ತೊಬ್ಬನಿಗೂ ಅಭಿಪ್ರಾಯಭೇದವಿದ್ದರೆ ಅದು ಕರ್ಮ, ಉಪಾಸನೆಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಆದರೆ ವಸ್ತುತಂತ್ರವಾದ ಅನುಭವದಲ್ಲಿ ಭಿನ್ನಾಭಿಪ್ರಾಯವಿರುವದೇ ಇಲ್ಲ. ಅವನಂತೆಯೇ ಈಗಲೂ ಯಾವನು ಏಕಾಗ್ರತೆ, ತಪಸ್ಸು, ವಿಚಾರ– ಮುಂತಾದಸಾಧನಗಳಿಂದ ಪ್ರಯತ್ನಮಾಡುವನೋ ಅವನು ಕೂಡ ಗಣಪತಿಯ ತತ್ತ್ವವನ್ನು ಹೀಗೆಯೇ ಕಂಡುಕೊಳ್ಳುವದೇ ನಿಜ– ಎಂದಭಿಪ್ರಾಯ.

*****

## ಗಣಪತಿಯಲ್ಲಿ ಪ್ರಾರ್ಥನೆ

ಓಂ ॥ ಅವ ತ್ವಂ ಮಾಮ್ । ಅವ ವಕ್ತಾರಮ್ । ಅವ ಶ್ರೋತಾರಮ್ ।
ಅವ ದಾತಾರಮ್ । ಅವ ಧಾತಾರಮ್ । ಅವಾನೂಚಾನಮವಶಿಷ್ಯಮ್ ।
ಅವ ಪಶ್ಚಾತ್ತಾತ್ । ಅವ ಪುರಸ್ತಾತ್ । ಅವೋತ್ತರಾತ್ತಾತ್ ।
ಅವ ದಕ್ಷಿಣಾತ್ತಾತ್ । ಅವ ಚೋರ್ಧ್ವಾತ್ತಾತ್ । ಅವಾಧರಾತ್ತಾತ್ ।
ಸರ್ವತೋಮಾಂ ಪಾಹಿ ಪಾಹಿ ಸಮಂತಾತ್ ॥

– ಗಣಪತ್ಯುಪನಿಷತ್ತು 3.

**ಭಾವಾರ್ಥ** : (ಎಲೈ ಗಣಪತಿಯೆ,) ನೀನು ನನ್ನನ್ನು ಕಾಪಾಡು. (ಈ ಮಂತ್ರವನ್ನು) ಹೇಳುವವನನ್ನೂ ಕೇಳುವವನನ್ನೂ ಕಾಪಾಡು. ಹಾಗೆಯೇ ದಾನಮಾಡುವವನನ್ನೂ ಪೋಷಕನನ್ನೂ ಗುರುಶಿಷ್ಯರನ್ನೂ ಕಾಪಾಡು, ಮುಂದುಗಡೆ, ಹಿಂದುಗಡೆ, ಎಡಕ್ಕೆ, ಬಲಕ್ಕೆ, ಮೇಲೆ, ಕೆಳಗೆ– ಹೀಗೆ ಎಲ್ಲೆಡೆಯಲ್ಲಿಯೂ ಸುತ್ತಲೂ ನನ್ನನ್ನು ಕಾಪಾಡು.

[ಭಕ್ತನು ತನ್ನ ಇಷ್ಟದೇವತೆಯನ್ನು ಕುರಿತು ಪ್ರಾರ್ಥಿಸುವದನ್ನು ಇಲ್ಲಿ ತಿಳಿಸಿದೆ. ಆತನಿಗೆ ಎಲ್ಲೆಡೆಯಿಂದಲೂ ರಕ್ಷಣೆಬೇಕಾಗಿದೆ. ತಾನು, ತನ್ನ ಪೋಷಕರು, ಗುರುಹಿರಿಯರು – ಎಲ್ಲರನ್ನೂ ಕಾಪಾಡುವಂತೆ ಬೇಡುತ್ತಿದಾನೆ. ತನ್ನ ಸುತ್ತುವಳೆಯವನ್ನೆಲ್ಲ ರಕ್ಷಿಸು ವಂತೆಯೂ ಕೇಳಿಕೊಳ್ಳುತ್ತಿದಾನೆ. ನೂರಕ್ಕೆ ಒಬ್ಬನಾದರೂ ಹೀಗೆ ಪ್ರಾರ್ಥಿಸಿದ್ದಲ್ಲಿ ವಿಶ್ವಶಾಂತಿಗೆ ಕಾಣಿಕೆಯನ್ನು ನೀಡಿದಂತೆ ಆಗುವದು.]

## ಭಕ್ತನ ಬೇಡಿಕೆ

ಈಗ ಗಣಪತ್ಯುಪನಿಷತ್ತಿನ ಮೂರನೆಯ ಮಂತ್ರವನ್ನು ವಿಚಾರಮಾಡ ಬೇಕಾಗಿದೆ. ಇದರಲ್ಲಿ ಭಕ್ತನು ತನ್ನ ಇಷ್ಟದೇವತೆಯನ್ನು 'ಗಣಪತಿ' ಎಂದು ಭಾವಿಸಿರುತ್ತಾನೆ. ಇದೇ ರೀತಿಯಾಗಿ ಯಾವ ಭಕ್ತನೇ ಆದರೂ ಪರಬ್ರಹ್ಮವನ್ನು ತನ್ನತನ್ನ ಇಷ್ಟದೇವತೆಯಾಗಿ ಕಂಡುಕೊಂಡು ಉಪಾಸನೆಮಾಡಬಹುದು. ಮತ್ತು ತನ್ನತನ್ನ ಇಷ್ಟಾರ್ಥಗಳನ್ನು ನೆರವೇರಿಸಿಕೊಡುವಂತೆ ಬೇಡಿಕೊಳ್ಳಬಹುದು. ಪ್ರಕೃತ–ಗಣಪತಿಯ ಭಕ್ತನು ತನ್ನನ್ನು ಮೊದಲು ಕಾಪಾಡಬೇಕೆಂದು ಪ್ರಾರ್ಥಿಸಿದ್ದಾನೆ. ಇದು ಸರಿ. ತಾನು ದೃಢವಾಗಿದ್ದರಲ್ಲವೆ, ತನ್ನವರು, ತನ್ನ ಊರು, ದೇಶ– ಇತ್ಯಾದಿಗಳು ಪ್ರಾಪ್ತವಾಗುವವು? ಆದ್ದರಿಂದ ಮೊದಲು ತನ್ನನ್ನು ತಾನು ಕಾಪಾಡಿಕೊಳ್ಳಬೇಕು. ಹೇಗೆ ಯುದ್ಧದಲ್ಲಿ ರಥಿಕನು ತನ್ನನ್ನೂ ಅನಂತರ ತನ್ನ ರಥ, ಸಾರಥಿ, ಕುದುರೆ– ಇತ್ಯಾದಿಗಳನ್ನೂ ಕಾಪಾಡಿಕೊಂಡು ಶತ್ರುವನ್ನು ಎದುರಿಸಬೇಕೋ ಹಾಗೆಯೇ ಜೀವನಸಂಗ್ರಾಮದಲ್ಲಿಯೂ ಮೊದಲು ಆತ್ಮರಕ್ಷಣೆಯನ್ನು ಮಾಡಿಕೊಳ್ಳಬೇಕು. ಮಹಾನ್ಯಾಸವೆಂಬ ಪ್ರಯೋಗಭಾಗದಲ್ಲಿ 'ಆತ್ಮರಕ್ಷಾ' ಎಂಬ ವಿಭಾಗವೇ ಇದೆ. ಹೀಗೆ ತನ್ನನ್ನು ಕಾಪಾಡಿಕೊಳ್ಳುವಲ್ಲಿ ತನಗೆತಾನೇ ಶಕ್ತನು ಯಾರೂ ಅಲ್ಲ. ನಾವೆಲ್ಲ ಮಗುವಿದ್ದಂತೆ. ಮಗುವಿಗೆ ತಾಯಿಯ

ರಕ್ಷಣೆ ಹೇಗೆ ಬೇಕೋ ಹಾಗೆ ನಮಗೆ ಭಗವಂತನ ರಕ್ಷಣೆ ಬೇಕೇಬೇಕು. ಆದ್ದರಿಂದ ಭಕ್ತನು ಮೊದಲನೆಯ ಪ್ರಾರ್ಥನೆಯಲ್ಲಿಯೇ ಗಣಪತಿಯನ್ನು 'ನನ್ನನ್ನು ನೀನು ಕಾಪಾಡು' ಎಂದು ಕೇಳಿಕೊಂಡಿರುತ್ತಾನೆ. ಭಕ್ತ, ಭಗವಂತ– ಎಂಬ ಭೇದವನ್ನು ನಾವು ದಾಟುವವರೆಗೂ ಈ ಪ್ರಾರ್ಥನೆಯು ಅವಶ್ಯವಾಗಿರುತ್ತದೆ.

ಹೀಗೆ ಆತ್ಮರಕ್ಷಣೆಯನ್ನು ಕೇಳಿಕೊಂಡಮೇಲೆ ಭಕ್ತನು ವಕ್ತೃವನ್ನೂ ಶ್ರೋತೃವನ್ನೂ ಕಾಪಾಡುವಂತೆ ಕೇಳುತ್ತಿದಾನೆ. ಇಲ್ಲಿ ವಕ್ತಾ ಎಂದರೆ ಗುರುವೆಂದೂ ಶ್ರೋತಾ– ಎಂದರೆ ಶಿಷ್ಯನೆಂದೂ ತಿಳಿಯಬೇಕು. ಶಿಷ್ಯನಿಗೆ ಗುರುವು ಭಗವತ್ತತ್ತ್ವವನ್ನು ತಿಳಿಸಿಕೊಡುವನಾದ್ದರಿಂದ ಅವನೂ ಸುರಕ್ಷಿತನಾಗಿರಬೇಕು. ಅವನ ದೇಹೇಂದ್ರಿಯಾದಿಗಳು ಪ್ರಸನ್ನವಾಗಿದ್ದು ಕಾಲದೇಶಗಳು ಕೂಡಿಬಂದು ಶಿಷ್ಯನಿಗೆ ಉಪದೇಶವು ಲಭಿಸಬೇಕು. ಆ ಕಾಲಕ್ಕೆ ಶಿಷ್ಯನೂ ಗುರೂಪದೇಶಶ್ರವಣಕ್ಕೆ ಸಿದ್ಧನಾಗುವಂತೆ ಶಾರೀರಕಮಾನಸಿಕಆರೋಗ್ಯಸಂಪನ್ನನಾಗಿದ್ದು ಶ್ರದ್ಧಾಭಕ್ತಿಗಳಿಂದ ಗುರುವನ್ನು ಸಂಪರ್ಕಿಸಬೇಕು. ತತ್ತ್ವಬೋಧೆಯ ಅನಂತರವೂ ಗುರುಶಿಷ್ಯಸಂಬಂಧವು ಹಿತಕರವಾಗಿದ್ದು ಆಗಾಗ್ಗೆ ಶಿಷ್ಯನಿಗೆ ಉಂಟಾಗುವ ಸಂದೇಹಗಳನ್ನು ಗುರುವು ಪರಿಹರಿಸುತ್ತಿರಬೇಕು. ಹಾಗಾದರೇ ಶ್ರೇಯೋಮಾರ್ಗವು ಸುಗಮವಾಗುವದು. ಇನ್ನು ವಿದ್ಯಾಗ್ರಹಣಕಾಲದಲ್ಲಿಯೂ ವಿಘ್ನಗಳು ಬರಬಾರದು. ಅದಕ್ಕಾಗಿಯೇ 'ಸಹನಾವವತು' ಮುಂತಾದ ಶಾಂತಿಪಾಠಗಳನ್ನು ಉಪನಿಷತ್ತುಗಳಲ್ಲಿ ಪ್ರಾರಂಭದಲ್ಲೇ ಪಠಿಸಲಾಗುತ್ತದೆ. ಹೀಗೆ ಸಾಧಕನಿಗೆ ಗುರುವಿನ ಅವಶ್ಯಕತೆ ಇರುವದರಿಂದಲೇ ಇಲ್ಲಿ ವಕ್ತೃವನ್ನೂ ಶ್ರೋತೃವನ್ನೂ ಕಾಪಾಡುವಂತೆ ಕೇಳಿಕೊಳ್ಳಲಾಗಿದೆ.

ಇನ್ನು ಮುಂದೆ ದಾತೃವನ್ನೂ ಧಾತೃವನ್ನೂ ಕಾಪಾಡಬೇಕೆಂದು ಪ್ರಾರ್ಥಿಸಲಾಗಿದೆ. ದಾತಾ– ಎಂದರೆ ಕೊಡುವವನು ಎಂದರ್ಥ. ವಿದ್ಯಾಗ್ರಹಣ ಕಾಲದಲ್ಲಿ ಅನ್ನವಸ್ತ್ರಗಳನ್ನು ವಿದ್ಯಾರ್ಥಿಗೆ ಕೊಡುವಂಥ ದಾನಿಗಳಿರಬೇಕು. ಒಂದು ವೇಳೆ ವಿದ್ಯಾರ್ಥಿಯು ಶ್ರೀಮಂತನೇ ಆಗಿದ್ದರೂ ಅವನಿಗೆ ಬೇಕಾದದ್ದನ್ನು ಒದಗಿಸಿಕೊಡುವ ತಂದೆಯೇ ದಾತೃವೆನಿಸುವನು. ಎಷ್ಟೋ ವೇಳೆ ವಿದ್ಯಾರ್ಥಿಗೆ ವಿದ್ಯಾಸಕ್ತಿಯಿದ್ದರೂ ಮಾತಾಪಿತೃಗಳು ಇಲ್ಲವಾದರೆ ವಿದ್ಯೆಯು ಕುಂಠಿತವಾಗಿ ಬಿಡುವದು. ಆದ್ದರಿಂದ ದಾತೃವು ಚೆನ್ನಾಗಿ ಬಾಳಬೇಕಾದದ್ದು ಅವಶ್ಯವಾಗಿದೆ.

ಹಾಗೆಯೇ ಧಾತಾ– ಎಂದರೆ ಪೋಷಕನು ಎಂದರ್ಥ. ಯಜಮಾನನು ಹಣ ಹಾಗೂ ಪದಾರ್ಥಗಳನ್ನು ಒದಗಿಸಿದರೂ ಕಾಲಕಾಲಕ್ಕೆ ಪಾಕಮಾಡಿ ಭೋಜನೋಪಹಾರಗಳನ್ನು ಒದಗಿಸುವಂಥವರೂ ಬೇಕು. ಇಂಥವರು ಗಂಡಸರಾಗಿರಬಹುದು ಅಥವಾ ಹೆಂಗಸರೂ ಆಗಿರಬಹುದು. ಮನೆಯಲ್ಲಾದರೆ ತಾಯಿಯು ಅನ್ನವನ್ನು ಇಕ್ಕುತ್ತಾಳೆ. ಗುರುಕುಲದಲ್ಲಾದರೆ ಗುರುಪತ್ನಿಯೂ ಮಠ, ಛತ್ರಗಳಲ್ಲಿ ಗಂಡಸರೂ ಊಟವನ್ನು ಬಡಿಸಬಹುದು. ಒಟ್ಟಿನಲ್ಲಿ ಅನ್ನವನ್ನು ನೀಡಿ ಪೋಷಣೆಮಾಡುವಂಥವರು ಯಾರೇ ಆಗಲಿ– ಅವರನ್ನು ಸಹ ಕಾಪಾಡುವಂತೆ ಕೇಳಿಕೊಂಡಿದೆ. ಮುಂದುವರೆದು ಅನೂಚಾನನನ್ನೂ ಶಿಷ್ಯನನ್ನೂ ಕಾಪಾಡು ಎಂದು ಪ್ರಾರ್ಥಿಸಲಾಗಿದೆ. ಇದರ ಅಭಿಪ್ರಾಯವು ಹೀಗಿರಬಹುದು. ಅನೂಚಾನನೆಂದರೆ ಪ್ರಾಚೀನನು– ಹಿಂದಿನವನು ಎಂದರ್ಥ. ಅನೇಕ ಸಂದರ್ಭಗಳಲ್ಲಿ ಕೆಲವು ಆಚಾರಗಳ ವಿಷಯಕ್ಕೆ ಶಾಸ್ತ್ರದಲ್ಲಿ ಏನೂ ಹೇಳಿರುವದಿಲ್ಲ. ಆಗ ಹಿರಿಯರಾದ ಕುಲವೃದ್ಧರನ್ನೇ ಕೇಳಿ ತಿಳಿಯಬೇಕು. ಕೆಲವು ಸಂಪ್ರದಾಯ ಗಳಂತೂ ಗಂಡಸರಿಗೂ ತಿಳಿದಿರುವದಿಲ್ಲ. ವೃದ್ಧರಾದ ಸ್ತ್ರೀಯರನ್ನೇ ಕೇಳಿ ತಿಳಿಯಬೇಕು. ಅಂಥ ಸಂದರ್ಭದಲ್ಲಿ ಅನೂಚಾನರ ಅವಶ್ಯಕತೆ ಇರುತ್ತದೆ. ಇಂಥವರಿಗೆ ಶಾಸ್ತ್ರಕ್ಕಿಂತ ಅನುಭವವೇ ಮುಖ್ಯವಾಗಿರುತ್ತದೆ. ಈಗಲೂ ಅನೇಕ ಸದಾಚಾರಗಳು ಹಿರಿಯರ ಮಾತಿನಂತೆಯೇ ನಡೆಸಲ್ಪಡುವವು. ಇಂಥ ಅನೂಚಾನರನ್ನು ಕಾಪಾಡಬೇಕೆಂದು ಪ್ರಾರ್ಥಿಸಿದೆ. ಹಾಗೆಯೇ ಶಿಷ್ಯನೆಂದರೆ ತನ್ನಲ್ಲಿ ವಿದ್ಯೆಯನ್ನು ಈಗಾಗಲೆ ಕಲಿತಿರುವವನು ಹಾಗೂ ಕಲಿಯುತ್ತಿರುವವನು– ಇಬ್ಬರೂ ಆಗಬಹುದು. ಮತ್ತು ಮಂತ್ರೋಪದೇಶವನ್ನು ಪಡೆದುಕೊಂಡಂಥ ಶಿಷ್ಯವರ್ಗದವರೂ ಇರುತ್ತಾರೆ. ಅವರುಗಳಿಗೂ ಶ್ರೇಯಸ್ಸಾಗಲೆಂದು ಗುರುವು ಹಾರೈಸಬೇಕಾಗಿರುತ್ತದೆ. ಹೀಗೆ ಒಬ್ಬ ಸಾಧಕ ಅಥವಾ ಭಗವದ್ಭಕ್ತನಿದ್ದರೆ ಅವನ ಪ್ರಾರ್ಥನೆಯಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ. ಕೆಲವರು ದೇವರನ್ನು ನಾವು ನಂಬುವದಿಲ್ಲ– ಎನ್ನುತ್ತಾರೆ. ಚಿಂತೆಯಿಲ್ಲ. ಆದರೆ ಅಂಥವರು ಸಹ ತಂದೆತಾಯಿಗಳು, ಗುರುಹಿರಿಯರು, ಕುಲವೃದ್ಧರು, ವಿದ್ಯೋಪದೇಶ– ಮಂತ್ರೋಪದೇಶಮಾಡಿದ ಆಚಾರ್ಯರು– ಮುಂತಾದವರನ್ನಾದರೂ ಗೌರವಿಸಲೇಬೇಕಲ್ಲವೆ? ಅವರ ಪಾಲಿಗೆ ಈ ಪೂಜ್ಯರೆಲ್ಲ ದೇವರೇ ಆಗಿದ್ದಾರಲ್ಲವೆ?

ಆದ್ದರಿಂದ ಈ ಪ್ರಾರ್ಥನೆಯು ಎಲ್ಲರ ದೃಷ್ಟಿಯಿಂದಲೂ ಅಗತ್ಯವಾಗಿಯೇ ಇದೆ. ಹೀಗೆ ಗಣಪತಿಯು ಎಲ್ಲರನ್ನೂ ಕಾಪಾಡಲಿ– ಎಂದಭಿಪ್ರಾಯ.

ಈಗ ಸಾಧಕನು ಮುಂದುವರೆದು ತನಗೆ ಎಲ್ಲಾ ದಿಕ್ಕುಗಳಲ್ಲಿಯೂ ರಕ್ಷಣೆಯು ಬೇಕೆಂದು ಬೇಡುತ್ತಿದಾನೆ. ಪಶ್ಚಾತ್– ಎಂದರೆ ಹಿಂಭಾಗದಲ್ಲಿ ಪುರಸ್ತಾತ್–ಮುಂಭಾಗದಲ್ಲಿ, ದಕ್ಷಿಣಾತ್ತಾತ್– ಬಲಭಾಗದಲ್ಲಿ, ಉತ್ತರಾತ್ತಾತ್– ಎಡಭಾಗದಲ್ಲಿ, ಊರ್ಧ್ವಾತ್ತಾತ್– ಮೇಲುಭಾಗದಲ್ಲಿ, ಅಧರಾತ್ತಾತ್– ಕೆಳಭಾಗದಲ್ಲಿ– ಹೀಗೆ ಎಲ್ಲೆಲ್ಲಿಯೂ ನನ್ನನ್ನು ಕಾಪಾಡುವವನಾಗು– ಎಂದು ಪ್ರಾರ್ಥಿಸಿರುತ್ತಾನೆ. ಅಥವಾ ಪೂರ್ವಾದಿ ಎಲ್ಲಾ ದಿಕ್ಕುಗಳಲ್ಲಿಯೂ ಕಾಪಾಡು –ಎಂದೂ ಅರ್ಥಮಾಡ ಬಹುದು. ಒಂದೊಂದು ದಿಕ್ಕಿಗೂ ಅಧಿಷ್ಠಾತೃಗಳಾದ ದೇವತೆಗಳಿರುತ್ತಾರೆ. ಆ ದೇವತೆಗಳಿಗೂ ನಿತ್ಯವೂ ನಾವು ನಮಸ್ಕರಿಸಬೇಕು. ಸಂಧ್ಯಾವಂದನೆಯಲ್ಲಿ ಈ ದಿಗ್ವಂದನೆಯನ್ನು ಹಿರಿಯರು ಸೇರಿಸಿದ್ದಾರೆ. ಈ ದೇವತೆಗಳಾದರೊ, ಗಣಪತಿಯ ಅಧೀನದಲ್ಲಿಯೇ ಇರುವದರಿಂದ ಅವನನ್ನು ಪ್ರಾರ್ಥಿಸಿದರೂ ಅದು ಆಯಾ ದೇವತೆಗಳಿಗೆ ತಲುಪುತ್ತದೆ. ಆದ್ದರಿಂದ ಎಲ್ಲಾ ದಿಕ್ಕುಗಳಲ್ಲಿಯೂ ನನ್ನನ್ನು ಕಾಪಾಡು– ಎಂದು ಕೇಳಿಕೊಂಡಿದೆ. ಈ ಮೂಲಕ ಗಣಪತಿಯು ಸರ್ವವ್ಯಾಪಕನೆಂದೂ ಸ್ತುತಿಸಿದಂತಾಗಿದೆ. ಯಾವ ದೇವನು ಎಲ್ಲಾ ದಿಕ್ಕುಗಳನ್ನೂ ಎಲ್ಲಾ ದೇವತೆಗಳನ್ನೂ ದ್ಯುಲೋಕ, ಅಂತರಿಕ್ಷ, ಪೃಥಿವೀ, ಪಾತಾಳಾದಿಗಳನ್ನೂ ತಾನೊಬ್ಬನೇ ವ್ಯಾಪಿಸಿ ಕೊಂಡಿರುವನೋ ಅವನು ನನ್ನನ್ನು ಕಾಪಾಡಲಿ ಎಂದಾಗ ಆ ಭಗವಂತನ ಅಂತರ್ಯಾಮಿತ್ವ, ಸರ್ವಶಕ್ತಿತ್ವಗಳನ್ನೂ ಕೊಂಡಾಡಿದಂತೆಯೇ ಆಗುವದು. ಈ ರೀತಿಯಾದ ಪ್ರಾರ್ಥನೆಯು ಸ್ವಾರ್ಥಕ್ಕಾಗಿ ಮಾಡಲ್ಪಟ್ಟಂತೆ ಕಂಡರೂ ಅಂತರಾರ್ಥದಂತೆ ಭಗವಂತನ ನಿಜಸ್ವರೂಪವನ್ನೇ ಸ್ತುತಿಸಿದಂತಾಗಿರುವದು– ಎಂದು ತಿಳಿಯಬೇಕು.

ಈಗ ನಾಲ್ಕನೆಯ ಮಂತ್ರವನ್ನು ವಿಚಾರಮಾಡೋಣ. ಅದು ಹೀಗಿದೆ:–

ಓಂ ॥ ತ್ವಂ ವಾಙ್ಮಯಸ್ತ್ವಂ ಚಿನ್ಮಯಃ । ತ್ವಮಾನನ್ದಮಯಸ್ತ್ವಂ
ಬ್ರಹ್ಮಮಯಃ । ತ್ವಂ ಸಚ್ಚಿದಾನಂದಾಽದ್ವಿತೀಯೋಽಸಿ । ತ್ವಂ
ಪ್ರತ್ಯಕ್ಷಂ ಬ್ರಹ್ಮಾಸಿ । ತ್ವಂ ಜ್ಞಾನಮಯೋ ವಿಜ್ಞಾನಮಯೋಽಸಿ ॥
–ಗಣಪತ್ಯುಪನಿಷತ್ತು 4.

ಈ ಮಂತ್ರಭಾಗದಲ್ಲಿ ಗಣಪತಿಯನ್ನು ಪರತತ್ತ್ವವೆಂದೇ ಸ್ತುತಿಸಲಾಗಿದೆ. ಆತನು ವಾಙ್ಮಯನು- ಎಂದರೆ ವಾಕ್‌ಪ್ರಪಂಚವನ್ನೆಲ್ಲ ವ್ಯಾಪಿಸಿರುವವನು. ಇದರಿಂದ ಆತನು ಸಕಲವಿದ್ಯಾಸ್ವರೂಪನೆಂದಾಯಿತು. ಈ ಜಗತ್ತಿನಲ್ಲಿರುವ ಲೌಕಿಕ-ವೈದಿಕವಿದ್ಯೆಗಳೆಲ್ಲಕ್ಕೂ ಗಣಪತಿಯೇ ಒಡೆಯನು. ಆದ್ದರಿಂದ ಯಾವ ವಿದ್ಯೆಯನ್ನು ಕಲಿಯಬೇಕಾದರೂ ಆತನ ಅನುಗ್ರಹವು ಬೇಕು. ವಿದ್ಯಾರಂಭಕಾಲಕ್ಕೆ ಈಗಲೂ ಗಣಪತಿಯನ್ನು ಪೂಜಿಸಿಯೇ ಪ್ರಾರಂಭಿಸುವದು ಪದ್ಧತಿಯಾಗಿದೆ. ಅವನು ವಿದ್ಯೆಯನ್ನು ದಯಪಾಲಿಸುವದರ ಜೊತೆಗೆ ವಿದ್ಯಾಪ್ರಾಪ್ತಿಗೆ ಒದಗಬಹುದಾದ ಅಡ್ಡಿಗಳನ್ನು ಕಳೆಯುತ್ತಾನೆ. ಮತ್ತು ವಿದ್ಯೆಯು ಚೆನ್ನಾಗಿ ಬೆಳಗುವಂತೆಯೂ ಮಾಡುತ್ತಾನೆ. ವಿದ್ಯೆಗಳನ್ನು ಉಪನಿಷತ್ತಿನಲ್ಲಿ ಪರಾ, ಅಪರಾ- ಎಂದು ವಿಂಗಡಿಸಲಾಗಿದೆ. ಈಗಿನ ಲೌಕಿಕವಿದ್ಯೆಗಳೆಲ್ಲವೂ ಅಪರಾ- ಎಂಬ ಗುಂಪಿನಲ್ಲಿ ಸೇರುತ್ತವೆ. ಪರಾವಿದ್ಯೆಯೆಂದರೆ ಬ್ರಹ್ಮವಿದ್ಯೆಯು. ಅದಕ್ಕೆ ಹೋಲಿಸಿದರೆ ಉಳಿದವುಗಳು ಕೀಳೆನಿಸುತ್ತವೆಯಾದರೂ ಲೋಕದಲ್ಲಿ ಅಪರಾವಿದ್ಯೆಗಳೇ ವ್ಯವಹಾರಕ್ಕೂ ಲೋಕಾಂತರಗಳಲ್ಲಿ ಪಡೆಯುವ ಪುಣ್ಯಫಲವಾದ ಸ್ವರ್ಗಾದಿಗಳಿಗೂ ಸಾಧನಗಳಾಗಿರುವವು. ಸಂಗೀತ, ಸಾಹಿತ್ಯ, ಶಿಲ್ಪ, ವಾಸ್ತು, ವೈದ್ಯಕೀಯ, ಆಡಳಿತ, ಯಂತ್ರೋಪಕರಣಗಳ ಉತ್ಪತ್ತಿ, ಹಣಕಾಸುವ್ಯವಹಾರ ಇತ್ಯಾದಿ ವಿದ್ಯೆಗಳು ಮಾನವನಿಗೆ ಜೀವನೋಪಾಯವನ್ನು ಕಲ್ಪಿಸುತ್ತವೆ. ಇವುಗಳಲ್ಲಿ ಪ್ರವೀಣನಾದವನಿಗೆ ಹಣವೂ ಗೌರವವೂ ಜಗತ್ತಿನ ಯಾವಭಾಗದಲ್ಲಾದರೂ ದೊರಕುವವು. ಇಂಥ ವಿದ್ಯಾಪ್ರಾಪ್ತಿಯೂ ಕೌಶಲ್ಯವೂ ಗಣಪತಿಯ ಕೃಪೆಯಿಂದ ಲಭ್ಯವಾಗಲಿದೆ. ಮತ್ತು ಮಾತಿನ ರೂಪದಲ್ಲಿದ್ದುಕೊಂಡು ಸಾಧಕನು ಜನಪ್ರಿಯನಾಗುವಂತೆಯೂ ಮಾಡುತ್ತಾನೆ. ಇನ್ನು ಚಿನ್ಮಯನೂ ಆಗಿರುತ್ತಾನೆ. 'ಚಿದೇವ ಚಿನ್ಮಯಂ' ಎಂಬಂತೆ ತಾನೇ ಸ್ವತಃ ಚೈತನ್ಯಸ್ವರೂಪನಾಗಿರುತ್ತಾನೆ. ಏನೊಂದು ವಿಚಾರವು ಹೊಳೆಯಬೇಕಾದರೂ ಅಂತರಾತ್ಮನಾಗಿರುವ ಚಿದ್ರೂಪನಾದ ಗಣಪತಿಯ ಅನುಗ್ರಹವು ಬೇಕಾಗುವದು. ಕನ್ನಡಿಯು ಬೆಳಗಬೇಕಾದರೆ ಸೂರ್ಯನ ಬಿಸಿಲು ಅಗತ್ಯವಾಗಿರುವಂತೆ ನಮ್ಮ ಮನಸ್ಸಿನಲ್ಲಿ ಚೈತನ್ಯವು ಮಾರುಹೊಳೆದರೆ ಮಾತ್ರ ಅರಿವಾಗುವದು. ಹೀಗೆ ಪ್ರತಿಯೊಂದು ಬೋಧವೂ ಚಿಚ್ಛಕ್ತಿಸ್ವರೂಪನಾದ ಪರಮಾತ್ಮನಿಂದಲೇ ವ್ಯಾಪ್ತವಾಗಿರುತ್ತದೆ. ಇಂಥ ಗಣಪತಿಯು ಚಿನ್ಮಯನೇ ಆಗಿರುವನು. ಮುಂದುವರೆದು ಶ್ರುತಿಯು ಹೇಳುವದೇನೆಂದರೆ: 'ಎಲೈ ಗಣಪತಿಯೆ,

ನೀನೇ ಆನಂದಮಯನೂ ಬ್ರಹ್ಮಮಯನೂ ಆಗಿರುವೆ'. ಬ್ರಹ್ಮವೆಂದರೆ ನಿತ್ಯಶುದ್ಧ ಬುದ್ಧಮುಕ್ತಸ್ವಭಾವವೂ ಸರ್ವಜ್ಞವೂ ಸರ್ವಶಕ್ತಿಸಮನ್ವಿತವೂ ಆದದ್ದು. ಹೀಗೆ ಸತ್–ಎಂದರೆ ಯಾವಾಗಲೂ ಇರುವದಾಗಿದ್ದು– ಚಿತ್ ಎಂದರೆ ಯಾವಾಗಲೂ ಬೇರೊಂದರ ಹಂಗಿಲ್ಲದೆ ಬೆಳಗುವಂಥದ್ದಾಗಿದ್ದು ಆನಂದವೆಂದರೆ ಸುಖಸ್ವರೂಪ ವಾಗಿದ್ದು ಯಾವದು ಸ್ವತಂತ್ರವಾಗಿದೆಯೋ ಹಾಗೂ ತನಗೆರಡನೆಯದಿಲ್ಲ ದ್ದಾಗಿದೆಯೋ ಅದೇ ಗಣಪತಿಯ ಸ್ವರೂಪವು. ಈಗ ಸಾಧಕನು ಹೇಳುತ್ತಾನೆಂದರೆ: 'ಎಲೈ ಗಣಪತಿಯೆ, ನೀನೇ ಪ್ರತ್ಯಕ್ಷವಾಗಿ ಬ್ರಹ್ಮವು. ಜ್ಞಾನಮಯನೂ, ವಿಜ್ಞಾನಮಯನೂ ನೀನೇ.' ಈ ರೀತಿಯಾಗಿ ಗಣಪತಿಯ ತತ್ತ್ವವನ್ನು ವೇದಾಂತದರ್ಶನದಲ್ಲಿ ಹೇಳಿರುವ ಪರಬ್ರಹ್ಮದಲ್ಲಿಯೇ ಸಮನ್ವಯಮಾಡಿ ಇಲ್ಲಿ ಹೊಗಳಿದೆ. ಈ ತತ್ತ್ವವನ್ನೇ ಇನ್ನು ಮುಂದೆ ವಿಚಾರಮಾಡೋಣ.

*****

## ಸೃಷ್ಟಿ–ಸ್ಥಿತಿ–ಲಯ–ಕರ್ತನಾದ ಗಣಪತಿ

**ಓಂ ॥ ಸರ್ವಂ ಜಗದಿದಂ ತ್ವತ್ತೋ ಜಾಯತೇ । ಸರ್ವಂ**
**ಜಗದಿದಂ ತ್ವತ್ತಸ್ತಿಷ್ಠತಿ । ಸರ್ವಂ ಜಗದಿದಂ**
**ತ್ವಯಿ ಲಯಮೇಷ್ಯತಿ । ಸರ್ವಂ ಜಗದಿದಂ ತ್ವಯಿ ಪ್ರತ್ಯೇತಿ ।**
**ತ್ವಂ ಭೂಮಿರಾಪೋಽನಲೋಽನಿಲೋ ನಭಃ ।**
**ತ್ವಂ ಚತ್ವಾರಿ ವಾಕ್ಪದಾನಿ ॥ – ಗಣಪತ್ಯುಪನಿಷತ್ತು 5**

**ಭಾವಾರ್ಥ** : (ಎಲೈ ಗಣಪತಿಯೆ), ಈ ಪ್ರಪಂಚವೆಲ್ಲವೂ ನಿನ್ನಿಂದಲೇ ಹುಟ್ಟುತ್ತದೆ. ನಿನ್ನನ್ನೇ ಆಶ್ರಯಿಸಿಕೊಂಡಿರುತ್ತದೆ. ನಿನ್ನಲ್ಲಿಯೇ ಅಡಗುತ್ತದೆ. ಮತ್ತು ನಿನ್ನಲ್ಲಿಯೇ ತೋರಿಕೊಳ್ಳುತ್ತದೆ. ನೀನು ಭೂಮಿ, ನೀರು, ಅಗ್ನಿ, ವಾಯು, ಆಕಾಶವೂ (ಆಗಿದ್ದೀಯೆ). ಮಾತಿನ ನಾಲ್ಕು ರೂಪವೂ ನೀನೇ (ಆಗಿದ್ದೀಯೆ).

[ಜಗದ್ವ್ಯಾಪಾರಗಳೆನಿಸಿದ ಉತ್ಪತ್ತಿ, ಸ್ಥಿತಿ, ಲಯ ಈ ಮೂರೂ ಪರಮಾತ್ಮನಿಂದ ಮಾತ್ರವೇ ಆಗುವದು. ಇದರ ಒಡೆತನವು ಬೇರೆ ಯಾವ ದೇವತೆಗಾಗಲಿ ಮುಕ್ತನಾದ ಜ್ಞಾನಿಗಾಗಲಿ ಇಲ್ಲ. ಇಂಥ ಸರ್ವತಂತ್ರಸ್ವತಂತ್ರನು ಭಗವಂತನೊಬ್ಬನೇ ಆಗಿರುವನು.

ಗಣಪತಿಯೆಂದರೂ ಅವನೇ- ಎಂದಭಿಪ್ರಾಯ.]

## ಗಣಪತಿಯ ಮಹಿಮೆ

ಗಣಪತ್ಯಥರ್ವಶೀರ್ಷೋಪನಿಷತ್ತನ್ನು ವಿಚಾರಮಾಡುತ್ತಿದೇವೆ. ಈಗ ಐದನೆಯ ಮಂತ್ರವನ್ನು ವಿಚಾರಿಸಲಾಗುವದು. ಇದರಲ್ಲಿ ಗಣಪತಿಯನ್ನು ಪರಬ್ರಹ್ಮವೆಂದೇ ಕಂಡುಕೊಳ್ಳಲಾಗಿದೆ. ದೇವರು ಒಬ್ಬನೇ; ಅವನಿಗೇ ಅನಂತನಾಮಗಳಿವೆ- ಎಂಬ ಸಿದ್ಧಾಂತದ ತಳಹದಿಯಲ್ಲಿ ವಿಚಾರಮಾಡಿದಾಗ ಯಾವ ಹೆಸರಿನಿಂದ ಭಗವಂತನನ್ನು ವ್ಯವಹರಿಸಿದರೂ ತಪ್ಪಾಗುವದಿಲ್ಲ. ಆದರೂ ಪ್ರತಿಯೊಬ್ಬ ದೇವತಾಭಕ್ತನೂ ತನ್ನ ಇಷ್ಟದೇವತೆಯನ್ನು ಪರಬ್ರಹ್ಮವೆಂದು ತಿಳಿಯಬೇಕೆಂದು ಉಪನಿಷತ್ತಿನಲ್ಲಿ ತಿಳಿಸಿದೆ. ಬ್ರಹ್ಮವೆಂದರೆ ಆತ್ಮನು. ಆದ್ದರಿಂದ ಆತ್ಮನಿಗಿಂತ ದೇವತೆಯು ಬೇರೆ ಎಂದು ಯಾರು ತಿಳಿಯುತ್ತಾರೋ ಅಂಥವರನ್ನು ಆ ದೇವತೆಯು ತಿರಸ್ಕರಿಸಿಬಿಡುತ್ತದೆ- ಎಂದು ಬೃಹದಾರಣ್ಯಕೋಪನಿಷತ್ತಿನಲ್ಲಿದೆ. ಆದ್ದರಿಂದ ಉಪಾಸನೆಗಾಗಿ ಆಯಾ ದೇವತೆಯನ್ನು ತನಗಿಂತ ಬೇರೆಯಾಗಿ ಭಾವಿಸಿದರೂ ಕಡೆಯಲ್ಲಿ ಉಪಾಸ್ಯೋಪಾಸಕಭೇದವು ನಿಜವಲ್ಲವೆಂದೂ ದೇವತೆಯು ತನ್ನ ಆತ್ಮನೇ ಎಂದೂ ಆತ್ಮನಾದ್ದರಿಂದಲೇ ಅದು ಬ್ರಹ್ಮವಾಗಿರುವದೆಂದೂ ಬ್ರಹ್ಮದ ಸರ್ವಶಕ್ತಿಗಳೂ ಅದರಲ್ಲಿರುವವೆಂದೂ ಚಿಂತಿಸುವದೇ ಉಪಾಸನೆಯ ಪರಮರಹಸ್ಯವಾಗಿರುತ್ತದೆ. ಹೀಗೆ ಪರಬ್ರಹ್ಮದ ವಿಭೂತಿ, ಬಲ, ಶಕ್ತಿ, ಐಶ್ವರ್ಯ, ವೀರ್ಯ, ತೇಜಸ್ಸೇ ಮುಂತಾದ ಎಲ್ಲಾ ಗುಣಗಳೂ ಅಪರಿಮಿತವಾಗಿ ಇದ್ದುಕೊಂಡಿರುವದೇ ಉಪಾಸ್ಯದೇವತೆಯ ನಿಜಸ್ವರೂಪವೆಂದು ತಿಳಿದಾತನ ಉಪಾಸನೆಯು ಪರಮಶ್ರೇಷ್ಠವಾದದ್ದು. ಆದ್ದರಿಂದ ಇಲ್ಲಿ ಗಣಪತಿಯನ್ನು ಬ್ರಹ್ಮದ ಸಕಲ ಕಲ್ಯಾಣಗುಣಗಳಿಂದಲೂ ವಿಭೂತಿ ಮಹಿಮಾದಿಗಳಿಂದಲೂ ವರ್ಣಿಸಲಾಗಿದೆ. ಈ ವಿವರವನ್ನು ಚಿಂತಿಸೋಣ.

ಜಗತ್ತಿನ ಉತ್ಪತ್ತಿ- ಎಂಬಿದು ವಿಚಿತ್ರವೂ ಅಮೋಘವೂ ಆದದ್ದು. ಏಕೆಂದರೆ ಜಗತ್ತು ನಾನಾ ನಾಮರೂಪಗಳಿಂದ ಹರಡಿಕೊಂಡಿದೆ. ಅನೇಕ ಕರ್ತೃಭೋಕ್ತೃಗಳಿಂದ ಕೂಡಿದೆ. ಗೊತ್ತಾದ ಕಾಲದಲ್ಲಿ ಗೊತ್ತಾದ ಕ್ರಮದಿಂದ ಮಾಡಿದ ಕರ್ಮಕ್ಕೆ ಗೊತ್ತಾದ ಫಲವು ಬರುವದು ಖಚಿತವಾಗಿದೆ. ಉದಾಹರಣೆಗೆ

ಒಂದು ತೆಂಗಿನಕಾಯಿಯನ್ನು ನೆಲದಲ್ಲಿ ನೆಟ್ಟರೆ ಅದು ಇಂತಿಷ್ಟು ದಿನಗಳಲ್ಲಿ ಮೊಳಕೆಯಾಗಿ ಅನಂತರ ಸಸಿಯಾಗಿ, ಮರವಾಗಿ ಕಾಯಿಬಿಡುವದು ಕಂಡುಬಂದಿದೆ. ಹಾಗೆಯೇ ಒಂದು ಹಸು ಗಬ್ಬವಾದರೆ ಇಂತಿಷ್ಟು ಕಾಲದಲ್ಲಿ ಕರುವನ್ನು ಈಯುತ್ತದೆ- ಎಂಬಿದೂ ಪ್ರಸಿದ್ಧವು. ಇದೇ ರೀತಿಯಲ್ಲಿ ಪ್ರಪಂಚದ ಉಳಿದ ಪದಾರ್ಥಗಳ ಧರ್ಮವನ್ನೂ ತಿಳಿಯಬೇಕು. ಹೀಗೆ ಪ್ರಪಂಚವು ದೇಶ-ಕಾಲ-ಕಾರ್ಯಕಾರಣಭಾವಗಳಿಂದಲೂ ಬೀಜ-ಫಲಭಾವದಿಂದಲೂ ಕೂಡಿ ಸೃಷ್ಟಿಸ್ಥಿತಿಲಯಗಳನ್ನು ಹೊಂದುತ್ತಿರಬೇಕಾದರೆ ಇದನ್ನು ರಚಿಸಿದ ಮಹಿಮಾವಂತನು ಹೇಗಿರಬಹುದು? ಎನಿಸುತ್ತದೆ. ಮತ್ತು ಸೃಷ್ಟಿಯ ಇನ್ನೂ ಕೆಲವು ವೈಚಿತ್ರ್ಯಗಳನ್ನು ನೋಡಿರಿ. ಆಕಾಶದಲ್ಲಿ ಯಾವದೇ ಆಧಾರವಿಲ್ಲದೆ ಸೂರ್ಯಚಂದ್ರನಕ್ಷತ್ರಾದಿಗಳು ಉದಯಾಸ್ತಮಾನಗಳನ್ನು ಹೊಂದುವದು ಕಂಡುಬರುತ್ತದೆ. ಆಗಾಗ್ಗೆ ಗ್ರಹಣಗಳು ಸಂಭವಿಸುತ್ತವೆ. ಮಳೆಗಾಲ, ಚಳಿಗಾಲ, ಬೇಸಿಗೆಗಳಂತೂ ತಿಳಿದೇ ಇವೆ. ಇನ್ನು ಆಕಾಶಕ್ಕೆ ರೂಪವಿಲ್ಲವಾದರೂ ನೀಲವರ್ಣವಾಗಿ ಕಾಣುತ್ತದೆ. ಏಕೆ? ಎಂಬುದು ತಿಳಿದಿಲ್ಲ. ನೀರು ತಗ್ಗಾದ ಪ್ರದೇಶಕ್ಕೆ ಹರಿಯುತ್ತದೆ. ಬೆಂಕಿಯು ಮೇಲುಭಾಗಕ್ಕೇ ಉರಿಯುತ್ತದೆ. ಈ ನಿಯಮಗಳು ನಿಯತವಾಗಿವೆ. ಹಾಗೆಯೇ ಗಿಡ, ಮರ, ಬಳ್ಳಿಗಳ ವೈಚಿತ್ರ್ಯಗಳು ಅಪಾರವಾಗಿವೆ. ಭಾರಿಯ ಅರಳಿ, ಆಲದ ಮರದ ಹಣ್ಣುಗಳು ತೀರ ಚಿಕ್ಕವು. ಬೂದುಗುಂಬಳಬಳ್ಳಿಯ ಕಾಯಿಯು ಭಾರಿಯ ಗಾತ್ರದ್ದು -ಇತ್ಯಾದಿ. ಪ್ರಾಣಿಗಳೂ ಹಾಗೆಯೇ ವಿಚಿತ್ರವಾಗಿವೆ. ಕೆಲವಕ್ಕೆ ಕೊಂಬು ಇದೆ. ಕೆಲವಕ್ಕೆ ಇಲ್ಲ. ಆನೆಗೆ ಎರಡು ಜಾತಿಯ ಹಲ್ಲುಗಳು ಇವೆ. ಆಹಾರವನ್ನು ಅಗಿಯುವದಕ್ಕೆ ಒಂದು, ಹೊರಗೆ ತೋರಿಸಿಕೊಳ್ಳಲು ಮತ್ತೊಂದು. ಹಾವುಗಳಿಗೆ ಓಡಾಡಲು ಕಾಲುಗಳೇ ಇಲ್ಲ. ಇನ್ನು ಜಲಚರಗಳು, ಹಕ್ಕಿಗಳು- ಇತ್ಯಾದಿ ಜೀವರಾಶಿಗಳ ವೈಚಿತ್ರವನ್ನು ವರ್ಣಿಸಲು ಶಕ್ತಿಯೇ ಸಾಲದು. ಆದರೆ ಈ ಎಲ್ಲಾ ವೈಚಿತ್ರಗಳೂ ನಿಯಮಬದ್ಧವಾಗಿ ರಚಿತವಾಗಿವೆ. ಇನ್ನು ಸೃಷ್ಟಿಯಲ್ಲಿ ಮನುಷ್ಯನ ಹುಟ್ಟನ್ನು ವಿಚಿತ್ರವೆಂದು ಹೇಳಬೇಕಾದದ್ದೇ ಇಲ್ಲ. ಎರಡು ಕಣ್ಣುಗಳಿದ್ದರೂ ದೃಷ್ಟಿ ಒಂದೇ ಆಗಿದೆ. ಎರಡು ಕಿವಿಗಳಿಗೂ ಒಂದೇ ಶಬ್ದವೇ ಕೇಳುತ್ತದೆ. ಅವನ ಶರೀರರಚನೆಯು ಅತ್ಯಂತ ಜಟಿಲವಾಗಿದೆ. ಸೂಕ್ಷ್ಮಶರೀರದಲ್ಲಿರುವ ಇಂದ್ರಿಯಮನೋಬುದ್ಧಿಗಳು ಅನುಭವವೇದ್ಯವೇ ಹೊರತು ಪ್ರಮಾಣವೇದ್ಯವಲ್ಲ. ಹೀಗೆ ವಿಚಾರಿಸುತ್ತಾಹೋದರೆ ಜಗತ್ತಿನ ವಿಸ್ತಾರಕ್ಕೆ ಕೊನೆಯೇ ಇಲ್ಲ. ಇಷ್ಟೆಲ್ಲ

ವೈಚಿತ್ರಗಳನ್ನೊಳಗೊಂಡ, ಎಂಥ ಪ್ರಜ್ಞಾಶಾಲಿಯೂ ಮನಸ್ಸಿನಿಂದಲೂ ಚಿಂತಿಸಲು ಸಾಧ್ಯವಾಗದಂಥ ಪ್ರಪಂಚವನ್ನು ಉಂಟುಮಾಡಿದವನು ಯಾವನಿರಬಹುದು? ಅವನ ಸರ್ವಜ್ಞತೆ, ಸರ್ವಶಕ್ತಿಮತೆಗಳು ಎಂಥದ್ದಿರಬಹುದು? ಇಷ್ಟೇ ಸಾಲದು- ಎಂಬಂತೆ ಮನುಷ್ಯಪ್ರಪಂಚಕ್ಕೆ ಅನ್ವಯಿಸುವ ವೇದಶಾಸ್ತ್ರಾದಿಗಳು, ಭೌತಿಕವಿಜ್ಞಾನ, ಸಂಗೀತ, ಶಿಲ್ಪ, ನೃತ್ಯಾದಿಕಲೆಗಳು, ಆರ್ಥಿಕ, ಸಾಮಾಜಿಕ, ರಾಜಕೀಯ ನೀತಿನಿಯಮಗಳು, ವಾಣಿಜ್ಯ, ಕೃಷಿ, ಯಂತ್ರ- ಮುಂತಾದವುಗಳು, ವಿಜ್ಞಾನ, ಸಮುದ್ರಶೋಧನ, ವಾಯುಯಾನ, ದೂರಗ್ರಹಸಂಪರ್ಕ- ಇತ್ಯಾದಿ ಸಂಶೋಧನೆಗಳು- ಎಲ್ಲವೂ ಅತ್ಯಾಶ್ಚರ್ಯಕರವೇ ಆಗಿವೆ. ಆದ್ದರಿಂದ ಜಗತ್ಸೃಷ್ಟಿ- ಎಂಬಿದು ಸರ್ವಜ್ಞನಲ್ಲದವನಿಂದ ಸಾಧ್ಯವೇ ಇಲ್ಲ. ಇಂಥ ಸರ್ವಜ್ಞನೂ ಸರ್ವಶಕ್ತನೂ ಆಗಿರುವವನು ಪರಮಾತ್ಮನೊಬ್ಬನೇ ಸರಿ. ಅವನನ್ನೇ ಕುರಿತು ಇಲ್ಲಿ 'ಎಲೈ ದೇವನೆ, ಜಗತ್ತೆಲ್ಲವೂ ನಿನ್ನಿಂದಲೇ ಹುಟ್ಟಿರುತ್ತದೆ' ಎಂದು ವರ್ಣಿಸಲಾಗಿದೆ.

ಇನ್ನು ಸ್ಥಿತಿಕಾಲದಲ್ಲಿಯೂ ಈ ಜಗತ್ತು ತಾನು ಸ್ವತಂತ್ರವಾಗಿರುವದೇ ಇಲ್ಲ. ಹೇಗೆ ಮಣ್ಣು ಮಡಕೆಯಾಗಿ ತೋರಿಕೊಂಡಮೇಲೂ ಅದು ಮಣ್ಣಿನ ಹಂಗಿಲ್ಲದೆ ಸ್ವತಂತ್ರವಾಗಿರುವದಿಲ್ಲವೋ, ಮಣ್ಣಿಗಿಂತ ಬೇರೊಂದು ಎರಡನೆಯ ವಸ್ತುವಾಗಿ ಇಲ್ಲವೋ ಹಾಗೆಯೇ ಇಡಿಯ ಬ್ರಹ್ಮಾಂಡವೆಲ್ಲ ತಾನು ಇದ್ದುಕೊಂಡಿರುವಾಗಲೂ ಬ್ರಹ್ಮಕ್ಕಿಂತ ಬೇರೆಯಾಗಿಲ್ಲವೇ ಇಲ್ಲ. ಆದ್ದರಿಂದಲೇ ಕಾರ್ಯ- ಎಂಬಿದು ಸ್ವತಂತ್ರವಸ್ತುವಲ್ಲ. ಕೇವಲ ಶಬ್ದಮಾತ್ರವೇ- ಎಂದು ಶ್ರುತಿಯಲ್ಲಿ ತಿಳಿಸಿರುತ್ತದೆ. ಹಾಗಾದರೆ ಕಾರಣಾವಸ್ಥೆಗೂ ಕಾರ್ಯಾವಸ್ಥೆಗೂ ಏನೂ ವ್ಯತ್ಯಾಸವೇ ಇಲ್ಲವಾದರೆ ಕಾರ್ಯಕಾರಣ- ಎಂಬ ಭೇದವಾದರೂ ಹೇಗೆ ಉಂಟಾಯಿತು? ಮಣ್ಣು ಮುದ್ದೆಯೇ ಆಗಿ ಕೂತಿದ್ದರೆ ಅದರಿಂದ ನೀರು ತರಲಾದೀತೆ? ಅದು ಮಡಕೆಯಾದಾಗ ಮಾತ್ರವೇ ಅಲ್ಲವೆ- ವ್ಯವಹಾರಕ್ಕೆ ಎಟಕುವದು? ಎಂದು ಕೇಳಿದರೆ ಉತ್ತರವೇನೆಂದರೆ: ನಿಜ, ಮಣ್ಣೇ ಬೇರೊಂದು ರೂಪಾಂತರವನ್ನು ಹೊಂದುತ್ತದೆಯೇ ಹೊರತು ಹೊಸ ದ್ರವ್ಯವೇನೂ ಹುಟ್ಟುವದಿಲ್ಲ. ಹೆಸರು ಮಾತ್ರ ಬದಲಾಗುತ್ತದೆ. ಇದನ್ನೇ ಶ್ರುತಿಯಲ್ಲಿ 'ನಾಮಧೇಯಂ' ಎಂದು ಕರೆದಿದೆ. ಆದ್ದರಿಂದ ಮಡಕೆ- ಎನಿಸಿಕೊಂಡಾಗಲೂ ಅದು ಮಣ್ಣನ್ನು ಬಿಟ್ಟು

ಬೇರೇನೂ ಅಲ್ಲದಿರುವಂತೆ ಜಗತ್ತು ಕೂಡ ಕಾರ್ಯವಾಗಿದ್ದರೂ ಸ್ಥಿತಿಕಾಲದಲ್ಲಿಯೂ ಬ್ರಹ್ಮಕ್ಕಿಂತ ಬೇರೆಯಾಗಿರುವದೇ ಇಲ್ಲ. ಇದೇ ರೀತಿ ಪ್ರಲಯಕಾಲದಲ್ಲಿಯೂ ಜಗತ್ತು ಬ್ರಹ್ಮವಾಗಿಯೇ ಉಳಿದುಕೊಳ್ಳುತ್ತದೆ. ಮಡಕೆಯು ಒಡೆದುಹೋದರೆ ಮಣ್ಣೇ ಆಗುವಂತೆ, ಒಡವೆಯನ್ನು ಕರಗಿಸಿದರೆ ಮತ್ತೆ ಚಿನ್ನವೇ ಆಗುವಂತೆ ಪ್ರಪಂಚವೂ ತನ್ನ ನಾಮರೂಪಗಳನ್ನು ಕಳೆದುಕೊಂಡಾಗ ಬ್ರಹ್ಮವಾಗಿಯೇ ಉಳಿಯುತ್ತದೆ. ಹೀಗೆ ಉತ್ಪತ್ತಿ–ಸ್ಥಿತಿ–ಲಯಕಾಲಗಳಲ್ಲಿ ಬ್ರಹ್ಮಕ್ಕಿಂತ ಅಭಿನ್ನವಾದ ಪ್ರಪಂಚವು ತಾನು ತೋರಿಕೊಳ್ಳುತ್ತಿರುವಾಗಲೂ ಬ್ರಹ್ಮವಾಗಿಯೇ ಇರುತ್ತದೆಯಾಗಿ ಬ್ರಹ್ಮವನ್ನೇ ಅಜ್ಞಾನಿಗಳು ಪ್ರಪಂಚವೆಂದು ವ್ಯವಹರಿಸುತ್ತಾರೆ –ಎಂದಾಯಿತು. ಒಂದು ವೇಳೆ ಸೃಷ್ಟಿಯನ್ನು ಅವಲಂಬಿಸಿರುವ ಸೃಷ್ಟಿವಾದಿಗಳು ಪ್ರಪಂಚವು ಬೇರೆಯಾಗಿ ಇದೆಯೆಂದು ನಂಬಿದರೂ ಆಗಲೂ ಅದು ಬ್ರಹ್ಮದಿಂದಲೇ ಉಂಟಾಗಿ ಬ್ರಹ್ಮದಲ್ಲಿಯೇ ಇದ್ದು ಬ್ರಹ್ಮದಲ್ಲಿಯೇ ಕೊನೆಗಾಣುವದು. ಇದನ್ನೇ ಶ್ರುತಿಯಲ್ಲಿ 'ಸರ್ವಂ ಜಗದಿದಂ .....' ಎಂದು ಮುಂತಾಗಿ ವರ್ಣಿಸಿದೆ.

ಈಗ ಐದನೆಯ ಮಂತ್ರದ ಉಳಿದ ಭಾಗವನ್ನು ವಿಚಾರಮಾಡೋಣ. ಈ ಮಂತ್ರದಲ್ಲಿ ಹಿಂದೆ ಹೇಳಿದಂತೆ ಜಗತ್ತಿನ ಅತ್ಯಂತ ಪ್ರಧಾನವಾದ ಭಾಗವಾದ ಹಾಗೂ ಎಲ್ಲಾ ಪ್ರಾಣಿಗಳಿಗೂ ಜೀವನಾಶ್ರಯವಾದ ಭೂಮಿ, ನೀರು, ಅಗ್ನಿ, ವಾಯು, ಆಕಾಶ– ಎಂಬೀ ಪಂಚಮಹಾಭೂತಗಳನ್ನು ಗಣಪತಿಯೆಂದೇ ಸ್ತುತಿಸಲಾಗಿದೆ. ಶ್ರುತಿಗಳಲ್ಲಿ ಭಗವಂತನು ತಾನು ಸೃಷ್ಟಿಸಿದ ವಸ್ತುಗಳಲ್ಲೆಲ್ಲ ತಾನೇ ಪ್ರವೇಶಿಸಿದನು– ಎಂದು ಸ್ಪಷ್ಟವಾಗಿ ಹೇಳಿದೆ. ಅದರಂತೆ ಎಲ್ಲಾ ವಸ್ತುವೂ ಭಗವಂತನ ವ್ಯಾಪ್ತಿಯಿಂದ ಕೂಡಿವೆ. ಅವನಿಗಿಂತ ಹೊರತಾಗಿಲ್ಲ. ಮಿಠಾಯಿಯನ್ನು ಸಕ್ಕರೆ– ಎಂದು ಕರೆದರೆ ಹೇಗೆ ತಪ್ಪಾಗುವದಿಲ್ಲವೋ ಹಾಗೆಯೇ ಜಗತ್ತನ್ನೆಲ್ಲ ಬ್ರಹ್ಮಮಯವೆಂದು ಹೇಳಿದರೂ ತಪ್ಪಲ್ಲ. ಈ ಅಭಿಪ್ರಾಯದಂತೆ ಭಗವಂತನಾದ ಗಣಪತಿಯನ್ನೇ ಇಲ್ಲಿ 'ಭೂಮಿಯು ನೀನೇ' – ಇತ್ಯಾದಿಯಾಗಿ ಕರೆಯಲಾಗಿದೆ. ಯಾವನು ಜಗತ್ತನ್ನೆಲ್ಲ ತನ್ನ ಇಷ್ಟದೇವತೆಯ ಸ್ವರೂಪವಾಗಿಯೇ ಕಂಡು ಕೊಳ್ಳುವನೋ ಅವನೇ ಉಪಾಸಕರಲ್ಲಿ ಶ್ರೇಷ್ಠನು. ಅಂಥವನಿಗೆ ಪ್ರತಿಯೊಂದು ವಸ್ತುವೂ ತನ್ನ ದೇವರೆಂದೇ ಕಂಡುಬರುತ್ತದೆ. ಹೇಗೆ ಗೋಪಿಯರ ಮನಸ್ಸಿನಲ್ಲಿ ಪೂರ್ಣವಾಗಿ ಕೃಷ್ಣನೇ ಇದ್ದುದರಿಂದ ಅವರಿಗೆ ಗಿಡ–ಮರ–ದನ–ಕರುಗಳೆಲ್ಲವೂ

ಕೃಷ್ಣನಾಗಿಯೇ ಕಂಡುಬಂದವೋ ಮತ್ತು ಸೀತಾದೇವಿಗೂ ಅಶೋಕವನವೆಲ್ಲವೂ ರಾಮನಾಗಿಯೇ ಕಂಡುಬಂದಿತೋ ಹಾಗೆ ಭಕ್ತನಿಗೆ ತನ್ನತನ್ನ ಉಪಾಸ್ಯದೇವತೆಯೇ ಜಗತ್ತಾಗಿ ಹರಡಿದೆ –ಎಂಬ ಭಾವನೆಯಿರುತ್ತದೆ. ಅದನ್ನೇ ಇಲ್ಲಿ ಸ್ಪಷ್ಟಗೊಳಿಸಲಾಗಿದೆ.

ಇನ್ನು ಪ್ರಪಂಚದಲ್ಲಿ ವಾಕ್(ಶಬ್ದ) ಎಂಬಿದು ವ್ಯವಹಾರದ ತಿರುಳಾಗಿರುತ್ತದೆ. ಇದನ್ನು ಪರಾ, ಪಶ್ಯಂತೀ, ಮಧ್ಯಮಾ, ವೈಖರೀ– ಎಂದು ನಾಲ್ಕು ವಿಭಾಗಮಾಡಿದ್ದಾರೆ. ಮೊದಲನೆಯ ಮೂರು ವಾಗ್ದೇವಿಯ ಉಪಾಸಕರಿಗೆ ಮಾತ್ರ ಗೋಚರವಾಗುವ ರೂಪಗಳು. ಅವುಗಳಲ್ಲಿ ಪರಾ– ಎಂಬಿದೇ ಬ್ರಹ್ಮದ ಪರಮಪದವಿಯು. ನಾಲ್ಕನೆಯದಾದ ವೈಖರೀ– ಎಂಬಿದು ಮನುಷ್ಯರು ಬಳಸುವ ಭಾಷಾರೂಪವಾದ ಶಬ್ದವಾಗಿದೆ. ಇದರಲ್ಲಿ ಬರವಣಿಗೆಭಾಷೆ, ಆಡುಭಾಷೆ – ಎಲ್ಲಾ ಸೇರಿವೆ. ಹೀಗೆ ಭಾಷಾಮಯವಾದ ಸಾಹಿತ್ಯವೆಲ್ಲವೂ ವೇದಗಳಸಮೇತ ಭಗವಂತನೇ ಆಗಿವೆ. ನಾನು ಬಹಳ ಹಿಂದೆ 'ಶಾರದೆಯ ಸಂಸಾರ' ಎಂಬ ಒಂದು ಪುಟ್ಟ ಪುಸ್ತಕವನ್ನು ನೋಡಿದ್ದೆನು. ಅದರಲ್ಲಿ ಜಗತ್ತಿನಲ್ಲಿ ಸುಮಾರು ಎರಡುನೂರಕ್ಕೂ ಮಿಗಿಲಾದ ಭಾಷೆಗಳಿವೆ– ಎಂದಿತ್ತು. ಇನ್ನು ಒಂದೊಂದು ಭಾಷೆಯಲ್ಲಿಯೂ ಸಾಹಿತ್ಯ, ಕಾವ್ಯ, ನಾಟಕಾದಿಗಳೂ ಭೌತಿಕ, ಆಧ್ಯಾತ್ಮಿಕವಿಜ್ಞಾನವೂ ಇದ್ದುಕೊಂಡಿವೆಯಷ್ಟೆ. ಇದೇ ಶಾರದೆಯ ಸಂಸಾರವು. ಇದರ ಉದ್ದಳತೆಗಳನ್ನು ಕಂಡವರಿಲ್ಲ. ಈ ವಾಙ್ಮಯಪ್ರಪಂಚಕ್ಕೆಲ್ಲ ಅಕ್ಷರಜ್ಞಾನವೇ ಮೂಲವು. ಆದರೆ ವಾಕ್ ಎಂಬಿದು ವರ್ಣಾತ್ಮಕವು ಮಾತ್ರವೇ ಅಲ್ಲದೆ ಧ್ವನ್ಯಾತ್ಮಕವಾಗಿಯೂ ಇದೆ. ಮನುಷ್ಯನನ್ನು ಬಿಟ್ಟರೆ ಪ್ರಾಣಿಗಳಿಗೆಲ್ಲ ಧ್ವನಿಯೇ ವ್ಯವಹಾರಮಾಧ್ಯಮವಾಗಿದೆ. ಅದಕ್ಕನುಗುಣವಾಗಿಯೇ ಸಂಗೀತದ ಸಪ್ತಸ್ವರಗಳು ಹುಟ್ಟಿವೆ. ಅಚೇತನವಾದ ವೀಣೆ, ಪಿಟೀಲು, ಕೊಳಲು, ನಾಗಸ್ವರ, ಡೋಲು, ಮೃದಂಗ– ಎಲ್ಲಾ ಧ್ವನಿ ಶಾರದೆಯ ವಿಭೂತಿಗಳೇ ಆಗಿವೆ. ಹೀಗೆ ನಾದಾತ್ಮಕನು ಪರಮಾತ್ಮನು. ಇಂಥ ಭಗವಂತನನ್ನೇ ಗಣಪತಿಯೆಂದು ಇಲ್ಲಿ ಸ್ತುತಿಸಿದೆ. ನಾವೆಲ್ಲರೂ ಸರ್ವವ್ಯಾಪಕನಾದ ಈ ಗಣಪತಿಯನ್ನು ಕಂಡುಕೊಳ್ಳೋಣ.

*****

## ಸರ್ವದೇವಾತ್ಮಕನಾದ ಗಣಪತಿ

ಓಂ ॥ ತ್ವಂ ಗುಣತ್ರಯಾತೀತಃ । ತ್ವಂ ದೇಹತ್ರಯಾತೀತಃ ।
ತ್ವಂ ಕಾಲತ್ರಯಾತೀತಃ । ತ್ವಂ ಮೂಲಾಧಾರೇಸ್ಥಿತೋऽಸಿ
ನಿತ್ಯಮ್ । ತ್ವಂ ಶಕ್ತಿತ್ರಯಾತ್ಮಕಃ । ತ್ವಾಂ ಯೋಗಿನೋ
ಧ್ಯಾಯನ್ತಿ ನಿತ್ಯಮ್ । ತ್ವಂ ಬ್ರಹ್ಮಾ ತ್ವಂ ವಿಷ್ಣುಸ್ತ್ವಂ ರುದ್ರಸ್ತ್ವ
ಮಿಂದ್ರಸ್ತ್ವಮಗ್ನಿಸ್ತ್ವಂ ವಾಯುಸ್ತ್ವಂ ಸೂರ್ಯಸ್ತ್ವಂ
ಚಂದ್ರಮಾಸ್ತ್ವಂ ಬ್ರಹ್ಮ ಭೂರ್ಭುವಸ್ಸುವರೋಮ್ ॥

– ಗಣಪತ್ಯುಪನಿಷತ್ತು 6

ಭಾವಾರ್ಥ : ನೀನು ಮೂರು ಗುಣಗಳನ್ನು ಮೀರಿದವನು. ಮೂರು ದೇಹಗಳನ್ನೂ ಮೀರಿದವನು, ನೀನು ಮೂರು ಕಾಲಗಳನ್ನು ಮೀರಿದವನು. ನೀನು ಮೂಲಾಧಾರದಲ್ಲಿ ನಿಂತಿದ್ದೀಯೆ. ನೀನು ಮೂರು ಶಕ್ತಿಗಳನ್ನು ಹೊಂದಿದವನು. ನಿನ್ನನ್ನು ಯೋಗಿಗಳು ನಿತ್ಯವೂ ಧ್ಯಾನಮಾಡುತ್ತಾರೆ. ನೀನೇ ಬ್ರಹ್ಮನು, ವಿಷ್ಣುವು, ರುದ್ರನು, ಇಂದ್ರನು, ಅಗ್ನಿಯು, ವಾಯುವು, ಸೂರ್ಯನು, ಚಂದ್ರನು, ಬ್ರಹ್ಮವು, ಭೂಃ ಭುವಃ ಸುವಃ– (ಎಂಬ ವ್ಯಾಹೃತಿಗಳೂ) ಓಂಕಾರವೂ ನೀನೇ ಆಗಿರುವೆ.

[ಗಣಪತಿ– ಎಂಬ ಹೆಸರಿನ ಪರಮಾತ್ಮನನ್ನು ಇಲ್ಲಿ ಸ್ತುತಿಸಿದೆ. ಭಗವಂತನು ತಾನೊಬ್ಬನೇ ಆಗಿದ್ದು ದೇವತೆಗಳು, ಪಿತೃಗಳು, ಋಷಿಗಳೇ ಮುಂತಾದ ಜೀವರುಗಳಾಗಿಯೂ ವೇದೇತಿಹಾಸಪುರಾಣಾದಿವಿದ್ಯಾರೂಪನಾಗಿಯೂ ವ್ಯಾಹೃತಿಗಳಾಗಿಯೂ ಪ್ರಣವಸ್ವರೂಪನಾಗಿಯೂ ತೋರಿಕೊಂಡಿರುತ್ತಾನೆ- ಎಂದಭಿಪ್ರಾಯ.]

## ಗಣೇಶನ ವಿಭೂತಿಗಳು

ಗಣಪತ್ಯುಪನಿಷತ್ತಿನ ಆರನೆಯ ಮಂತ್ರವನ್ನು ಈಗ ವಿಚಾರಮಾಡ ಬೇಕಾಗಿದೆ. ಈ ಮಂತ್ರಭಾಗದಲ್ಲಿ ಮೊದಲು ಗಣಪತಿಯನ್ನು ಹೀಗೆ ಸ್ತುತಿಸಿದೆ : ಗಣೇಶನು ಮೂರು ಗುಣಗಳನ್ನೂ ಮೀರಿದವನು– ಎಂದು ಮೊದಲು ಹೊಗಳಿದೆ. ಸತ್ತ್ವ, ರಜಸ್ಸು, ತಮಸ್ಸು– ಇವೇ ಮೂರು ಪ್ರಕೃತಿಗುಣಗಳು. ಭಗವಂತನೇ ಈ

ಪ್ರಕೃತಿಯನ್ನು ತನ್ನ ಶಕ್ತಿಯಿಂದ ಉಂಟುಮಾಡುತ್ತಾನಾದರೂ ಈ ಪ್ರಕೃತಿಗುಣಗಳನ್ನು ತಾನು ಮೀರಿದವನಾಗಿದ್ದಾನೆ. ಆದ್ದರಿಂದಲೇ ಈತನು ನಿತ್ಯಶುದ್ಧಬುದ್ಧಮುಕ್ತ ಸ್ವಭಾವನೆನಿಸಿರುತ್ತಾನೆ. ಗುಣಗಳಿಂದಾಗಿರುವ ಸಂಸಾರಬಂಧನ, ಈತನಿಗೆ ಇರುವದಿಲ್ಲ. ಯಾರು ಈ ಭಗವಂತನನ್ನು ಕಂಡುಕೊಳ್ಳುವರೋ ಅವರು ಕೂಡ ಗುಣಾತೀತರಾಗುವರು. ಮೂರು ಲೋಕಗಳಲ್ಲಿ ಹುಡುಕಿದರೂ ಗುಣಗಳಿಂದ ಮುಕ್ತವಾದ ವಸ್ತುವೇ ಇಲ್ಲ– ಎಂದು ಗೀತೆಯಲ್ಲಿ ತಿಳಿಸಿದೆ. ಆದರೆ ಭಗವಂತನೊಬ್ಬನೇ ಗುಣಾತೀತನೆನಿಸಿರುತ್ತಾನೆ. ಹಾಗೆಯೇ ಅವನು ಭೂತ, ಭವಿಷ್ಯತ್, ವರ್ತಮಾನಗಳೆಂಬ ಕಾಲವನ್ನೂ ಮೀರಿರುತ್ತಾನೆ. ಈ ದೇವನು ಹಿಂದೆ ಇರಲಿಲ್ಲ ಎಂದಾಗಲಿ, ಈಗ ಇಲ್ಲ ಎಂದಾಗಲಿ, ಮುಂದೆ ಇರಲಾರನು– ಎಂದಾಗಲಿ ಹೇಳಲು ಬರುವದೇ ಇಲ್ಲ. ಏಕೆಂದರೆ ಹಾಗೆ ಹೇಳುವವನಾದರೂ ಇದ್ದೇ ಇರಬೇಕಾಗುತ್ತದೆ. ಅವನೇ ಪರಬ್ರಹ್ಮವು. ಹೀಗೆ ಕಾಲಾತೀತನೂ ಕಾಲಕ್ಕೇ ಕಾಲನೂ ಆದ ಗಣಪತಿಯು ಪರಬ್ರಹ್ಮವೇ ಆಗಿರಬೇಕಲ್ಲವೆ? ಇನ್ನು ಈ ಬ್ರಹ್ಮನು ದೇಹತ್ರಯಾತೀತನಾಗಿರುತ್ತಾನೆ. ಸ್ಥೂಲ, ಸೂಕ್ಷ್ಮ, ಕಾರಣ– ಎಂದು ಮೂರು ದೇಹಗಳಿವೆ. ಇವು ಜೀವರುಗಳಿಗೆ ಅವರ ಕರ್ಮನಿಮಿತ್ತವಾಗಿ ಪ್ರಾಪ್ತವಾಗಿವೆ. ಈ ದೇಹಗಳೇ ತಾವೆಂದು ತಿಳಿದಿರುವ ಜೀವರು ದೇಹಬಂಧದಿಂದ ಕೂಡಿದ್ದಾರೆ. ಆದರೆ ಗಣಪತಿಯು ದೇಹರಹಿತನು. ಅವನಿಗೆ ಕಾರ್ಯ, ಕಾರಣ– ಎಂಬ ಯಾವ ಶರೀರವೂ ಇಲ್ಲ. ಅವನು ಅಶರೀರಿಯು. ಆದ್ದರಿಂದಲೇ ಅವನಿಗೆ ಜನ್ಮಜರಾಮರಣಗಳಿರುವದಿಲ್ಲ. ಹೀಗೆ ದೇಹತ್ರಯಗಳನ್ನೂ ಕಳಚಿಹಾಕಿರುವ ಈ ಗಣಪತಿಯು ಎಂದೆಂದಿಗೂ ಮುಕ್ತನೆನಿಸಿರುತ್ತಾನೆ. ಆದರೂ ಶರೀರಗಳಲ್ಲೆಲ್ಲ ಪ್ರವೇಶಿಸಿ ವ್ಯಾಪಿಸಿಕೊಂಡು ಎಲ್ಲ ಜೀವರ ಆತ್ಮನೆನಿಸಿದಾನೆ. ಇವನನ್ನು ಅರಿತುಕೊಳ್ಳುವದೇ ಮುಕ್ತಿಯೆನಿಸುವದು.

ಈಗ ಗಣಪತಿಯನ್ನು ಮೂಲಾಧಾರನಿವಾಸಿಯೆಂದು ವರ್ಣಿಸಲಾಗುತ್ತದೆ. ಯೋಗಶಾಸ್ತ್ರಪ್ರಸಿದ್ಧವಾದ ಆರು ಚಕ್ರಗಳಲ್ಲಿ ಮೂಲಾಧಾರವು ಮೊದಲನೆಯದಾಗಿದೆ. ಇದು ಆಸನದಲ್ಲಿದೆ. ಗಣಪತಿಯನ್ನು ಈ ಮೂಲಾಧಾರಚಕ್ರಾಭಿಮಾನಿಯಾದ ದೇವತೆಯೆಂದು ಯೋಗಿಗಳು ಭಾವಿಸುತ್ತಾರೆ. ನಾವೆಲ್ಲ ಭೂಮಿಯಮೇಲೆ ವಾಸಮಾಡುತ್ತೇವೆ. ಆದ್ದರಿಂದ ಭೂಮಿಯೇ ನಮಗೆ ಆಧಾರವೆನಿಸುತ್ತದೆ.

ಯೋಗಶಾಸ್ತ್ರದವರು ತಿಳಿಸುವ ಮೂಲಾಧಾರಚಕ್ರವು ಭೂಮಿತತ್ತ್ವವೆಂದು ಹೇಳಬಹುದು. ಗಣಪತಿಯು ಭೂಸಂಬಂಧವಾದ ದೇವತೆಯೆಂದೂ ಇದರಿಂದ ಸಿದ್ಧವಾಗಲಿದೆ. ಆದ್ದರಿಂದಲೇ ಗಣಪತಿಯನ್ನು ಮಣ್ಣಿನಿಂದ ಮಾಡಿ ಪೂಜಿಸುವದು ವಾಡಿಕೆಯಾಗಿದೆ. ಹೀಗೆ ಗಣಪತಿಯು ಮೂಲಾಧಾರಕ್ಷೇತ್ರದಲ್ಲಿ ನೆಲಸಿ ಸಮಸ್ತ ಪ್ರಾಣಿಗಳಿಗೂ ಆಶ್ರಯನಾಗಿರುತ್ತಾನೆ. ಇನ್ನು ಗಣಪತಿಯು ಶಕ್ತಿತ್ರಯಾತ್ಮಕನು. ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ– ಎಂಬಿವೇ ಈ ಮೂರು ಶಕ್ತಿಗಳು. ಇವು ಜಗತ್ತಿನಲ್ಲಿ ವ್ಯವಹಾರಕ್ಕೆ ಬೇಕೇಬೇಕಾಗಿರುತ್ತವೆ. ಈ ಮೂರು ಶಕ್ತಿಗಳೂ ಗಣಪತಿಯ ಸ್ವರೂಪವೇ ಆಗಿವೆ. ಆದ್ದರಿಂದ ಯೋಗಿಗಳು ಈ ಗಣಪತಿಯೆಂಬ ತತ್ತ್ವವನ್ನು ತಮ್ಮೊಳಗೇ ಧ್ಯಾನಮಾಡುತ್ತಾರೆ– ಎಂದು ಉಪನಿಷತ್ತಿನಲ್ಲಿ ವರ್ಣಿಸಿದೆ.

ಈ ಶಕ್ತಿತ್ರಯಗಳ ವಿಚಾರವಾಗಿ ಚಿಂತನೆಮಾಡತಕ್ಕದಿದೆ. ಭಗವಂತನ ಶಕ್ತಿಯೆಂದರೇನು? ಅದು ಭಗವಂತನಿಗಿಂತ ಬೇರೆಯೊ? ಅಲ್ಲವೊ? ಎಂದು ಕೆಲವರು ಪ್ರಶ್ನಿಸುತ್ತಾರೆ. ಆದರೆ ಆ ಶಕ್ತಿಯು ಸೂರ್ಯನ ಬಿಸಿಲು ಎಂದಂತೆ ಭಗವಂತನೇ ಆಗಿದೆ. ಅವನಿಗಿಂತ ಬೇರೆಯಲ್ಲ. ಆದರೂ ವ್ಯವಹಾರದಲ್ಲಿ– ಹೇಗೆ ಮನುಷ್ಯನ ನೆರಳನ್ನು– ಅದು ಸ್ವತಂತ್ರವಸ್ತುವಲ್ಲದಿದ್ದರೂ ಬೇರೆಯೆಂದು ವ್ಯವಹರಿಸುವೆವೋ ಹಾಗೆಯೇ ಪರಮಾತ್ಮನ ಶಕ್ತಿಯನ್ನೂ ಪ್ರಕೃತಿಯೆಂದೂ ಮಾಯೆಯೆಂದೂ ಕರೆದು ವ್ಯವಹರಿಸುವುದುಂಟು. ಸೃಷ್ಟಿಕಾಲಕ್ಕೆ ಈ ಶಕ್ತಿಯು ಅವಶ್ಯವಾಗುತ್ತದೆ. ಇದು ನಾನಾರೂಪವಾಗಿ ತೋರಿಕೊಂಡರೂ ಮೂಲತಃ ತಾನೊಂದೇ ಆಗಿದೆ. ಹಾಗೂ ಪರಮಾತ್ಮನಿಗಿಂತ ಅನನ್ಯವಾಗಿದ್ದು ಅವನಿಂದ ಬೇರ್ಪಡಿಸಲು ಬರುವದಿಲ್ಲ. ತೋರಿಕೊಳ್ಳುವಾಗ ಮಾತ್ರ ನಾನಾರೂಪವಾಗಿ ಹರಡಿಕೊಳ್ಳುತ್ತದೆ. ಇದೇ ಅಜ್ಞಾನಿಗಳ ದೃಷ್ಟಿಯಿಂದ ಮಾಯೆಯೆಂದೂ ಜ್ಞಾನಿಗಳ ದೃಷ್ಟಿಯಿಂದ ಮಹಿಮೆಯೆಂದೂ ಕರೆಯಲ್ಪಡುತ್ತದೆ. ಇಂಥ ಮಾಯಾಶಕ್ತಿಯಿಂದ ಕೂಡಿದ ಪರಮಾತ್ಮನನ್ನು 'ಮಾಯಾವಿ' ಎಂದರೂ ತಪ್ಪಿಲ್ಲ. ಅಂತೂ ಗಣಪತಿಯೆಂಬ ಪರಬ್ರಹ್ಮವು ಸಕಲಶಕ್ತಿಸಂಪನ್ನವಾಗಿದ್ದರೂ ತಾನು ಸ್ವತಃ ಎಲ್ಲಾ ಶಕ್ತಿಗಳನ್ನೂ ತನ್ನಲ್ಲಿಯೇ ಅಡಗಿಸಿಕೊಂಡು ಎಲ್ಲಕ್ಕಿಂತಲೂ ಮಿಗಿಲಾದ್ದಾಗಿ ಪರಾಶಕ್ತಿಯೆನಿಸಿರುತ್ತದೆ.

ಈಗ ಗಣಪತಿಯನ್ನು ಸರ್ವದೇವತಾತ್ಮಕನೆಂದು ವರ್ಣಿಸಲಾಗುವದು. ಮೊದಲನೆಯದಾಗಿ 'ನೀನು ಬ್ರಹ್ಮನು' ಎಂದು ತಿಳಿಸಲಾಗಿದೆ. ಬ್ರಹ್ಮನೆಂದರೆ

ಸೃಷ್ಟಿಕರ್ತನು. ರಜೋಗುಣಪ್ರಧಾನನು. ಇವನನ್ನು ಹಿರಣ್ಯಗರ್ಭನೆಂದೂ ಕರೆಯುತ್ತಾರೆ. ಈತನೇ ವಿಶ್ವದ ಪ್ರಪ್ರಥಮಪ್ರಜೆಯು. ಈತನು ಹುಟ್ಟುವಾಗಲೇ ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯಗಳೆಂಬ ನಾಲ್ಕು ಗುಣಗಳು ಸಿದ್ಧವಾಗಿರುತ್ತವೆ. ಈತನೇ ಒಂದು ಕಲ್ಪಕಾಲದವರೆಗೂ ಪ್ರಜಾಪತಿಯೆನಿಸಿ ಬಾಳುತ್ತಾನೆ. ಈತನು ಮನಸ್ಸಿನಲ್ಲಿ ಚಿಂತಿಸಿದ್ದೆಲ್ಲ ಸಿದ್ಧವಾಗಿಬಿಡುತ್ತವೆಯಾಗಿ ಮನೋಮಯನೆನಿಸಿರುತ್ತಾನೆ. ಹದಿನಾಲ್ಕು ಲೋಕಗಳೂ ಇವನಲ್ಲಿ ಅಡಗಿವೆ. ಇವನು ಪರಮಾತ್ಮನ ಮಾನಸಪುತ್ರನೆನಿಸಿರುತ್ತಾನೆ. ಇಂಥ ಮಹಾಮಹಿಮನಾದ ಬ್ರಹ್ಮನೆಂದರೆ ಗಣಪತಿಯೇ– ಎಂಬರ್ಥದಲ್ಲಿ ನೀನೇ ಬ್ರಹ್ಮನು– ಎಂದು ಸ್ತುತಿಸಿದೆ. ವಿಷ್ಣು ಎಂದರೆ ಸರ್ವವ್ಯಾಪಕನು ಎಂದರ್ಥ. ವಿಷ್ಣುವನ್ನು ಜಗತ್ತಿನ ಸ್ಥಿತಿಕಾರಕನೆಂದೂ ಸತ್ತ್ವಗುಣಸಂಪನ್ನನೆಂದೂ ತಿಳಿಸುತ್ತಾರೆ. ಆದ್ದರಿಂದ ವಿಷ್ಣುವು ಶಾಂತಮೂರ್ತಿಯು. ಅಪರೂಪವಾಗಿ ಕೋಪಗೊಳ್ಳುವದೂ ಉಂಟು. ಅದುಕೂಡ ಜಗತ್ ಕಲ್ಯಾಣಕ್ಕೇ ಕಾರಣವಾಗುತ್ತದೆ. ಈತನು ಆಗಾಗ್ಗೆ ಅವತಾರಗಳನ್ನೆತ್ತಿ ದುಷ್ಟನಿಗ್ರಹ, ಶಿಷ್ಟಪರಿಪಾಲನೆಯನ್ನು ಕೈಗೊಳ್ಳುವನು. ಭಕ್ತರನ್ನು ಅನುಗ್ರಹಿಸುತ್ತಾನೆ. ಪ್ರಪಂಚದ ಆಗುಹೋಗುಗಳನ್ನೆಲ್ಲ ನಿಯಂತ್ರಿಸುತ್ತಾನೆ. ದೇವತೆಗಳಲ್ಲಿ ಇವನನ್ನು ಹಿರಿಯನು (ಪರಮ) ಎನ್ನುವರು. ಅನಂತರ ರುದ್ರನೂ ನೀನೇ ಎಂದು ಸ್ತುತಿಸಲಾಗಿದೆ. ರುದ್ರನು ತಮೋಗುಣಪ್ರಧಾನನಾದ ಸಂಹಾರಮೂರ್ತಿಯು. ಪ್ರಲಯಕಾಲದಲ್ಲಿ ಎಲ್ಲಾ ಸ್ಥಾವರಜಂಗಮರೂಪವಾದ ಜಗತ್ತನ್ನೂ ಸಂಹರಿಸುವವನಾಗಿದಾನೆ. ಇವನ ಕೋಪವು ಅಸಾಧಾರಣವಾದುದು. ರುದ್ರಾಧ್ಯಾಯದಲ್ಲಿ ಇವನ ಮಹಿಮೆ – ವಿಭೂತಿಗಳನ್ನು ವಿಸ್ತಾರವಾಗಿ ವರ್ಣಿಸಲಾಗಿದೆ. ಇನ್ನು ಈತನು ಭಕ್ತಸುಲಭನು, ಆಶುತೋಷನು. ಬೇಗನೆ ಭಕ್ತರಿಗೆ ಒಲಿಯುವವನಲ್ಲದೆ ಭಕ್ತರು ಕೇಳಿದ್ದನ್ನೆಲ್ಲ ಕೊಟ್ಟು ಬಿಡುವವನಾಗಿದಾನೆ. ಈತನು ಮಹಾಜ್ಞಾನಿ. ಪರಮ ವೈರಾಗ್ಯಶಿಖಾಮಣಿಯೂ ಹೌದು. ಇಂಥ ರುದ್ರನೂ ನೀನೇ– ಎಂದು ತಿಳಿಸಿದೆ. ಮುಂದುವರೆದು ನೀನೇ ಇಂದ್ರನು; ದೇವಲೋಕದೊಡೆಯನು– ಎಂದು ಸ್ತುತಿಸಿದೆ. ಇಂದ್ರನು ಸಕಲೈಶ್ವರ್ಯ ಸಂಪನ್ನನು. ಎಲ್ಲಾ ದೇವತೆಗಳಿಗೂ ರಾಜನೆನಿಸಿದಾನೆ. ಇವನು ಬ್ರಹ್ಮಜ್ಞಾನಿಯೂ ಹೌದು. ಒಂದೆರಡು ಬಾರಿ ಬ್ರಹ್ಮೋಪದೇಶವನ್ನೂ ಶಿಷ್ಯರಿಗೆ ಮಾಡಿರುತ್ತಾನೆ. ಇವನ ಐಶ್ವರ್ಯ, ಭಂಡಾರ, ಭೋಗಸಾಧನಗಳು ಪ್ರಸಿದ್ಧವಾದವುಗಳು. ಇಂಥ ಇಂದ್ರನೇ ನೀನು– ಎಂದು ಸ್ತುತಿಸಿದೆ.

ಈಗ ಶ್ರುತಿಯು ಮುಂದುವರೆದು ನೀನೇ ಅಗ್ನಿ, ವಾಯು, ಸೂರ್ಯ, ಚಂದ್ರ ಎಲ್ಲವೂ ಆಗಿರುವೆ– ಎಂದು ಗಣಪತಿಯನ್ನು ಸ್ತುತಿಸುತ್ತಿದೆ. ಅಗ್ನಿಯು ಪ್ರತ್ಯಕ್ಷದೇವತೆಯಾಗಿದ್ದು ನಮಗೆ ಪರಿಚಿತನೇ ಆಗಿದ್ದಾನೆ. ಆದರೆ ಜನಸಾಮಾನ್ಯರು ಬೆಂಕಿಯನ್ನು ಕೇವಲ ಜಡರೂಪವಾಗಿ ಮಾತ್ರ ಭಾವಿಸುತ್ತಾರೆ. ಆಸ್ತಿಕರು ಅದನ್ನು ಅಗ್ನಿದೇವತೆಯಾಗಿ ಕಂಡುಕೊಂಡಿದ್ದಾರೆ. ಈತನು ದೇವತೆಗಳಿಗೂ ಮನುಷ್ಯರಿಗೂ ನಡುವೆ ಇದ್ದು ದೇವತೆಗಳಿಗಾಗಿ ಕೊಡುವ ಹವಿಸ್ಸನ್ನು ಒಯ್ದು ತಲುಪಿಸುತ್ತಾನೆ. ಆದ್ದರಿಂದ 'ಹವ್ಯವಾಹ' ಎಂದೂ ಇವನನ್ನು ಕರೆಯುತ್ತಾರೆ. ಮತ್ತು ಈ ಆಧ್ಯಾತ್ಮಿಕವಾಗಿ ನಮ್ಮ ಉದರದಲ್ಲಿದ್ದು ತಿಂದ ಪದಾರ್ಥಗಳನ್ನೆಲ್ಲ ಜೀರ್ಣಮಾಡುತ್ತಾನೆ. ಆದ್ದರಿಂದ ವೈಶ್ವಾನರನೆಂದೂ ಹೆಸರಿದೆ. ಇಂಥ ಅಗ್ನಿಯ ರೂಪದಿಂದಿರುವವನೂ ಗಣಪತಿಯೇ ಆಗಿದಾನೆ. ಅನಂತರ ವಾಯುವೂ ಇವನೇ ಎಂದು ಹೊಗಳಿದೆ. ವಾಯು ಎಂದರೆ ಗಾಳಿಯು. ಬಹಳ ಬಲಿಷ್ಠನೂ ಯಾವಾಗಲೂ ಕ್ರಿಯಾಶೀಲನೂ ಆಗಿದ್ದು ಭೂಮ್ಯಂತರಿಕ್ಷಗಳನ್ನು ವ್ಯಾಪಿಸಿದಾನೆ. ಇಂಥ ವಾಯುವಿನ ರೂಪದಿಂದ ಇರುವವನು ಗಣಪತಿಯೇ– ಎಂದಭಿಪ್ರಾಯ. ಇನ್ನು ಸೂರ್ಯಚಂದ್ರರ ರೂಪದಿಂದಲೂ ಈ ಗಣಪತಿಯು ವಿರಾಜಮಾನನಾಗಿದ್ದಾನೆ. ಜಗತ್ತನ್ನೆಲ್ಲ ಬೆಳಗುವವನೂ ಪ್ರಾಣಿಗಳನ್ನೆಲ್ಲ ಪೋಷಿಸುವವನೂ ಸೂರ್ಯನು. ಸಸ್ಯಗಳಲ್ಲಿ ರಸವನ್ನುಂಟುಮಾಡಿ ವೃದ್ಧಿಗೊಳಿಸುವವನು ಚಂದ್ರನು. ಹಾಗೆಯೇ ಸೂರ್ಯಚಂದ್ರರ ಸಂಚಾರದಿಂದ ಕಾಲವನ್ನು ನಾವು ಗುರುತಿಸುತ್ತೇವೆ. ಹಗಲು–ರಾತ್ರಿಗಳು, ವಾರ, ಪಕ್ಷ, ಮಾಸ, ಋತು, ಸಂವತ್ಸರಗಳೆಲ್ಲ ಇವರಿಬ್ಬರ ಚಲನೆಯಿಂದಲೇ ಸಂಭವಿಸುತ್ತವೆ. ಹೀಗೆ ಕಾಲಾತ್ಮರಾದ ಸೂರ್ಯಚಂದ್ರರೂ ನೀನೇ ಎಂದು ಇಲ್ಲಿ ಸ್ತುತಿಸಲಾಗಿದೆ.

ಇನ್ನು ಬ್ರಹ್ಮವೆಂದು ಗಣಪತಿಯನ್ನು ಹೊಗಳಿರುವದನ್ನು ನೋಡೋಣ. ಇದು ಎಲ್ಲಾ ದೇವತೆಗಳಿಗೂ ಎಲ್ಲಾ ಜೀವರುಗಳಿಗೂ ಅನ್ವಯಿಸುತ್ತದೆ. ಹೇಗೆಂದರೆ ಪರಮಾರ್ಥದೃಷ್ಟಿಯಿಂದ ಎಲ್ಲರೂ ಬ್ರಹ್ಮಸ್ವರೂಪರೇ ಆಗಿದಾರೆ. ಅಥವಾ ಬ್ರಹ್ಮವೇ ಎಲ್ಲಾ ಜೀವರುಗಳು ಹಾಗೂ ಜಗದ್ರೂಪದಿಂದ ತೋರಿಕೊಂಡಿದೆ. 'ಬ್ರಹ್ಮೈವೇದಂ ಸರ್ವಮ್' ಎಂದು ಶ್ರುತಿಯೇ ಹೇಳುತ್ತಿದೆ. ಆದ್ದರಿಂದ ನಿಜವಾದ ಅರ್ಥದಲ್ಲಿ ಗಣಪತಿಯೆಂದರೆ ಪರಬ್ರಹ್ಮವೇ ಸರಿ. ಉಪಾಸಕರ ಸೌಕರ್ಯಕ್ಕಾಗಿ ಬ್ರಹ್ಮಕ್ಕೆ

ಗುಣನಾಮರೂಪಾಕಾರಗಳನ್ನು ಶ್ರುತಿಸ್ಮೃತಿಗಳಲ್ಲಿ ಅಳವಡಿಸಿ ಅದನ್ನು ಸರ್ವಜ್ಞ, ಸರ್ವಶಕ್ತನೆಂದೂ ಪ್ರತಿಪಾದಿಸಿರುವದರಿಂದ ಗಣಪತಿ ಎಂಬ ಹೆಸರಿನಿಂದ ಈವರೆಗೂ ನಾವು ಪರಬ್ರಹ್ಮವನ್ನೇ ವಿಚಾರಮಾಡಿದಂತಾಗಿದೆ. ಆದ್ದರಿಂದ ಉಪನಿಷತ್ತಿನಲ್ಲಿ ಗಣಪತಿಯನ್ನು ಎಲ್ಲಾ ದೇವತೆಗಳ ರೂಪದಿಂದಲೂ ಗುರುತಿಸಿ ಕಡೆಯಲ್ಲಿ ಅವನನ್ನು ಪರಬ್ರಹ್ಮನೆಂದೇ ತಿಳಿಸಿರುವದು ಸಮಂಜಸವೇ ಆಗಿದೆ. ಅನೇಕ ಸಾಧಕರು ಈಗ ಗಣಪತಿಯನ್ನು ಸಂತೋಷಗೊಳಿಸಿ ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳಲು ಪ್ರಯತ್ನವಾಡುತ್ತಿದ್ದಾರೆ. ಸಂಕಷ್ಟಚತುರ್ಥಿಪೂಜೆ, ಗಣಪತಿಹೋಮ, ಮಂತ್ರಜಪ, ವ್ರತನಿಯಮಗಳನ್ನೂ ಪಾಲಿಸುತ್ತಾರೆ. ಕಲಿಯುಗದಲ್ಲಿ ಚಂಡಿ, ವಿನಾಯಕರು ಕ್ಷಿಪ್ರವಾಗಿ ಫಲಪ್ರದರೆಂದೂ ಸ್ಮೃತಿವಾಕ್ಯವಿದೆ. ಇಂಥ ಭಕ್ತರ ಸಂಖ್ಯೆಯೂ ಈಚೆಗೆ ಬೆಳೆದಿದೆ. ಗಣಪತಿಯ ದೇವಾಲಯಗಳೂ ಹೊಸದಾಗಿ ಸ್ಥಾಪಿತವಾಗುತ್ತಿವೆ. ಆದರೆ ಉಪನಿಷತ್ ಪ್ರತಿಪಾದ್ಯನಾದ ಗಣಪತಿಯನ್ನು ಕಂಡುಕೊಳ್ಳುವ ಸಾಧಕರ ಸಂಖ್ಯೆ ಬೆಳೆಯಬೇಕು. ಅಲ್ಪತೃಪ್ತರಾಗಿ ಕೂಡಬಾರದು. ಹಾಗೆ ಗಣಪತಿಯು ಅನುಗ್ರಹಿಸಲೆಂದು ಬೇಡೋಣ.

*****

## ಗಣಪತಿಯ ಮೂಲಮಂತ್ರ

**ಓಂ ॥ ಗಣಾದಿಂ ಪೂರ್ವಮುಚ್ಚಾರ್ಯ ವರ್ಣಾದಿಂ ತದನಂತರಮ್।
ಅನುಸ್ವಾರಃ ಪರತರಃ । ಅರ್ಧೇಂದುಲಸಿತಮ್ । ತಾರೇಣ
ರುದ್ಧಮ್ । ಏತತ್ತವ ಮನುಸ್ವರೂಪಮ್ । ಗಕಾರಃ ಪೂರ್ವ
ರೂಪಮ್ । ಅಕಾರೋ ಮಧ್ಯಮರೂಪಮ್ । ಅನುಸ್ವಾರಶ್ಚಾಂತ್ಯ
ರೂಪಮ್ । ಬಿಂದುರುತ್ತರರೂಪಮ್ । ನಾದಃ ಸಂಧಾನಮ್ ।
ಸಗ್ಂಹಿತಾ ಸಂಧಿಃ । ಸೈಷಾ ಗಣೇಶವಿದ್ಯಾ । ಗಣಕ ಋಷಿಃ ।
ನಿಚೃದ್ಗಾಯತ್ರೀಛಂದಃ । ಶ್ರೀಮಹಾಗಣಪತಿರ್ದೇವತಾ ।
ಓಂ ಗಂ ಗಣಪತಯೇ ನಮಃ ॥ – ಗಣಪತ್ಯುಪನಿಷತ್ತು 7**

**ಭಾವಾರ್ಥ** : ಗ್ ಎಂಬ ಅಕ್ಷರವನ್ನು ಮೊದಲು, ಅನಂತರ ಅಕಾರ, ಆಮೇಲೆ ಅರ್ಧೇಂದುಲಸಿತವಾದ ಅನುಸ್ವಾರ– ಹೀಗೆ ಧ್ವನಿಯಿಂದ ನೆಲೆಗೊಂಡ 'ಗಂ' ಎಂಬಿದು ನಿನ್ನ ಸ್ವರೂಪವು. ಇದರಲ್ಲಿ ಗ್ ಎಂಬಿದು ಪೂರ್ವರೂಪವು. ಅ ಎಂಬಿದು ಮಧ್ಯಮರೂಪವು. ಮ್ ಎಂಬೀ ಅನುಸ್ವಾರವು ಕೊನೆಯದು. ಬಿಂದುವು ಉತ್ತರರೂಪವು. ನಾದವೇ ಸಂಧಾನವು. ಗಕಾರಾದಿಗಳ ಕೂಡುವಿಕೆಯೇ ಸಂಧಿ. ಇದೇ ಗಣೇಶವಿದ್ಯೆಯು. ಗಣಕನೆಂಬವನೇ ಇದರ ಋಷಿಯು. ಛಂದಸ್ಸು ನಿಚೃದ್ಗಾಯತ್ರೀ– ಎಂಬಿದು. ಮಹಾಗಣಪತಿಯೇ ದೇವತೆಯು. 'ಓಂ ಗಂ ಗಣಪತಯೇ ನಮಃ' ಎಂಬಿದು ಮೂಲಮಂತ್ರವು.

## ಗಣೇಶವಿದ್ಯೆ

ಈಗ ವಿಚಾರಕ್ಕೆ ತೆಗೆದುಕೊಂಡಿರುವ ಗಣಪತ್ಯುಪನಿಷತ್ತಿನ ಹೃದಯ ಭಾಗವಾದ ಮೂಲಮಂತ್ರವನ್ನು ವ್ಯಾಖ್ಯಾನಮಾಡಬೇಕಾಗಿದೆ. ಅದನ್ನು ಮೇಲೆ ಕೊಡಲಾಗಿದೆ. ಆ ಮಂತ್ರವು ಹೇಗೆ ಹುಟ್ಟಿದೆ? ಅದನ್ನು ಕಂಡುಹಿಡಿದವರಾರು? ಮುಂತಾದ ವಿವರಗಳನ್ನೊಳಗೊಂಡ ಮಂತ್ರಭಾಗವು ರಹಸ್ಯವಾದ ಅರ್ಥವುಳ್ಳದ್ದಾಗಿದೆ. ಆದರೂ ಯಥಾಮತಿಯಾಗಿ ಇದನ್ನು ವಿವರಿಸಲಾಗುವದು.

**'ಓಂ ಗಂ ಗಣಪತಯೇ ನಮಃ'** ಎಂಬಿದು ಮೂಲಮಂತ್ರವು. ಪ್ರತಿಯೊಂದು ದೇವತೆಗೂ ಒಂದು ಮೂಲಮಂತ್ರವಿರುತ್ತದೆ. 'ಮಂತ್ರಾಧೀನಂ ತು ದೈವತಮ್' (ದೇವತೆಯು ಮಂತ್ರಕ್ಕೆ ಅಧೀನವಾಗಿರುತ್ತದೆ) ಎಂದಂತೆ ಆಯಾ ಮಂತ್ರಗಳ ಪುರಶ್ಚರಣೆಯಿಂದ ದೇವತೆಯನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಮಹಾಭಾರತದಲ್ಲಿರುವ ಕಥೆಯಂತೆ ಕುಂತಿಯು ಇನ್ನೂ ಕುಮಾರಿಯಾಗಿದ್ದಾಗಲೇ ದೂರ್ವಾಸರು ಉಪದೇಶಿಸಿದ್ದ ಸೂರ್ಯಮಂತ್ರವನ್ನು ಕುತೂಹಲಕ್ಕಾಗಿ ಜಪಿಸಿದಾಗ ಸೂರ್ಯನೇ ಬಂದು ವರವನ್ನು ಕೊಟ್ಟನಂತೆ. ಹೀಗೆ ಮಂತ್ರಪ್ರಭಾವವು ಅಸಾಧಾರಣವಾಗಿರುತ್ತದೆ. ಆದ್ದರಿಂದ ಅದನ್ನು ಅನರ್ಹರಾದವರು ಜಪಿಸಬಾರದು. ಕೆಲವು ವೇಳೆ ದುಷ್ಟರು ಮಂತ್ರಸಿದ್ಧಿಯನ್ನು ಹೊಂದಿ ಲೋಕಕ್ಕೆ ಕೇಡನ್ನು ಉಂಟುಮಾಡುವ ಸಂಭವವೂ ಇರುತ್ತದೆ. ಅದಕ್ಕಾಗಿ ಋಷಿಗಳು ಕೆಲವು ಮಂತ್ರಗಳಿಗೆ 'ಶಾಪ' ಹಾಕಿರುತ್ತಾರೆ. ಇದಕ್ಕೆ ಕಾರಣ– ದುಷ್ಟರಿಗೆ ಮಂತ್ರಸಿದ್ಧಿಯಾಗದೆ ಇರಲಿ– ಎಂಬಿದೇ ಆಗಿದೆ. ಉಳಿದವರು ಮಂತ್ರಸಿದ್ಧಿಮಾಡಿಕೊಳ್ಳಬೇಕಾದರೆ ಮೊದಲು

ಶಾಪವಿಮೋಚನೆಮಾಡಿಕೊಂಡು ಅನಂತರ ಮಂತ್ರವನ್ನು ಜಪಿಸಬೇಕು. ಇದನ್ನೆಲ್ಲ ಬಲ್ಲವರಿಂದಲೇ ತಿಳಿದುಕೊಳ್ಳಬೇಕು. ಪ್ರಕೃತ ಮಹಾಗಣಪತಿ ಮಂತ್ರಕ್ಕೆ ಬೀಜಾಕ್ಷರವು 'ಗಂ' ಎಂಬಿದಾಗಿದೆ. ಸಾಮಾನ್ಯವಾಗಿ ಪ್ರತಿಯೊಂದು ಮಂತ್ರದ ಮೊದಲನೆಯ ಅಕ್ಷರವನ್ನು 'ಬೀಜಾಕ್ಷರ'ವೆನ್ನುವರು. ಈ ಗಂ ಎಂಬಿದರ ಹುಟ್ಟನ್ನು ಇಲ್ಲಿ ಹೀಗೆ ವಿವರಿಸಲಾಗಿದೆ. ಗಣಪತಿಯ ಹೆಸರಿನ ಗಣ– ಎಂಬ ಪದದ ಆದ್ಯಕ್ಷರವನ್ನು ಮೊದಲು ಉಚ್ಚರಿಸತಕ್ಕದ್ದು. ಅದೇ 'ಗ್' ಎಂಬಿದು. ಅನಂತರ ವರ್ಣಮಾಲೆಯ ಆದ್ಯಕ್ಷರವನ್ನು ಎಂದರೆ 'ಅ'ಕಾರವನ್ನು ಉಚ್ಚರಿಸಬೇಕು. ಆಗ 'ಗ' ಎಂದಾಗುತ್ತದೆ. 'ಅಂ' ಎಂಬ ಅನುಸ್ವಾರವನ್ನು ಸೇರಿಸಬೇಕು. ಆಗ 'ಗಂ' ಎಂದಾಗುವದು. ಇದನ್ನೇ ಉಪನಿಷತ್ತಿನಲ್ಲಿ ವಿವರಿಸುತ್ತಾ 'ಗಕಾರಃ ಪೂರ್ವ ರೂಪಮ್ । ಅಕಾರೋ ಮಧ್ಯಮರೂಪಮ್ । ಅನುಸ್ವಾರಶ್ಚಾಂತ್ಯರೂಪಮ್ ।' ಎಂದು ತಿಳಿಸಿರುತ್ತದೆ.

ಶ್ರೀ ಮಹಾಗಣಪತಿ ಮೂಲಮಂತ್ರದ ಬೀಜಾಕ್ಷರವಾದ 'ಗಂ' ಎಂಬಿದನ್ನು ವಿವರಿಸಿದ್ದಾಯಿತು. ಕಡೆಯಲ್ಲಿ ಉಚ್ಚರಿಸುವ ಅನುಸ್ವಾರವು ಈ ಬೀಜಾಕ್ಷರದ ತಿರುಳು (ಪರತರ) ಎಂದು ಮತ್ತೆ ಹೇಳಿದೆ. ಅನುಸ್ವಾರವನ್ನು ಅರ್ಧಚಂದ್ರಾಕಾರವಾದ ಗುರುತಿನ ಮೇಲಿರುವ ಬಿಂದುವಿನಿಂದ ನಿರ್ದೇಶಿಸುತ್ತಾರೆ. ಉಚ್ಚರಿಸುವಾಗ ತಾರ (ಎತ್ತರವಾದ) ಧ್ವನಿಯಿಂದ ಹೇಳಲಾಗುತ್ತದೆ. ಇಲ್ಲಿಗೆ ಶ್ರೀಮಹಾಗಣಪತಿಯ ಸ್ವರೂಪವನ್ನೇ ನಿರ್ದೇಶಿಸಿದಂತೆ ಆಗುತ್ತದೆ. ಮುಂದಿನ 'ಗಣಪತಯೇ ನಮಃ' ಎಂಬಿದು 'ಗಂ' ಎಂಬಿದರ ವಿವರಣೆಯೇ ಆಗಿದೆ. ಹೀಗೆ ಸಿದ್ಧವಾದ ಮಂತ್ರವನ್ನು 'ಗಣೇಶವಿದ್ಯೆ' ಎಂದು ಹೆಸರಿಸಲಾಗಿದೆ. ಈ ಮಂತ್ರಕ್ಕೆ 'ಗಣಕ' ಎಂಬುವನು ಋಷಿಯು. ಋಷಿಯೆಂದರೆ ಮಂತ್ರವನ್ನು ಮೊಟ್ಟಮೊದಲಬಾರಿಗೆ ಕಂಡುಕೊಂಡವನು. ಪ್ರತಿಯೊಂದು ಮಂತ್ರವನ್ನು ಜಪಮಾಡುವಾಗಲೂ ಆಯಾ ಮಂತ್ರದ್ರಷ್ಟನಾದ ಋಷಿ, ಆಯಾ ಮಂತ್ರಾಭಿಮಾನಿದೇವತೆ, ಅನಂತರ ಛಂದಸ್ಸು ಇವುಗಳನ್ನು ಉಚ್ಚರಿಸಿಯೇ ಮಂತ್ರಜಪವನ್ನು ಮಾಡಬೇಕು. ಈವರೆಗೆ ಈ ಮಂತ್ರಕ್ಕೆ ಋಷಿ ಹಾಗೂ ದೇವತೆಯನ್ನು ಹೇಳಿದ್ದಾಯಿತು. ಇನ್ನು ಛಂದಸ್ಸನ್ನು ಹೇಳಲಾಗುತ್ತದೆ. 'ನಿಚೃದ್‌ಗಾಯತ್ರಿ' ಎಂಬಿದೇ ಛಂದಸ್ಸು. ಗಾಯತ್ರೀಛಂದಸ್ಸಿನ ಮಂತ್ರಗಳಲ್ಲಿ

ಒಟ್ಟು ನಾಲ್ಕು ಪಾದಗಳಿಂದ 24 ಅಕ್ಷರಗಳಿರುವವು. ಆರು ಅಕ್ಷರಗಳಿಗೆ ಒಂದು ಪಾದವೆಂದು ಹೆಸರು. ಪಾಠಮಾಡುವಾಗ ಎಂಟಕ್ಷರಗಳ ಮೂರು ಪಾದಗಳಾಗಿಯೂ ಉಚ್ಚರಿಸಬಹುದು. ಆಗಲೂ ಒಟ್ಟು 24 ಅಕ್ಷರಗಳೇ ಆಗುತ್ತವೆ. ಗಾಯತ್ರೀ ಛಂದಸ್ಸನ್ನು ತ್ರಿಪದಾ- ಎಂದೂ ವೇದದಲ್ಲಿ ಕರೆಯುತ್ತಾರೆ. ಇಲ್ಲಿ 'ಗಂ' ಎಂಬ ಬೀಜಾಕ್ಷರದ ಅನಂತರ ಉಚ್ಚರಿಸುವ 'ಏಕದಂತಾಯ' ಎಂಬ ಮಂತ್ರವೇ ಗಣೇಶಗಾಯತ್ರೀ- ಎನಿಸಿಕೊಂಡಿದೆ. ಇದರ ಅರ್ಥವನ್ನು ಮುಂದೆ ತಿಳಿಸಲಾಗುವದು.

ಈಗ 'ನಿಚೃದ್ಗಾಯತ್ರೀ ಛಂದಃ' ಎಂಬಿದರ ಅರ್ಥವನ್ನು ತಿಳಿಯೋಣ. ಗಾಯತ್ರೀಛಂದಸ್ಸು- ಎಂದರೆ 24 ಅಕ್ಷರಗಳುಳ್ಳದ್ದು- ಎಂಬಿದು ಲೋಕವೇದ್ಯ, ಪ್ರಸಿದ್ಧವು. ಆದರೆ ಕಡೆಯಲ್ಲಿ ಬರುವ 'ಪ್ರಚೋದಯಾತ್' ಎಂಬ ಪದದಲ್ಲಿ ಕಡೆಯ ಅಕ್ಷರವಾದ 'ತ್' ಎಂಬಿದು 25ನೆಯದಾಗುವದು. ಎಲ್ಲಾ ದೇವತಾ ಗಾಯತ್ರೀಮಂತ್ರಗಳಲ್ಲಿಯೂ 'ಪ್ರಚೋದಯಾತ್' ಎಂಬಿದು ಕಡೆಯ ಪದವಾಗಿ ಬಂದೇಬರುತ್ತದೆ. ಆದ್ದರಿಂದ ಇಂಥ ಮಂತ್ರಗಳನ್ನು ಮಾತ್ರ ವಿಶೇಷವಾಗಿ ನಿಚೃದ್ ಗಾಯತ್ರೀಛಂದಸ್ಸು ಎಂದು ಹೇಳುತ್ತಾರೆ- ಎಂಬುದಾಗಿ ಹಿರಿಯರು ಹೇಳಿದ್ದನ್ನು ಕೇಳಿರುತ್ತೇನೆ. ಹೀಗೆ 'ಗಂ' ಎಂಬಿದರ ವಿವರಣೆಯೇ ಮುಂದಿನ ಗಾಯತ್ರೀ ಮಂತ್ರದಲ್ಲಿದೆಯಾಗಿ ಇದು ಬೀಜಾಕ್ಷರವೆಂದು ಹೇಳಲ್ಪಟಿದೆ.

'ಗ' ಎಂಬ ಬೀಜಾಕ್ಷರದ ಮಹಿಮೆಯನ್ನು ಸಂಗೀತಶಾಸ್ತ್ರದವರೂ ಕಂಡುಕೊಂಡಿದ್ದಾರೆ. ಈಗ ಸಾಮಾನ್ಯವಾಗಿ ಸಂಗೀತಕಚೇರಿಗಳನ್ನು ನಡೆಯಿಸುವ ವಿದ್ವಾಂಸರು ಪ್ರಾರಂಭಕ್ಕೆ ಶ್ರೀ ಮುತ್ತುಸ್ವಾಮಿದೀಕ್ಷಿತರ 'ವಾತಾಪಿಗಣಪತಿಂ ಭಜೇ' ಎಂಬ ಕೀರ್ತನೆಯನ್ನು ಹಾಡುತ್ತಾರೆ. ಇದು 'ಹಂಸಧ್ವನಿ'ರಾಗದಲ್ಲಿದೆ. ಈ ರಾಗದ ಜೀವಸ್ವರವು 'ಗ' ಎಂಬ ಗಾಂಧಾರವು. ಈ ಗಾಂಧಾರವನ್ನು ಒತ್ತಿ ಹಾಡಿದಂತೆಲ್ಲ ಕೀರ್ತನೆಯು ರುಚಿಕರವಾಗಲಿದೆ. ಆದ್ದರಿಂದ ಮಂತ್ರಶಾಸ್ತ್ರಜ್ಞರಾದ ಕೀರ್ತನ ಕರ್ತೃಗಳು ವೇದೋಕ್ತವಾದ ಗಣಪತಿಗಾಯತ್ರೀಮಂತ್ರದ ಬೀಜಾಕ್ಷರವನ್ನೇ ರಾಗ ದಲ್ಲಿ ಅಳವಡಿಸಿರುವದು ವೇದ ಹಾಗೂ ಸಂಗೀತವಿದ್ಯೆಗಳಿಗೆ ಏಕವಾಕ್ಯತೆಯನ್ನು ತಿಳಿಸಿಕೊಡುತ್ತದೆ. ಹೀಗೆ ಇನ್ನೂ ಕೆಲವು ಮೂಲಗಳಿಂದ ವಿಚಾರಮಾಡಿ ಬೀಜಾಕ್ಷರ ಮಹತ್ವವನ್ನು ತಿಳಿಯಬಹುದು. ಗಣಪತಿಯ ಅರ್ಚನೆಯ ಕಾಲಕ್ಕೆ

ಉಪಯೋಗಿಸುವ 'ಗ'ಕಾರ ಗಣಪತಿಸಹಸ್ರನಾಮಾವಳಿಯನ್ನೂ ಇಲ್ಲಿ ಅನುಸಂಧಾನ ಮಾಡಬಹುದು. ಆ ಸಹಸ್ರನಾಮದಲ್ಲಿ ಅಡಕವಾಗಿರುವ ಒಂದು ಸಾವಿರ ನಾಮಗಳೂ ಗಕಾರದಿಂದಲೇ ಆರಂಭವಾಗಿವೆ. ಅವುಗಳ ಅರ್ಥಾನುಸಂಧಾನ ಮಾಡಿದಲ್ಲಿ ಗಕಾರದ ಮಹಿಮೆಯು ಮನದಟ್ಟಾಗುವದು.

ಈಗ ಗಣೇಶಗಾಯತ್ರೀಮಂತ್ರವನ್ನು ವಿಚಾರಮಾಡೋಣ. ಇದು ಮಹಾನಾರಾಯಣೋಪನಿಷತ್ತಿನಲ್ಲಿಯೂ ಇದೆ. ಅದರ ಪಾಠವು ಹೀಗಿದೆ :

**ಓಂ ॥ ಏಕದಂತಾಯ ವಿದ್ಮಹೇ ವಕ್ರತುಂಡಾಯ ಧೀಮಹಿ ।**
**ತನ್ನೋ ದಂತೀ[1] ಪ್ರಚೋದಯಾತ್ ॥**

**–ಗಣಪತ್ಯುಪನಿಷತ್ತು 8.**

ಗಾಯತ್ರೀಛಂದಸ್ಸಿನ ಈ ಬಗೆಯ ಮಂತ್ರಗಳಲ್ಲಿ 'ವಿದ್ಮಹೇ', 'ಧೀಮಹಿ', 'ಪ್ರಚೋದಯಾತ್'– ಈ ಶಬ್ದಗಳು ನಿಯತವಾಗಿರುವವು. ವಿದ್ಮಹೇ ಎಂದರೆ ನಾವು ಬಲ್ಲೆವು ಎಂದರ್ಥ. ಹಾಗೆಯೇ ಧೀಮಹಿ– ಎಂದರೆ ಧ್ಯಾನಿಸುವೆವು– ಎಂದೂ ಪ್ರಚೋದಯಾತ್– ಎಂದರೆ ಪ್ರೇರಿಸಲಿ– ಎಂದೂ ಅಭಿಪ್ರಾಯ. ಮಹಾಗಣಪತಿಯೆನಿಸಿದ ಭಗವಂತನು ಏಕದಂತನೆಂದೂ ವಕ್ರತುಂಡನೆಂದೂ ದಂತಿಯೆಂದೂ ನಾವು ಬಲ್ಲೆವು– ಎಂದು ಋಷಿಯು ತಿಳಿಸುತ್ತಾನೆ. ಪೌರಾಣಿಕ ಕಥೆಯಂತೆ ಒಮ್ಮೆ ಗಣಪತಿಯು ಚಂದ್ರನು ಹಾಸ್ಯಮಾಡಿದ್ದರಿಂದ ಕುಪಿತನಾಗಿ ತನ್ನ ಒಂದು ಹಲ್ಲನೇ ಮುರಿದು ಚಂದ್ರನಮೇಲೆ ಎಸೆದನಂತೆ. ಅಂದಿನಿಂದ ಅವನಿಗೆ ಏಕದಂತ, ಭಿನ್ನದಂತ– ಎಂದು ಹೆಸರಾಯಿತು. ಹಾಗೆಯೇ ವಕ್ರತುಂಡ, ದಂತಿ– ಎಂಬ ಹೆಸರುಗಳೂ ಹಲ್ಲುಗಳನ್ನೇ ಕುರಿತದ್ದಾಗಿವೆ. ಆನೆಯ ದಂತಗಳಲ್ಲಿ ಎರಡು ಹೊರಕ್ಕೆ ಚಾಚಿಕೊಂಡಿದ್ದು ಸೋಟ್ಟವಾಗಿರುತ್ತವೆ. ಗಣಪತಿಗೆ ಆನೆಯ ಮುಖವಿದ್ದು ಹೊರಗಿನ ಹಲ್ಲುಗಳು ವಕ್ರವಾಗಿರುವದರಿಂದ ವಕ್ರತುಂಡನೆನ್ನುವರು. ಹಾಗೆಯೇ ದಂತೀ– ಎಂಬಿದು ದಂತದ ಹೆಚ್ಚುಗಾರಿಕೆಯಿಂದ ಬಂದ ಹೆಸರಾಗಿದೆ. ಆನೆಯ ದಂತಗಳಿಗೆ ಬಹಳ ಬೆಲೆಯುಂಟೆಂಬುದು ಪ್ರಸಿದ್ಧವಾಗಿದೆ. ಹೀಗೆ

---

1. 'ದಂತಿಃ ಪ್ರಚೋದಯಾತ್' ಎಂಬ ಪಾಠವೂ ಇದೆ.

ಗಣಪತಿಯು ಏಕದಂತನೂ ವಕ್ರತುಂಡನೂ ದಂತಿಯೂ ಆಗಿದ್ದು ಉಪಾಸಕರಿಗೆ ಧ್ಯೇಯನಾಗಿರುತ್ತಾನೆ. ಭಕ್ತರ ಕಷ್ಟಗಳೆಂಬ ಬೆಟ್ಟಗಳನ್ನು ತನ್ನ ದಂತದಿಂದ ಭೇದಿಸಿ ಕಾರ್ಯಸಿದ್ಧಿಯನ್ನುಂಟುಮಾಡುತ್ತಾನೆ. ಇಂಥ ಗಣಪತಿಯು ನಮ್ಮ ಬುದ್ಧಿಯನ್ನು ಪ್ರೇರಿಸಲಿ– ಎಂದು ಅಭಿಪ್ರಾಯ.

ಈಗ ಗಣಪತಿಯನ್ನು ಧ್ಯಾಯಾನಿಸುವದಕ್ಕಾಗಿ ಅವನ ಆಕಾರ ರೂಪ ಗುಣವಿಶೇಷಗಳನ್ನು ಹೀಗೆ ವರ್ಣಿಸಲಾಗುವದು :

**ಏಕದಂತಂ ಚತುರ್ಹಸ್ತಂ ಪಾಶಮಂಕುಶಧಾರಿಣಮ್ ।**
**ಅಭಯಂ[1] ವರದಂ ಹಸ್ತೈರ್ಬಿಭ್ರಾಣಂ ಮೂಷಕಧ್ವಜಮ್ ॥**
**ರಕ್ತಂ ಲಂಬೋದರಂ ಶೂರ್ಪಕರ್ಣಕಂ ರಕ್ತವಾಸಸಮ್ ।**
**ರಕ್ತಗಂಧಾನುಲಿಪ್ತಾಂಗಂ ರಕ್ತಪುಷ್ಪೈಃ ಸುಪೂಜಿತಮ್ ॥**
**ಭಕ್ತಾನುಕಂಪಿನಂ ದೇವಂ ಜಗತ್ಕಾರಣಮಚ್ಯುತಮ್ ।**
**ಆವಿರ್ಭೂತಂ ಚ ಸೃಷ್ಟ್ಯಾದೌ ಪ್ರಕೃತೇಃ ಪುರುಷಾತ್ಪರಮ್ ।**
**ಏವಂ ಧ್ಯಾಯತಿ ಯೋ ನಿತ್ಯಂ ಸ ಯೋಗೀ ಯೋಗಿನಾಂ ವರಃ ॥**
**– ಗಣಪತ್ಯುಪನಿಷತ್ತು 9**

ಈ ಧ್ಯಾನಶ್ಲೋಕಗಳು ಗಣಪತಿಯ ಸಗುಣಸಾಕಾರರೂಪವನ್ನು ಭಕ್ತರಿಗೆ ಹೃದಯಂಗಮವಾಗುವ ರೀತಿಯಲ್ಲಿ ತಿಳಿಸುತ್ತವೆ. ಶ್ರೀಗಣಪತಿಯು ನಾಲ್ಕುಕೈಗಳುಳ್ಳವನಾಗಿದಾನೆ. ಇದು ಅವನೊಬ್ಬನೇ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೂ ಕೊಡಬಲ್ಲವನಾಗಿದ್ದಾನೆಂಬುದನ್ನು ತಿಳಿಸುತ್ತದೆ. ಇನ್ನು ಈತನು ಕೈಗಳಲ್ಲಿ ಧರಿಸಿರುವ ಪಾಶ, ಅಂಕುಶಗಳೆಂಬ ಆಯುಧಗಳು ಮನಸ್ಸೆಂಬ ಮದ್ದಾನೆಯನ್ನು ತನ್ನ ವಶದಲ್ಲಿಟ್ಟುಕೊಂಡಿರುವವನೆಂಬುದನ್ನು ತಿಳಿಸುತ್ತದೆ. ಉಳಿದೆರಡು ಕೈಗಳು ಭಕ್ತರಿಗೆ ಅಭಯವನ್ನೂ ವರಗಳನ್ನೂ ದಯಪಾಲಿಸುತ್ತಿವೆ. ಮೂಷಿಕನೆಂಬ ರಾಕ್ಷಸನನ್ನು ಸಂಹರಿಸಿ ಅವನನ್ನೇ ತನ್ನ ಧ್ವಜವಾಗಿ ಮಾಡಿಕೊಂಡಿದಾನೆ. ಶರೀರದಿಂದ ಕೆಂಪುಬಣ್ಣದವನಾಗಿದ್ದು ದೊಡ್ಡಹೊಟ್ಟೆ, ಅಗಲವಾದ ಕಿವಿಗಳುಳ್ಳವನಾಗಿದಾನೆ. ಬ್ರಹ್ಮಾಂಡವನ್ನೆಲ್ಲ

---

1. ರದಂ ಚ ವರದಂ ಎಂದು ಪಾಠಾಂತರ.

ಹೊಟ್ಟೆಯಲ್ಲಡಗಿಸಿಕೊಂಡವನಾಗಿ ಕಿವಿಗಳಿಂದ ಕೇಳುವಾಗ ಸಾರಾಸಾರ ವಿವೇಚನೆಮಾಡಿ ನಿಸ್ಸಾರವಾದವುಗಳನ್ನು ಕೇರಿ ಬಿಸುಡುತ್ತಾನೆ. ಕೆಂಪಾದ ವಸ್ತ್ರಗಳನ್ನು ಉಟ್ಟುಕೊಂಡಿದಾನೆ. ಕೆಂಪು (ಚಂದನ)ಗಂಧವನ್ನು ಧರಿಸಿದಾನೆ. ಕೆಂಪು ಹೂಗಳಿಂದ ಅಲಂಕೃತನಾಗಿದ್ದಾನೆ. ಭಕ್ತರ ವಿಷಯದಲ್ಲಿ ಬಹಳ ಕರುಣೆಯುಳ್ಳವನಾಗಿರುತ್ತಾನೆ. ಜಗತ್ತಿಗೆಲ್ಲ ಕಾರಣನಾಗಿದ್ದು ತಾನು ಮಾತ್ರ ಜಗತ್ತು ಕಣ್ಮರೆಯಾದರೂ ನಿತ್ಯವಾಗಿ ಚ್ಯುತಿಯಿಲ್ಲದೆ ಎಂದೆಂದೂ ಇದ್ದುಕೊಂಡಿರುತ್ತಾನೆ. ಆದರೆ ಸೃಷ್ಟಿಯ ಪ್ರಾರಂಭದಲ್ಲಿ ಎಲ್ಲರಿಗಿಂತ ಮೊಟ್ಟಮೊದಲು ತಾನೇ ತೋರಿಕೊಳ್ಳುತ್ತಾನೆ. ಆದ್ದರಿಂದಲೇ ಮೊಟ್ಟಮೊದಲಿಗೇ ಪೂಜ್ಯನಾಗಿದ್ದಾನೆ. ಯಾವ ದೇವತಾಕಾರ್ಯವನ್ನು ಮಾಡಬೇಕಾದರೂ ಮೊದಲು ಗಣಪತಿಯನ್ನು ಪೂಜಿಸಲೇಬೇಕು. ಹೀಗೆ ಪ್ರಕೃತಿ–ಪರುಷತತ್ತ್ವಗಳಾಗಿ ಸ್ಥಿತಿಕಾಲಕ್ಕೆ ಕಂಡರೂ ತಾನು ಅವೆರಡಕ್ಕಿಂತ ವಿಲಕ್ಷಣನೂ ಆಗಿದಾನೆ. ಇದು ಗಣಪತಿಯ ಧ್ಯೇಯವಾದ ಸ್ವರೂಪವು. ಇನ್ನು ಮುಂದೆ ಗಣಪತಿಯ ಗುಣ–ಮಹಿಮೆಗಳನ್ನು ತಿಳಿಸಲಾಗುವದು. ಅವುಗಳನ್ನು ಮತ್ತೆ ವಿಚಾರಮಾಡೋಣ.

*****

## ನಮೋ ಗಣಪತಯೇ

**ನಮೋ ವ್ರಾತಪತಯೇ ನಮೋ ಗಣಪತಯೇ**
**ನಮಃ ಪ್ರಮಥಪತಯೇ ನಮಸ್ತೇಽಸ್ತು ಲಂಬೋದರಾಯ**
**ಏಕದಂತಾಯ ವಿಘ್ನವಿನಾಶಿನೇ ಶಿವಸುತಾಯ**
**ಶ್ರೀವರದಮೂರ್ತಯೇ ನಮೋ ನಮಃ ॥**

**– ಗಣಪತ್ಯುಪನಿಷತ್ತು 10**

**ಭಾವಾರ್ಥ** : ವ್ರಾತಪತಿಯೂ ಗಣಪತಿಯೂ ಪ್ರಮಥಪತಿಯೂ ಆದ ನಿನಗೆ ನಮಸ್ಕಾರವು. ಮತ್ತು ಲಂಬೋದರನೂ ಏಕದಂತನೂ ವಿಘ್ನಗಳನ್ನು ಪರಿಹರಿಸುವವನೂ ಶಿವನಪುತ್ರನೂ ವರದಮೂರ್ತಿಯೂ ಆದ ನಿನಗೆ ಅನೇಕ ನಮಸ್ಕಾರಗಳು.

[ಎಲ್ಲಾ ದೇವತೆಗಳೂ ನಮಸ್ಕಾರದಿಂದ ಪ್ರಸನ್ನರಾಗುವರು. ಆದ್ದರಿಂದ ಪೂಜೆ, ಜಪ, ಹೋಮಾದ್ಯನುಷ್ಠಾನಗಳ ಕೊನೆಯಲ್ಲಿ ನಮಸ್ಕಾರವೆಂಬ ಉಪಚಾರವನ್ನು ಸಮರ್ಪಿಸಬೇಕು. ಹಾಗೆ ಸಮರ್ಪಿಸುವಾಗ ಆಯಾ ದೇವತೆಯ ಗುಣವಿಶೇಷಗಳನ್ನು ಅನುಸಂಧಾನ ಮಾಡಬೇಕು. ಇಲ್ಲಿ ಶ್ರೀಮಹಾಗಣಪತಿಯ ಕಲ್ಯಾಣಗುಣಗಳನ್ನು ಸ್ತುತಿಸಿ ನಮಸ್ಕಾರಗಳನ್ನು ಸಮರ್ಪಿಸಲಾಗಿದೆ.]

## ಗಣೇಶಸ್ತುತಿ – ವಂದನಗಳು

ಗಣಪತ್ಯಥರ್ವಶೀರ್ಷದ ಕಡೆಯ ಮಂತ್ರವನ್ನು ಈಗ ವಿಚಾರಮಾಡ ಬೇಕಾಗಿದೆ. ಮುಂದಿನ ಮಂತ್ರಗಳೆಲ್ಲವೂ ಫಲಶ್ರುತಿ ವಾಕ್ಯಗಳಾಗಿವೆ. ಈ ಮಂತ್ರದಲ್ಲಿ ನಮಃ ಎಂಬ ಶಬ್ದವನ್ನು ಮತ್ತೆಮತ್ತೆ ಬಳಸಲಾಗಿದೆ. ಆದ್ದರಿಂದ ಅದರ ಅರ್ಥವನ್ನು ಅನುಸಂಧಾನಮಾಡುವದು ಪ್ರಕೃತವಾಗಿದೆ. ನಮಃ ಎಂಬಿದು ಅವ್ಯಯವು. ಇದರ ಸಂಯೋಗವಿದ್ದಾಗ ನಾಮಪದವು ಚತುರ್ಥೀವಿಭಕ್ತಿಯಲ್ಲಿರುತ್ತದೆ. ಇಲ್ಲಿಯೂ ವ್ರಾತಪತಯೇ– ಮುಂತಾದ ಪದಗಳು ಚತುರ್ಥೀವಿಭಕ್ತಿಯಲ್ಲಿಯೇ ಇವೆ. ಇನ್ನು ನಮಸ್ಕಾರ ಎಂಬಿದು ಹದಿನಾರು ಉಪಚಾರಗಳಲ್ಲಿ ಒಂದಾಗಿದೆ. 'ನಾನು ಅಲ್ಪನು, ನೀನು ದೊಡ್ಡವನು' ಎಂಬ ಭಾವನೆಯು ಇದರಲ್ಲಿ ಅಡಗಿರುತ್ತದೆ. ಭಗವಂತನು ಎಲ್ಲರಿಗಿಂತ ಹಿರಿಯನು. ಅವನಿಗೆ ಸರಿಸಮಾನರೇ ಇಲ್ಲ. ಇನ್ನು ಅಧಿಕರಾದವರು ಎಲ್ಲಿದ್ದಾರು? ಆದ್ದರಿಂದ ಗಣಪತಿಯನ್ನು ಕುರಿತು ಭಕ್ತನು ತನ್ನ ನಮಸ್ಕಾರಗಳನ್ನು ಅರ್ಪಿಸುತ್ತಿದಾನೆ. ಈ ಸಾಧನದಲ್ಲಿ ಶರೀರವು ಮುಖ್ಯವಾದುದು. ನಾವು ತಲೆಯನ್ನು ಬಗ್ಗಿಸಿ ಕೈಗಳನ್ನು ಜೋಡಿಸಿ ನಿಲ್ಲುವದು ನಮಸ್ಕಾರವೆನಿಸುತ್ತದೆ. ಇನ್ನು ದೇಹವನ್ನೆಲ್ಲ ಕೋಲಿನಂತೆ ನೆಲದಮೇಲೆ ಕೆಡವಿದಲ್ಲಿ "ದಂಡವತ್ ಪ್ರಣಾಮ"ವೆನ್ನುವರು. ಭಗವಂತನ ಕೃಪಾಪ್ರವಾಹವು ನಮ್ಮ ಮೇಲೆ ಹರಿಯಬೇಕಾದರೆ ನಾವು ಅವನಿಗಿಂತ ತಗ್ಗಲೇಬೇಕು. ಹೇಗೆ ನೀರು ಹರಿಯಬೇಕಾದರೆ ತಗ್ಗಾದ ಜಾಗಕ್ಕೇ ಹರಿಯುತ್ತದೆಯೋ ಅದಕ್ಕಾಗಿ ಭೂಮಿಯ ಮಟ್ಟವನ್ನೇ ತಗ್ಗಿಸಬೇಕೋ ಹಾಗೆಯೇ ನಾವು ನಮ್ರರಾದರೆ ಮಾತ್ರ ಭಗವಂತನ ಕೃಪೆ ನಮ್ಮಮೇಲೆ ಹರಿಯುತ್ತದೆ. ಇದೇ ನಮಸ್ಕಾರದ ಪ್ರಯೋಜನವು. ಭಕ್ತನು ಇಲ್ಲಿ ಗಣಪತಿಯ ಗುಣವಿಶೇಷಗಳನ್ನು ಸ್ತುತಿಸಿ ನಮಸ್ಕಾರಮಾಡಿರುತ್ತಾನೆ. ಈಗ ಆ ವಿಶೇಷಣಗಳ ಅರ್ಥವನ್ನು ಯಥಾ ಯೋಗ್ಯವಾಗಿ ಚಿಂತಿಸೋಣ.

ವ್ರಾತಪತಿ– ಎಂಬುದು ಮೊದಲನೆಯ ಗುಣವಾಚಕವು. ವ್ರಾತ–ಎಂದರೆ ಗುಂಪು, ಸಮೂಹ, ಸಂಘ– ಎಂದರ್ಥ. ಒಂದು ಗುಂಪಿಗೆ ಯಜಮಾನನಾಗ ಬೇಕಾದರೆ ಈಗಿನ ವ್ಯವಹಾರದಂತೆ ಅವನು ಅದೇ ಜಾತಿಯಲ್ಲಿ ಹುಟ್ಟಿದವನಾಗಿರಬೇಕು. ಶ್ರೀಮಂತನೂ ವಿದ್ಯಾವಂತನೂ ಪ್ರಭಾವಶಾಲಿಯೂ ಜನಾನುರಾಗಿಯೂ ಜನೋಪಕಾರಿಯೂ ಆಗಿರಬೇಕು. ಹೀಗಿದ್ದರೂ ಅವನು ಸರ್ವಸಮ್ಮತನಾದ ನಾಯಕನೆನಿಸುವುದಿಲ್ಲ. ಬಹುಮತದಿಂದ ಮಾತ್ರ ಆರಿಸಿಬಂದಿರುತ್ತಾನೆ. ಮತ್ತು ಕೆಲವು ಕಾಲಾನಂತರ ಆಸ್ಥಾನವನ್ನು ಬಿಡಲೂಬೇಕಾಗುತ್ತದೆ. ಬಿಟ್ಟಮೇಲೆ ಅವನಿಗೆ ಹೆಚ್ಚಿನ ಗೌರವವಾಗಲಿ ಅಧಿಕಾರ – ಪ್ರಭಾವಗಳಾಗಲಿ ಇರುವದಿಲ್ಲ. ಅವನು 'ಮಾಜಿ' ಎಂಬ ವಿಶೇಷಣ ಸಂಪನ್ನನಾಗಿಬಿಡುತ್ತಾನೆ. ಆದರೆ ಗಣಪತಿಯು ಇಂಥ ನಾಯಕನಲ್ಲ. ಇವನು ಎಂದೂ 'ಮಾಜಿ'ಯಾಗುವದಿಲ್ಲ. ಪುರಾಣಗಳಲ್ಲಿರುವಂತೆ ಈತನನ್ನು ತಂದೆ ಯಾದ ಪರಮೇಶ್ವರನೇ ಸಮಸ್ತದೇವಗಣಗಳಿಗೂ ಒಡೆಯನನ್ನಾಗಿ ಮಾಡಿ, ಸರ್ವಾನುಮತದಿಂದ ಪಟ್ಟಗಟ್ಟಿ ಶಾಶ್ವತವಾದ ಸ್ಥಾನವನ್ನು ನೀಡಿರುತ್ತಾನೆ. ಅಲ್ಲದೆ ತಾನೇ ಸ್ವತಃ 'ಅಗ್ರಪೂಜೆ'ಯನ್ನು ಮಾಡಿ ಉಳಿದ ದೇವಾಸುರನರರೆಲ್ಲರೂ ತಮ್ಮತಮ್ಮ ಕಾರ್ಯಾರಂಭದಲ್ಲಿ ಅಗ್ರಪೂಜೆಮಾಡಿ ಮುಂದುವರೆಯಬೇಕೆಂದು ಆದೇಶಿಸಿರುತ್ತಾನೆ. ಆದ್ದರಿಂದ ಈಗಲೂ ಗಣೇಶನಿಗೆ ಅಗ್ರಪೂಜೆಯೂ ಗೌರವವೂ ಜಾರಿಯಲ್ಲಿದೆ. ಇವನ ಪ್ರಸಾದವಿಲ್ಲದೆ ಕಾರ್ಯಸಿದ್ಧಿಯೇ ಇಲ್ಲ. ಮತ್ತು ಉಳಿದ ವಿಷ್ಣು, ರಾಮ, ನರಸಿಂಹ, ದುರ್ಗೆ– ಮುಂತಾದ ದೇವತೆಗಳನ್ನು ರಾಕ್ಷಸರು ಪೂಜಿಸುವದಿಲ್ಲ. ಆದರೆ ಗಣಪತಿಯು ರಾಕ್ಷಸರಿಂದಲೂ ಪೂಜಿಸಲ್ಪಡುತ್ತಾನೆ. ಹೀಗೆ ಗಣಪತಿಯು ಯಾವಾಗಲೂ ಅಗ್ರಪೂಜ್ಯನೂ ಸಭಾಪತಿಯೂ ವ್ರಾತಪತಿಯೂ ಆಗಿ ವಿರಾಜಮಾನನಾಗಿದಾನೆ. ಅವನ ಸ್ಥಾನವು ನಿತ್ಯವೂ ಶಾಶ್ವತವೂ ಆಗಿದ್ದು ವೇದಮಂತ್ರಗಳಿಂದಲೂ ಸ್ತುತ್ಯನಾಗಿರುತ್ತಾನೆ. 'ವ್ರಾತೇಭ್ಯೋ ವ್ರಾತಪತಿಭ್ಯಃ', 'ಗಣೇಭ್ಯೋ ಗಣಪತಿಭ್ಯಃ' ಎಂಬೀ ಮಂತ್ರಗಳು ಈ ವಿಷಯಕ್ಕೆ ಪ್ರಮಾಣಗಳು. 'ಗಣಪತಯೇ' ಎಂಬ ಗುಣವಾಚಕಶಬ್ದದ ಅಭಿಪ್ರಾಯವೂ ಈ ವಿವರಣೆಯಲ್ಲಿಯೇ ಅಡಕವಾಗಿರುತ್ತದೆ.

ಈಗ 'ಪ್ರಮಥಪತಯೇ' ಎಂಬ ನಾಮವನ್ನು ವಿಚಾರಮಾಡೋಣ.

ಇದು ಸಂಜ್ಞಾನಾಮವು. ಏಕೆಂದರೆ 'ಪ್ರಮಥರು' ಎಂಬಿವರು ಪರಮೇಶ್ವರನ ಗಣಗಳಲ್ಲಿ ಒಂದು ಪಂಗಡದವರು. ಆದರೆ ಈಶ್ವರನ ಪರಿವಾರದಲ್ಲಿ ಇವರು ಬಹುಮುಖ್ಯರು. ನಂದಿ, ವೀರಭದ್ರರೇ ಮೊದಲಾದವರೆಲ್ಲ ಈ ಗುಂಪಿನಲ್ಲಿದ್ದಾರೆ. ಇಂಥ ಪ್ರಮಥರ ಗುಂಪಿಗೂ ಗಣಪತಿಯೇ ಯಜಮಾನನಾಗಿರುತ್ತಾನೆ. ಈ ಪ್ರಮಥಗಣದೇವತೆಗಳ ಅಧೀನದಲ್ಲಿಯೇ ಉಳಿದ ಎಲ್ಲಾ ಗಣದೇವತೆಗಳೂ ಇರುತ್ತಾರೆ. ಇವರುಗಳ ಮಹಿಮೆಯನ್ನು ರುದ್ರಾಧ್ಯಾಯದಲ್ಲಿ ಹೊಗಳಿದೆ. ಮನುಷ್ಯರು ಮಾಡುವ ಪಾಪಗಳಿಗೆ ತಕ್ಕಂತೆ ರೋಗ, ಬಡತನ, ಬರಗಾಲ, ಮಾನಸಿಕ ಸಂತಾಪಾದಿಗಳನ್ನು ನೀಡಿ ಇವರುಗಳು ಶಿಕ್ಷಿಸುತ್ತಾರೆ. ಆದರೆ ಇವರೆಲ್ಲ ಪರಮಶಿವಭಕ್ತರಾದ್ದರಿಂದ ಶಿವನ ಆಜ್ಞೆಯಂತೆ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಶಿವನಾದರೊ, ಈ ಗಣದೇವತೆಗಳ ಕಾರ್ಯಭಾರವನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಗಣಪತಿಗೇ ವಹಿಸಿರುತ್ತಾನೆ. ಹೀಗೆ ಗಣಪತಿಯು ಪ್ರಮಥಪತಿಯೂ ವ್ರಾತಪತಿಯೂ ಆಗಿದ್ದು ಇಡಿಯ ಜಗತ್ತಿನ ರಕ್ಷಕನೂ ಆಗಿದ್ದಾನೆ. ಆಪತ್ತುಗಳು ಸಂಭವಿಸಿದಾಗ ಇವನಲ್ಲದೆ ಬೇರೆ ಯಾರು ತಾನೆ ಜಗತ್ತನ್ನು ಕಾಪಾಡುವವರಿದ್ದಾರು?

ಈಗ ಗಣಪತಿಗೆ ನೇರಾಗಿ ಅನ್ವಯಿಸುವ ವಿಶೇಷಣಗಳನ್ನು ವಿಚಾರ ಮಾಡೋಣ. ಇವುಗಳಲ್ಲಿ ಲಂಬೋದರ, ಏಕದಂತ, ಶಿವಸುತ– ಇವುಗಳನ್ನು ನೋಡೋಣ. ಗಣಪತಿಯ ಶರೀರದಲ್ಲಿ ಹೊಟ್ಟೆಯು ಬಹಳ ದೊಡ್ಡದಾಗಿದೆ. ಇದರ ಅಂತರಾರ್ಥವೇನೆಂದರೆ: ಜಗತ್ತಿನಲ್ಲಿರುವ ಎಲ್ಲಾ ವಿದ್ಯೆಗಳೂ ಕುಶಲಕಲೆಗಳೂ ವೈದಿಕತಾಂತ್ರಿಕಶ್ರೌತಸ್ಮಾರ್ತಶಿಷ್ಟಾಚಾರಪದ್ಧತಿಗಳೂ– ಹೆಚ್ಚೇಕೆ? ಉಪನಿಷತ್ತಿನಲ್ಲಿ ಪ್ರಸ್ತಾಪಿಸಿರುವ ಪರಾಪರವಿದ್ಯೆಗಳೆಲ್ಲವೂ ಆತನ ಹೊಟ್ಟೆಯಲ್ಲಿಯೇ ಅಡಗಿವೆ. ಒಂದು ರೀತಿಯಲ್ಲಿ ಗಣಪತಿಯು 'ತುಂಬಿದ ಕೊಡ'ವಾಗಿದ್ದಾನೆ. ಲೋಕದಲ್ಲಿ ಬೇರೆ ಯಾರಿಗಾದರೂ– ಅಸುರರೇ ಮುಂತಾದವರಲ್ಲಿಯೂ ಕೆಲವರಿಗೆ ಹೊಟ್ಟೆಯು ದಪ್ಪವಾಗಿರಬಹುದಾದರೂ ಅವೆಲ್ಲ 'ಖಾಲಿಯ ಕೊಡ'ಗಳಿದ್ದಂತೆಯೇ ಸರಿ. ಏಕೆಂದರೆ ಗಣಪತಿಯಲ್ಲಿರುವ ವಿದ್ಯೆ, ಬುದ್ಧಿ, ಜಾಣ್ಮೆ, ದೈವೀಸಂಪತ್ತು, ಬ್ರಹ್ಮಜ್ಞಾನಾದಿಗಳಾವುವೂ ಅಂಥವರಲ್ಲಿರುವದಿಲ್ಲ. ಶರೀರದಿಂದ ಮಾತ್ರ ಸ್ಥೂಲವಾದ ಉದರವುಳ್ಳವರು ಬಹಳಮಟ್ಟಿಗೆ ಸೋಮಾರಿಗಳಾಗಿರುತ್ತಾರೆ. ಆದರೆ ಗಣಪತಿಯು ಅತ್ಯಂತ ಕಾರ್ಯದಕ್ಷನು. ಆತನು ಉತ್ತಮಲೇಖಕನೂ ಹೌದು.

ಆತನು ವೇದವ್ಯಾಸರು ಹೇಳಿದ ಮಹಾಭಾರತವನ್ನೆಲ್ಲ ಬರೆದಿರುತ್ತಾನೆ. ಹೀಗಿರುವಲ್ಲಿ ಆತನ ಹೊಟ್ಟೆಯಲ್ಲಿ ಬ್ರಹ್ಮಾಂಡವೆಲ್ಲ ತನ್ನ ಎಲ್ಲಾ ನಾಮರೂಪಗಳೊಡನೆ ಅಡಗಿರುತ್ತದೆ- ಎಂದೇ ತಿಳಿಯಬೇಕು. ಇದೇ ಲಂಬೋದರನ ಮಹತ್ತ್ವವೆನಿಸಿರುತ್ತದೆ. ಹಾಗೆಯೇ ಏಕದಂತನೆಂದರೆ ಒಂದು ಕೋರೆಹಲ್ಲುಳ್ಳವನು- ಎಂದರ್ಥ. ಇದರ ವೈಶಿಷ್ಟ್ಯವನ್ನು ಹಿಂದೆ ತಿಳಿಸಲಾಗಿದೆ. ಇನ್ನು 'ಶಿವಸುತ'ನೆಂದರೆ ಈಶ್ವರನ ಪುತ್ರನು. ಈತನ ತಂದೆತಾಯಿಗಳು ಪಾರ್ವತೀಪರಮೇಶ್ವರರು. ಪಾರ್ವತಿಯ ತಂದೆಯಾದ ಹಿಮವಂತನು ಈತನಿಗೆ ಮಾತಾಮಹನು. ಇನ್ನು ಈಶ್ವರನಿಗೆ ಯಾರೂ ತಂದೆಯಿಲ್ಲವಾದ್ದರಿಂದ ಇವನು ಅಪಿತಾಮಹನು- ಎಂದರೆ ತಂದೆಯಕಡೆಯ ಅಜ್ಜನಿಲ್ಲದವನು. ಒಟ್ಟಿನಲ್ಲಿ ಈ ಗಣಪತಿಯಂಥ ದೇವನು ಮತ್ತೊಬ್ಬನಿಲ್ಲ. ಇನ್ನು ಈತನು ವಿಘ್ನವಿನಾಶಕನೂ ವರದಮೂರ್ತಿಯೂ ಆಗಿರುವನು. ವಿಘ್ನಗಳೆಂದರೆ ಅಡ್ಡಿಗಳು. ಪ್ರತಿಯೊಬ್ಬರೂ ತಮ್ಮ ಕಾರ್ಯಸಾಧನೆಯಲ್ಲಿ ಒದಗುವ ಅಡ್ಡಿಗಳನ್ನು ಎದುರಿಸಲೇಬೇಕಾಗುತ್ತದೆ. ಆದರೆ ಗಣೇಶನ ಕೃಪೆಯಿದ್ದವರಿಗೆ ಈ ವಿಘ್ನಗಳು ಏನೂ ಮಾಡಲಾರವು. ಒಬ್ಬ ಸುಭಾಷಿತಕಾರನು ಹೇಳಿರುವಂತೆ- ನೀಚಜನರು (ತೀರ ಕೆಳಮಟ್ಟದವರು) ಎಲ್ಲಿ ವಿಘ್ನಗಳು ಬಂದು ಕೆಲಸವು ಪೂರೈಸದೆ ಹೋಗಬಹುದೋ- ಎಂಬ ಕಾರಣದಿಂದ ಕೆಲಸಗಳನ್ನು ಪ್ರಾರಂಭಿಸುವದೇ ಇಲ್ಲ. ಮಧ್ಯಮ ವರ್ಗದವರು ಕೆಲಸವನ್ನು ಪ್ರಾರಂಭಿಸಿ ನಡುವೆ ವಿಘ್ನವು ಬಂದಾಗ ಅದಕ್ಕೆ ಹೆದರಿ ಅಲ್ಲಿಗೇ ಕೈಬಿಡುತ್ತಾರೆ. ಆದರೆ ಉತ್ತಮಜನರಾದರೊ, (ಇಂಥವರು ಗಣಪತಿಯ ಭಕ್ತರೇ ಆಗಿರಬೇಕಷ್ಟೆ) ಎಂಥೆಂಥ ವಿಘ್ನಗಳು ಬಂದು ಕಾರ್ಯವಿಘಾತವಾದರೂ ಬಿಡದೆ ಮತ್ತೆಮತ್ತೆ ಪ್ರಯತ್ನಮಾಡಿ ಕಾರ್ಯವನ್ನು ಸಾಧಿಸಿಯೇ ತೀರುತ್ತಾರೆ. ಭಗೀರಥ, ಹನುಮಂತ-ಮುಂತಾದವರು ಇದಕ್ಕೆ ಉದಾಹರಣೆಯಾಗಿದ್ದಾರೆ. ಈಗಿನ ಕಾಲದಲ್ಲಿಯೂ ಸ್ವಾತಂತ್ರ್ಯಸಂಪಾದನೆಗಾಗಿ ಏನೇ ಅಡ್ಡಿಗಳು ಬಂದರೂ ಬಿಡದೆ ಸಾಧಿಸಿದ ಮಹಾತ್ಮಗಾಂಧಿಯವರಂಥ ಮಹನೀಯರ ಉದಾಹರಣೆಗಳಿವೆ. ಇವರೆಲ್ಲರೂ 'ಗಣಪತಿ' ಎಂಬ ಭಗವಂತನ ವರಪ್ರಸಾಧದಿಂದಲೇ ತಮ್ಮ ಕಾರ್ಯಸಿದ್ಧಿಯನ್ನು ಹೊಂದಿರುತ್ತಾರೆ- ಎಂದರೆ ತಪ್ಪಾಗಲಾರದು. ಹೀಗೆ ಯಾರುಯಾರು ಗಣಪತಿಯನ್ನಾಶ್ರಯಿಸಿರುವರೋ ಅವರಿಗೆ ಆತನು ವರದಮೂರ್ತಿಯೆನಿಸಿ ಕಾರ್ಯಸಿದ್ಧಿಯನ್ನುಂಟುಮಾಡುತ್ತಾನೆ. ವಿಘ್ನಗಳನ್ನೂ ಪರಿಹರಿಸುತ್ತಾನೆ. ಹೀಗೆಂದು ಈ ಮಂತ್ರಭಾಗದಲ್ಲಿ ಸ್ತುತಿಸಿದೆ.

ಈಗ ಉಪನಿಷತ್ತಿನಂತೆ ಗಣಪತಿಯನ್ನು ಕುರಿತು ವಿಚಾರಮಾಡಿದ್ದರ ಪರಮತಾತ್ಪರ್ಯವನ್ನು ತಿಳಿಯೋಣ. ವೇದಗಳಲ್ಲಿ ಮಾನವನ ಉದ್ಧಾರಕ್ಕಾಗಿ ತತ್ತ್ವಜ್ಞಾನ, ಉಪಾಸನೆ, ಕರ್ಮಾನುಷ್ಠಾನ– ಈ ಮೂರನ್ನೂ ಹೇಳಿದೆಯಾದರೂ ಎಲ್ಲವನ್ನೂ ಎಲ್ಲರೂ ಅನುಷ್ಠಾನಮಾಡಬೇಕೆಂದೇನೂ ಇಲ್ಲ. ಉತ್ತಮಾಧಿಕಾರಿಗಳಿಗೆ ಮಾತ್ರ ಜ್ಞಾನವು ಮುಕ್ತಿಸಾಧನವಾಗಿರುತ್ತದೆ. ಅಂಥವರು ಈ ಉಪನಿಷತ್ತಿನಲ್ಲಿ ಹೇಳಿರುವ 'ಗಣೇಶತತ್ತ್ವ'ವನ್ನರಿತು ನಮ್ಮ ಆತ್ಮನೇ ಅಪನು– ಎಂದು ತಿಳಿದು ಕೃತಾರ್ಥರಾಗಬಹುದು. ಇಂಥ ಅಧಿಕಾರಿಗಳು ತೀರ ವಿರಳರೆಂದು ಹೇಳಬೇಕಾಗಿಲ್ಲ. ಇನ್ನು ಗಣೇಶತತ್ತ್ವವನ್ನು ಉಪಾಸ್ಯೋಪಾಸಕಭೇದದಿಂದ ಕಂಡುಕೊಂಡು ಉಪಾಸಕನು ಗಣೇಶನ ಗುಣನಾಮರೂಪಗಳನ್ನು ಅನುಸಂಧಾನಮಾಡುತ್ತಾ ಮೂಲಮಂತ್ರವನ್ನು ಜಪಿಸುತ್ತಾ ಸಿದ್ಧಿಯನ್ನು ಪಡೆದು ದೇಹಪಾತಾನಂತರದಲ್ಲಿ ಗಣೇಶನ ಸಾಯುಜ್ಯವನ್ನು ಪಡೆಯಬಹುದಾಗಿದೆ. ಆದರೆ ಇಂಥ ಗಣೇಶನನ್ನು ತಮ್ಮತಮ್ಮ ಸಂಪ್ರದಾಯದಂತೆ ವೈದಿಕ–ಪೌರಾಣಿಕ–ತಾಂತ್ರಿಕರೀತಿಗಳಿಂದ ಆರಾಧನೆ, ಪೂಜೆ, ವ್ರತ, ಹೋಮಾದಿಗಳಿಂದ ತೃಪ್ತಿಗೊಳಿಸಿ ಇಷ್ಟಾರ್ಥಸಿದ್ಧಿಯನ್ನು ಹೊಂದಬಹುದು. ಆದರೆ ಇದು ಪರಮಗತಿಯಲ್ಲ. ಆದರೂ ಗಣಪತಿ ದೇವಾಲಯದ ನಿರ್ಮಾಣ, ಮೂರ್ತಿಪೂಜೆ, ಸಂಕಷ್ಟಚತುರ್ಥಿ, ಸಾಮೂಹಿಕ ವ್ರತ– ಇತ್ಯಾದಿ ಸತ್ಕಾರ್ಯಗಳೂ ಗಣಪತಿಯೆಂಬ ಭಗವಂತನ ಪ್ರಾಪ್ತಿಗೆ ದ್ವಾರಗಳೇ– ಎಂಬೀ ವಿಷಯದಲ್ಲಿ ಸಂದೇಹವಿಲ್ಲ. ಇಂಥ ಸತ್ಕಾರ್ಯಗಳನ್ನು ಆರಂಭದಲ್ಲಿ ಸಾಮಾನ್ಯಭಕ್ತಿಶ್ರದ್ಧೆಗಳಿಂದ ಆರಂಭಿಸಿದರೂ ಅನುಷ್ಠಾನಮಾಡಿದಂತೆಲ್ಲ ಗಣಪತಿಯ ತತ್ತ್ವವೇನೆಂಬುದನ್ನು ತಿಳಿಯಲು ಭಕ್ತರು ಏರ್ಪಡಿಸಿಕೊಳ್ಳಬೇಕು. ಗಣಪತಿಯು ಬ್ರಹ್ಮವಿದ್ಯಾಸಂಪನ್ನನು. ಆತನಿಗೆ ತನ್ನ ತಂದೆಯೇ ಜಗತ್ತನ್ನೆಲ್ಲ ವ್ಯಾಪಿಸಿರುವನೆಂಬ ನಿಜವು ತಿಳಿದಿದೆ. ತಾನು ಸಹ ಸ್ವರೂಪದಿಂದ ತನ್ನ ತಂದೆಗಿಂತ ಬೇರೆಯಿಲ್ಲವೆಂಬ ತಿಳಿವಳಿಕೆಯುಳ್ಳವನಾಗಿದಾನೆ. ಹೀಗೆ ಗಣಪತಿಯ ಆರಾಧನೆಯು ಮೋಕ್ಷ ದಾಯಕವೇ ಸರಿ. ಒಟ್ಟಿನಲ್ಲಿ ಏನು ಮಾಡುತ್ತೇವೋ ಅದರ ತಿರುಳನ್ನು ಅರಿತು ಅನುಷ್ಠಾನಮಾಡಿದಲ್ಲಿ ಸಾಧಕರು ಕೃತಾರ್ಥರಾಗುವದರಲ್ಲಿ ಸಂಶಯವಿಲ್ಲ.

*****

# ಫಲಶ್ರುತಿ

ಏತದಥರ್ವ ಶೀರ್ಷಂ ಯೋಽಧೀತೇ  ಸ ಬ್ರಹ್ಮಭೂಯಾಯ ಕಲ್ಪತೇ ।
ಸ ಸರ್ವವಿಘ್ನೈರ್ನ ಬಾಧ್ಯತೇ । ಸ ಸರ್ವತಃ ಸುಖಮೇಧತೇ ।
ಸ ಪಂಚಮಹಾಪಾಪಾತ್ಪ್ರಮುಚ್ಯತೇ ।
ಸಾಯಮಧೀಯಾನೋ ದಿವಸಕೃತಂ ಪಾಪಂ ನಾಶಯತಿ ।
ಪ್ರಾತರಧೀಯಾನೋ ರಾತ್ರಿಕೃತಂ ಪಾಪಂ ನಾಶಯತಿ ।
ಸಾಯಂಪ್ರಾತಃ ಪ್ರಯುಂಜಾನೋ ಪಾಪೋಽಪಾಪೋ ಭವತಿ ।
ಸರ್ವತ್ರಾಧೀಯಾನೋಽಪವಿಘ್ನೋ ಭವತಿ ।
ಧರ್ಮಾರ್ಥಕಾಮಮೋಕ್ಷಂ ಚ ವಿಂದತಿ ।
ಇದಮಥರ್ವಶೀರ್ಷಮಶಿಷ್ಯಾಯ ನ ದೇಯಮ್ ।
ಯೋ ಯದಿ ಮೋಹಾದ್ದಾಸ್ಯತಿ ಸ ಪಾಪೀಯಾನ್ ಭವತಿ ।
ಸಹಸ್ರಾವರ್ತನಾದ್ಯಂ ಯಂ ಕಾಮಮಧೀತೇ ತಂ ತಮನೇನ ಸಾಧಯೇತ್ ॥
ಅನೇನ ಗಣಪತಿಮಭಿಷಿಂಚತಿ ಸ ವಾಗ್ಮೀ ಭವತಿ ।
ಚತುರ್ಥ್ಯಾಮನಶ್ನಜ್ಜಪತಿ ಸ ವಿದ್ಯಾವಾನ್ಭವತಿ । ಇತ್ಯಥರ್ವಣವಾಕ್ಯಮ್ ।
ಬ್ರಹ್ಮಾದ್ಯಾವರಣಂ ವಿದ್ಯಾನ್ನ ಬಿಭೇತಿ ಕದಾಚನೇತಿ ॥
ಯೋ ದೂರ್ವಾಂಕುರೈರ್ಯಜತಿ ಸ ವೈಶ್ರವಣೋಪಮೋ ಭವತಿ ।
ಯೋ ಲಾಜೈರ್ಯಜತಿ ಸ ಯಶೋವಾನ್ಭವತಿ । ಸ ಮೇಧಾವಾನ್ಭವತಿ ।
ಯೋ ಮೋದಕಸಹಸ್ರೇಣ ಯಜತಿ ಸ ವಾಂಛಿತಫಲಮವಾಪ್ನೋತಿ ।
ಯಃ ಸಾಜ್ಯಸಮಿದ್ಭಿರ್ಯಜತಿ ಸ ಸರ್ವಂ ಲಭತೇ ಸ ಸರ್ವಂ ಲಭತೇ ॥
ಅಷ್ಟೌ ಬ್ರಾಹ್ಮಣಾನ್ ಸಮ್ಯಗ್ಗ್ರಾಹಯಿತ್ವಾ ಸೂರ್ಯವರ್ಚಸ್ವೀ ಭವತಿ ।
ಸೂರ್ಯಗ್ರಹೇ ಮಹಾನದ್ಯಾಂ ಪ್ರತಿಮಾಸನ್ನಿಧೌ ವಾ ಜಪ್ತ್ವಾ ಸಿದ್ಧಮಂತ್ರೋ ಭವತಿ।
ಮಹಾವಿಘ್ನಾತ್ಪ್ರಮುಚ್ಯತೇ । ಮಹಾದೋಷಾತ್ಪ್ರಮುಚ್ಯತೇ ।
ಮಹಾಪಾಪಾತ್ಪ್ರಮುಚ್ಯತೇ। ಮಹಾಪ್ರತ್ಯವಾಯಾತ್ಪ್ರಮುಚ್ಯತೇ ।
ಸ ಸರ್ವವಿದ್ಭವತಿ ಸ ಸರ್ವವಿದ್ಭವತಿ । ಯ ಏವಂ ವೇದ ॥

– ಗಣಪತ್ಯುಪನಿಷತ್ತು 11

**ಭಾವಾರ್ಥ** : ಯಾವನು ಈ ಅಥರ್ವಶಿರ ಉಪನಿಷತ್ತನ್ನು ಅಧ್ಯಯನ ಮಾಡುವನೋ ಅವನು ಬ್ರಹ್ಮಭವನ (ಮೋಕ್ಷ) ಕ್ಕೆ ಅರ್ಹನಾಗುವನು. ಎಲ್ಲೆಲ್ಲಿಯೂ ಸುಖವನ್ನು ಹೊಂದುವನು ..... ಇತ್ಯಾದಿ ಫಲಗಳನ್ನು ಪಡೆದವನಾಗಿ ಎಲ್ಲವನ್ನೂ ಬಲ್ಲ ಸರ್ವಜ್ಞನಾಗುವನು.

[ಈ ಗಣಪತ್ಯುಪನಿಷತ್ತನ್ನು ಅಧ್ಯಯನಮಾಡುವದು, ಅಧ್ಯಾಪನಮಾಡಿಸುವದು, ಜಪಮಾಡುವದು, ಹೋಮಮಾಡುವದು- ಇತ್ಯಾದಿ ರೂಪಗಳಿಂದ ಸಾಧಕನು ಬಳಸಿಕೊಂಡರೆ ಆಯಾ ವಿಶೇಷಫಲಗಳನ್ನು ಪಡೆಯುತ್ತಾನೆ. ಕಡೆಗೆ ಗಣಪತಿಯ ಅನುಗ್ರಹದಿಂದ ಸರ್ವಜ್ಞನಾಗಿ ಮುಕ್ತಿಯನ್ನು ಹೊಂದುತ್ತಾನೆ- ಎಂದಭಿಪ್ರಾಯ.]

## ಗಣಪತ್ಯುಪನಿಷತ್ತಿನ ಫಲಸಂಕೀರ್ತನೆ

ಗಣಪತ್ಯಥರ್ವಶೀರ್ಷ ಉಪನಿಷತ್ತಿನ ಕಡೆಯಭಾಗವಾದ ಫಲಶ್ರುತಿಯನ್ನು ಈಗ ವಿಚಾರಮಾಡಬೇಕಾಗಿದೆ. ಸಾಮಾನ್ಯವಾಗಿ ಕರ್ಮೋಪಾಸನೆಗಳಿಗೆ ಬೇರೆ ಬೇರೆಯ ಫಲಸಂಕೀರ್ತನೆಮಾಡಿರುವದು ಎಲ್ಲಾ ಕಡೆಯಲ್ಲಿಯೂ ಕಂಡುಬರುತ್ತದೆ. ಜ್ಞಾನಕ್ಕಾದರೊ, ಮೋಕ್ಷವೊಂದೇ ಫಲವು. ಆದ್ದರಿಂದ ಈ ಉಪನಿಷತ್ತನ್ನು ಜ್ಞಾನಸಾಧನವಾಗಿ ಬಳಿಸಿಕೊಂಡವನಿಗೆ ಬ್ರಹ್ಮಪ್ರಾಪ್ತಿಯೇ ಫಲವಾಗಿರುತ್ತದೆ. ಬ್ರಹ್ಮವನ್ನೇ ಈ ಉಪನಿಷತ್ತಿನಲ್ಲಿ ಗಣಪತಿ- ಎಂದು ತಿಳಿಸಿರುವದರಿಂದ ಈ ಫಲವು ಮುಕ್ತಿಯೇ ಎಂಬಿದು ನಿಶ್ಚಯವಾಗಿದೆ. ಆದರೆ ಈ ಉಪನಿಷತ್ತನ್ನು ಮುಕ್ತಿಸಾಧನವಾಗಿಯೇ ಬಳಸಿಕೊಳ್ಳುವ ಸಾಧಕರ ಸಂಖ್ಯೆ ತೀರ ವಿರಳವಾಗಿರುತ್ತದೆ. ಆದ್ದರಿಂದ ಮುಕ್ತಿಗಿಂತ ಕೆಳಗಿನ ಅಂತಸ್ತಿನ ಫಲಗಳನ್ನೂ ಸಂಕೀರ್ತನೆಮಾಡಿರುತ್ತದೆ. ಅವುಗಳ ವಿವರವನ್ನು ಈಗ ತಿಳಿಯೋಣ.

ಮೊದಲನೆಯದಾಗಿ ಈ ಉಪನಿಷತ್ತನ್ನು ಯಾವನು ಅಧ್ಯಯನ ಮಾಡುವನೋ ಅವನು ಬ್ರಹ್ಮವನ್ನು ಅರಿತವನಾಗಿ ಮೋಕ್ಷಕ್ಕೆ ತಕ್ಕವನಾಗುತ್ತಾನೆ- ಎಂಬ ಫಲವನ್ನು ತಿಳಿಸಿದೆ. ಇದೇ ನಿಜವಾಗಿ ಪರಮಫಲವು. ಏಕೆಂದರೆ ಉಪನಿಷತ್ತುಗಳು ಹೊರಟಿರುವದೇ ಬ್ರಹ್ಮಜ್ಞಾನದ ಮೂಲಕ ಮೋಕ್ಷಪ್ರಾಪ್ತಿಯನ್ನು ಸಾಧಕನಿಗೆ ಉಂಟುಮಾಡುವದಕ್ಕಾಗಿದೆ. ಆದರೆ ಮೋಕ್ಷಪ್ರಾಪ್ತಿಗೆ ಅನೇಕ

ವಿಘ್ನಗಳಿರುವದರಿಂದ ಅವುಗಳನ್ನೆಲ್ಲ ಸಾಧಕನು ದಾಟಬೇಕಾಗುವದು. ಕೆಲವುವೇಳೆ ಮುಕ್ತಿಗಾಗಿ ಪ್ರಯತ್ನಿಸುವವನಿಗೆ ದೇವತೆಗಳೇ ವಿಘ್ನಮಾಡುತ್ತಾರೆ– ಎಂದು ಬೃಹದಾರಣ್ಯಕೋಪನಿಷತ್ತಿನಲ್ಲಿದೆ. ಕಾರಣವೇನೆಂದರೆ ಆ ಸಾಧಕನು ತಮಗಿಂತ ಮೇಲಿನ ಪದವಿಯನ್ನು ಪಡೆದುಬಿಡುತ್ತಾನೆಂಬುದೇ ಆಗಿದೆ. ಆದರೆ ಯಾವ ಮುಮುಕ್ಷುವು ದೇವತೆಗಳನ್ನೇ ಮೊರೆಹೊಕ್ಕು ತನಗೆ ಮೋಕ್ಷಫಲವನ್ನೇ ಕೊಡಿಸಬೇಕೆಂದು ದೇವತೆಗಳಲ್ಲಿಯೇ ಬೇಡಿಕೊಳ್ಳುತ್ತಾನೋ ಅಂಥವನಿಗೆ ಮಾತ್ರ ದೇವತೆಗಳು ವಿಘ್ನವನ್ನು ಉಂಟುಮಾಡುವದಿಲ್ಲ. ಅದಕ್ಕೆ ಬದಲಾಗಿ ಅವನಿಗೆ ಭಕ್ತಿ, ಶ್ರದ್ಧೆ, ವಿವೇಕ, ವೈರಾಗ್ಯಗಳನ್ನೇ ಕರುಣಿಸಿ ಮುಕ್ತಿಗೆ ಅರ್ಹನಾಗುವಂತೆ ಮಾಡುತ್ತಾರೆ– ಎಂದು ಶಂಕರಾಚಾರ್ಯರು ತಮ್ಮ ಭಾಷ್ಯದಲ್ಲಿ ತಿಳಿಸಿದ್ದಾರೆ. ಆದ್ದರಿಂದ ಮುಮುಕ್ಷುವು ದೇವತಾರಾಧನತತ್ಪರನಾಗಿರಬೇಕು– ಎಂದು ಅವರ ಅಭಿಪ್ರಾಯ. ಯಾವನು ಗಣಪತಿ ಎಂಬ ದೇವತೆಯನ್ನು ಮುಮುಕ್ಷುವಾಗಿ ಆರಾಧಿಸುವನೋ– ಅದಕ್ಕೆ ಹಿನ್ನೆಲೆಯಾಗಿ ಗಣಪತಿಯ ತತ್ತ್ವವನ್ನೇ ಪ್ರತಿಪಾದಿಸುವ ಈ ಉಪನಿಷತ್ತನ್ನು ಅಧ್ಯಯನಮಾಡುವನೋ ಅವನು ಉತ್ತರೋತ್ತರವಾಗಿ ಬ್ರಹ್ಮಭಾವ– ಎಂದರೆ ಮುಕ್ತಿಯನ್ನು ಯಾವ ಅಡೆತಡೆಗಳೂ ಇಲ್ಲದೆ ಪಡೆಯುವನು– ಎಂದಭಿಪ್ರಾಯ.

ಈಗ ಈ ಮಹಾಫಲವನ್ನು ಬಯಸದೆ ಇದಕ್ಕಿಂತ ಕಡಿಮೆಯ ಫಲಗಳನ್ನು ಬಯಸುವವರಿಗೂ ಈ ಉಪನಿಷತ್ತಿನ ಅಧ್ಯಯನ, ಹಾಗೂ ಕಾಮ್ಯವಾಗಿ ಬಳಸಿಕೊಳ್ಳುವದರ ವಿವರಗಳನ್ನು ತಿಳಿಸಲಾಗುವದು. ಈ ಅಂತಸ್ತಿನಲ್ಲಿ ಮೊದಲನೆಯದಾಗಿ ಪಾಪಪರಿಹಾರವೆಂಬ ಫಲವನ್ನು ಹೇಳಿದೆ. ಪಾಪಗಳನ್ನು ಮಹಾಪಾತಕಗಳು, ಉಪಪಾತಕಗಳು– ಎಂದು ವಿಂಗಡಿಸಲಾಗಿದೆ. ಬ್ರಹ್ಮಹತ್ಯೆ, ಸುರಾಪಾನ, ಸುವರ್ಣವನ್ನು ಕದಿಯುವದು, ಗುರುಪತ್ನಿಯನ್ನು ಅಭಿಗಮನ ಮಾಡುವದು, ಇಂಥ ಕೆಲಸಗಳನ್ನು ಮಾಡಿದವರ ಸಹವಾಸವನ್ನು ಮಾಡುವದು– ಈ ಐದೂ ಮಹಾಪಾತಕಗಳೆನಿಸುತ್ತವೆ. ಇವುಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ವಿಧವಾದ ಕೆಟ್ಟ ಕೆಲಸಗಳೂ ಉಪಪಾತಕಗಳೆನಿಸುತ್ತವೆ. ತಿಳಿದೊ, ತಿಳಿಯದೆಯೊ, ಸನ್ನಿವೇಶಗಳಿಗೆ ವಶನಾಗಿಯೊ– ಇಂಥ ಮಹಾಪಾಪ– ಉಪಪಾಪಗಳನ್ನು ಮಾಡಿದವನುಕೂಡ ಈ ಉಪನಿಷತ್ತನ್ನು ಅಧ್ಯಯನಮಾಡಿದ್ದೇ

ಆದರೆ ಆ ಎಲ್ಲಾ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ– ಎಂದು ಫಲಸಂಕೀರ್ತನೆಮಾಡಲಾಗಿದೆ. ಆದರೆ ಮಾಡಬಾರದ ಕೆಲಸಗಳನ್ನು ಮಾಡಿದವನಿಗೆ, ಈ ಉಪನಿಷತ್ತಿನ ವಿಚಾರವಾಗಲಿ, ಇದರ ಅಧ್ಯಯನವಾಗಲಿ ಒದಗುವದು ತೀರ ಅಪರೂಪವೇ ಸರಿ. ಒಂದು ವೇಳೆ ಒದಗಿದರೆ ಅವನಿಗೆ ಪಾಪಗಳು ಕ್ಷಯವಾಗುವ ಕಾಲವು ಒದಗಿದೆಯೆಂದು ತಿಳಿಯಬೇಕು. ಇನ್ನು ಮುಮುಕ್ಷುವಾದವನಿಗೂ ಪಾಪಕ್ಷಯವು ಅವಶ್ಯವಾಗಿ ಆಗಲೇಬೇಕು. ಏಕೆಂದರೆ ಪಾಪಗಳು ಕ್ಷಯಿಸದೆ ಚಿತ್ತಶುದ್ಧಿಯಾಗುವದಿಲ್ಲ. ಅದು ಆಗದೆ ಜ್ಞಾನವಾಗಲಿ, ಮುಕ್ತಿಯಾಗಲಿ ಸಿದ್ಧಿಸುವದಿಲ್ಲ. ಆದ್ದರಿಂದ ಈ ಉಪನಿಷತ್ತಿನ ಪಾರಾಯಣವು ಮಂದಾಧಿಕಾರಿಗಳಿಂದಾರಂಭಿಸಿ ಉತ್ತಮಾಧಿಕಾರಿಗಳವರೆಗೂ ಪ್ರಯೋಜನವಾಗಿದೆ.

ಈಗ ಫಲಶ್ರುತಿಯ ಮುಂದಿನ ಭಾಗವನ್ನು ವಿಚಾರಿಸೋಣ. ಈ ಉಪನಿಷತ್ತನ್ನು ಸಾಯಂಕಾಲ ಹಾಗೂ ಪ್ರಾತಃಕಾಲಗಳೆರಡರಲ್ಲಿಯೂ ಪರಾಯಣಮಾಡಬೇಕೆಂದು ತಿಳಿಸಲಾಗಿದೆ. ರಾತ್ರೆಯಲ್ಲಿ ಪಾರಾಯಣ ಮಾಡುವದರಿಂದ ಹಗಲಿನಲ್ಲೆಲ್ಲ ಮಾಡಿದ ಪಾಪಗಳು ನಾಶವಾಗುತ್ತವೆ. ಹಾಗೆಯೇ ಬೆಳಗಿನವೇಳೆಯಲ್ಲಿ ಪಾರಾಯಣಮಾಡುವದರಿಂದ ರಾತ್ರಿಯಲ್ಲಿ ಮಾಡಿದ ಪಾಪಗಳೆಲ್ಲವೂ ನಾಶವಾಗುತ್ತವೆ. ಇನ್ನು ಎರಡು ವೇಳೆಗಳಲ್ಲಿಯೂ ತಪ್ಪದೆ ಪಾರಾಯಣಮಾಡಿದರೆ ಸಂಪೂರ್ಣವಾಗಿ ನಿಷ್ಪಾಪನಾಗುತ್ತಾನೆ. ಮತ್ತು ಧರ್ಮಾದಿಚತುರ್ವಿಧಪುರುಷಾರ್ಥಗಳನ್ನೂ ಪಡೆಯುತ್ತಾನೆ– ಎಂದು ತಿಳಿಸಿದೆ. ಆದರೆ ಹೇಗೂ ಉಪನಿಷತ್‌ಪಾರಾಯಣವನ್ನು ಮಾಡುವದರಿಂದ ಯಾವ ಪಾಪಕಾರ್ಯವನ್ನಾದರೂ ಮಾಡಿಯೂ ಜಯಿಸಿಕೊಳ್ಳಬಹುದು– ಎಂದು ಮಾತ್ರ ತಿಳಿಯಬಾರದು. ಏಕೆಂದರೆ ಈ ಫಲಶ್ರುತಿವಾಕ್ಯಕ್ಕೆ ಉಪನಿಷತ್ ಪಾರಾಯಣವನ್ನು ಮಾಡಬೇಕೆಂದು ತಿಳಿಸುವದರಲ್ಲಿಯೇ ತಾತ್ಪರ್ಯವೇ ಹೊರತು ಬೇರೆ ಏನೂ ಅಲ್ಲ. ಆದ್ದರಿಂದ ತಿಳಿದೂ ಪಾಪಮಾಡುವದು ಖಂಡಿತವಾಗಿಯೂ ಶ್ರೇಯಸ್ಕರವಲ್ಲ.

ಈಗ ಈ ವಿದ್ಯೆಯನ್ನು ಶಿಷ್ಯನಲ್ಲದವನಿಗೆ ಕೊಡಬಾರದು ಎಂದು ತಿಳಿಸುತ್ತಾರೆ. ಏಕೆಂದರೆ ವಿದ್ಯೆಗೆ ಅಗೌರವಮಾಡಿದಂತಾಗುವದು. ಹಸಿವಿಲ್ಲದವನಿಗೆ ಊಟವನ್ನು ಬಡಿಸುವದರಿಂದ ಪ್ರಯೋಜನವೇನು? ಹಾಗೆ ಮಾಡಿದರೆ ಅವನು ಅಡಿಗೆಯನ್ನೆಲ್ಲ ಚೆಲ್ಲಿ ವ್ಯರ್ಥಮಾಡುತ್ತಾನೆ. ಹಾಗೆಯೇ ಬೇಡದವನಿಗೆ ಈ

ವಿದ್ಯೆಯನ್ನು ಹೇಳಿಕೊಟ್ಟರೆ ಅದು ದುರುಪಯೋಗವೂ ಆಗಬಹುದು. ಆದ್ದರಿಂದ ಶಿಷ್ಯನಲ್ಲದವನಿಗೆ ಈ ವಿದ್ಯೆಯನ್ನು ಕೇವಲ ಅಭಿಮಾನ ಹಾಗೂ ವ್ಯಾಮೋಹಕ್ಕೆ ವಶನಾಗಿ ಹೇಳಿಕೊಟ್ಟರೆ ಅಂಥವನು ಪಾಪಿಯೆನಿಸುವನು. ಇದು ಎಲ್ಲಾ ವಿದ್ಯೆಗೂ ಅನ್ವಯಿಸುತ್ತದೆ. ವಿದ್ಯೆಯು ಯಾವದೇ ಆಗಲಿ, ಅದು ಎಂದೆಂದಿಗೂ ನೀಚನನ್ನು ಸೇರಲಾರದು. ಮನುಸ್ಮೃತಿಯಲ್ಲಿ ಹೇಳಿರುವಂತೆ ವಿದ್ಯೆಯು ಅದನ್ನು ಕಲಿತವನ ಬಳಿಗೆ ಬಂದು 'ಅಯ್ಯ, ನನ್ನನ್ನು ಅಯೋಗ್ಯನಿಗೆ ಮಾತ್ರ ದಾನಮಾಡಬೇಡ'– ಎಂದು ಕೇಳಿಕೊಳ್ಳುತ್ತದೆಯಂತೆ. ಆದ್ದರಿಂದ ಯಾವನೊಬ್ಬ ಜಾಣನೂ ತಾನು ಕಲಿತಿರುವ ಸದ್ವಿದ್ಯೆಯನ್ನು ಶಿಷ್ಯನಲ್ಲದವನಿಗೆ ಉಪದೇಶಿಸುವದಿಲ್ಲ.

ಈಗ ಈ ಉಪನಿಷತ್ತನ್ನು ಬೇರೆಬೇರೆಯ ರೀತಿಗಳಲ್ಲಿ ಬಳಸಿಕೊಳ್ಳುವ ಮೂಲಕ ಬೇರೆಬೇರೆಯ ಕಾಮ್ಯಫಲಗಳನ್ನು ಪಡೆಯಬಹುದು– ಎಂದು ತಿಳಿಸಲಾಗುವದು. (1) ಇದನ್ನು ಒಂದು ಸಾವಿರಬಾರಿ ಆವರ್ತನಮಾಡಿದರೆ– ಎಂದರೆ ಪಾರಾಯಣಮಾಡಿದರೆ ಯಾವಯಾವ ಫಲವನ್ನು ಇಚ್ಛಿಸಿ ಮಾಡುತ್ತಾರೋ ಆಯಾ ಫಲಗಳು ಸಿದ್ಧಿಸುತ್ತವೆ. ಆದ್ದರಿಂದ ಸಹಸ್ರಾವರ್ತನ ಪಾರಾಯಣವು ಎಲ್ಲಾ ರೀತಿಯ ಕೋರಿಕೆಗಳನ್ನೂ ಈಡೇರಿಸಿಕೊಳ್ಳಲು ಸಾಧನವಾಗಿರುತ್ತದೆ– ಎಂದಭಿಪ್ರಾಯ. (2) ಇನ್ನು ಯಾವನು ಈ ಉಪನಿಷತ್‌ಪಾಠದಿಂದ ಗಣಪತಿಗೆ ಅಭಿಷೇಕವನ್ನು ಮಾಡುತ್ತಾನೋ ಅಂಥವನು ವಾಚಾಳಿಯಾಗುತ್ತಾನೆ. ವಾಚಾಳಿ– ಎಂದರೆ ತಾನು ತಿಳಿಸಬೇಕಾದ ವಿಷಯಗಳನ್ನು ಚೆನ್ನಾಗಿ ಮನದಟ್ಟಾಗುವಂತೆ ಯುಕ್ತಿ, ಉದಾಹರಣಾದಿಗಳ ಪೂರ್ವಕವಾಗಿ ಸರಳವಾಗಿ ಪ್ರತಿಪಾದಿಸಿ ಜನರನ್ನು ವಶಪಡಿಸಿಕೊಳ್ಳುವದು– ಎಂದರ್ಥ. ವ್ಯವಹಾರಕ್ಕೆ ಇದು ಬೇಕಾಗಿರುತ್ತದೆ. ಇನ್ನು ಶಾಸ್ತ್ರಗಳನ್ನು ತಾನು ಅಭ್ಯಾಸಮಾಡಿದ್ದರೂ ಬೇರೊಬ್ಬರಿಗೆ ಬೋಧಿಸುವದಕ್ಕೆ ವಾಚಾಳಿತನವು ಬೇಕಾಗುತ್ತದೆ. ಇದೊಂದು ವಿಶೇಷ ಅರ್ಹತೆಯೇ ಸರಿ. ಉಪನ್ಯಾಸಕರು, ಪುರಾಣಿಕರು, ಲಾಯರುಗಳು, ದಲ್ಲಾಳಿಗಳು– ಮುಂತಾದ ವರ್ಗದವರಿಗೆಲ್ಲ ಮಾತಿನ ಚಮತ್ಕಾರವು ಬೇಕಾಗುತ್ತದೆ. ಇಂಥವರೆಲ್ಲ ಈ ಉಪನಿಷತ್ತನ್ನು ಅಭ್ಯಾಸಮಾಡಿ ಗಣಪತಿಗೆ ಅಭಿಷೇಕವನ್ನು ಮಾಡುತ್ತಿದ್ದರೆ ಇಂತವರ ಮಾತಿಗೆ ಜನರು ವಶರಾಗುವರು, ಹಾಗೂ ತಮ್ಮ ಮೆಚ್ಚುಗೆಯನ್ನೂ ತೋರಿಸುವರು. ದೇವತೆಗಳಲ್ಲಿ ಬೃಹಸ್ಪತಿಯು ಹೆಚ್ಚಿನ ವಾಗ್ಮಿಯೆಂದು

ಪರಿಗಣಿಸಲ್ಪಟ್ಟಿದಾನೆ. ಹಾಗೆ ಬೃಹಸ್ಪತಿಯಂತೆ ವಾಚಾಳಿಯಾಗುವನು– ಎಂದರ್ಥ. (3) ಇನ್ನು ಚತುರ್ಥಿಯ ದಿನ ಏನನ್ನೂ ತಿನ್ನದೆ ಉಪವಾಸವಿರುವವನಾಗಿ ಈ ಉಪನಿಷತ್ತನ್ನು ಜಪಮಾಡಿದರೆ ಅಂಥವನು ವಿದ್ಯಾವಂತನಾಗುವನು. ವಿದ್ಯಾರ್ಥಿಗಳೆಲ್ಲರೂ ಇದನ್ನು ಗಮನಿಸಬೇಕು. ಪ್ರತಿಮಾಸದಲ್ಲಿಯೂ ಶುಕ್ಲ– ಮತ್ತು ಕೃಷ್ಣ ಈ ಎರಡೂ ಚತುರ್ಥಿ ತಿಥಿಗಳ ದಿನದಲ್ಲಿ ಈ ಉಪನಿಷತ್ತನ್ನು ಅರ್ಥಾನುಸಂಧಾನಸಮೇತವಾಗಿ ಪಠಿಸಬೇಕು. ಇದರಿಂದ ದಡ್ಡರೂ ಬುದ್ಧಿವಂತರಾಗುವ ಸಂಭವವಿದೆ. ಬುದ್ಧಿವಂತರು ವಿಶೇಷಬುದ್ಧಿವಂತರಾಗುವರು. ಹೀಗೆಂದು ಅಥರ್ವಣಋಷಿಗಳು ಹೇಳಿರುತ್ತಾರೆ. ಈ ರೀತಿಯಾಗಿ ಬ್ರಹ್ಮಾದಿಗಳೂ ಆಚರಿಸಿರುತ್ತಾರೆ– ಎಂದು ತಿಳಿಯಬೇಕು. ಬ್ರಹ್ಮಾದಿಗಳಂಥ ಹಿರಿಯರೂ ಶಿಷ್ಟರೂ ಆಚರಿಸಿ ತೋರಿಸಿಕೊಟ್ಟಿರುವ ಮಾರ್ಗಗಳಿವು– ಎಂದಭಿಪ್ರಾಯ. ಆದ್ದರಿಂದ ಈ ಮಾರ್ಗದಲ್ಲಿ ನಡೆಯುವದರಿಂದ ಯಾವ ಭಯವೂ ಇರುವದಿಲ್ಲ– ಎಂದು ಸ್ತುತಿಸಿ ಹೇಳಲಾಗಿದೆ. (4) ಇನ್ನು ಯಾವನು ದೂರ್ವೆ (ಗರಿಕೆ) ಚಿಗುರುಗಳಿಂದ ಈ ಮಂತ್ರಗಳನ್ನು ವಿನಿಯೋಗಿಸಿ ಹೋಮವನ್ನು ಮಾಡುವನೋ ಅವನು ಕುಬೇರನಿಗೆ ಸರಿಸಮಾನವಾದ ಐಶ್ವರ್ಯವುಳ್ಳವನಾಗುವನು. ಕುಬೇರನು ಧನಾಧಿಪತಿಯು. ನವನಿಧಿಗಳ ಒಡೆಯನು. ಸಾಧಕನು ಇಂಥ ಪರಮವಾದ ಐಶ್ವರ್ಯವುಳ್ಳವನಾಗುತ್ತಾನೆ ಎಂದಭಿಪ್ರಾಯ. (5) ಇನ್ನು ಯಾವನು ಅರಳನ್ನುಪಯೋಗಿಸಿ ಈ ಮಂತ್ರಗಳಿಂದ ಹೋಮವನ್ನು ಮಾಡುವನೋ ಅವನು ಕೀರ್ತಿವಂತನೂ ಯಶೋವಂತನೂ ಆಗುವನು. ಮತ್ತು ಮೇಧಾವಂತನು– ಎಂದರೆ ಓದಿರುವದನ್ನೆಲ್ಲ ನೆನಪಿಟ್ಟುಕೊಂಡು ಬಳಸುವ ಅಸಾಧರಣವಾದ ಶಕ್ತಿಯುಳ್ಳವನಾಗುವನು. (6) ಇನ್ನು ಯಾವನು ಸಹಸ್ರಮೋದಕಗಳಿಂದ ಈ ಉಪನಿಷತ್ತನ್ನು ಬಳಸಿಕೊಂಡು ಹೋಮಮಾಡುತ್ತಾನೋ ಅಂಥವನು ತಾನು ಬಯಸಿದ ಇಷ್ಟಫಲಗಳೆಲ್ಲವನ್ನೂ ಪಡೆಯುತ್ತಾನೆ. (7) ಇನ್ನು ಯಾವನು ತುಪ್ಪದಿಂದ ಅದ್ದಿದ ಸಮಿತ್ತುಗಳಿಂದ ಹೋಮಮಾಡುವನೋ ಅವನು ಎಲ್ಲಾ ರೀತಿಯ ಕಾಮ್ಯಫಲಗಳನ್ನೂ ಪಡೆದೇ ಪಡೆಯುತ್ತಾನೆ. (8) ಇನ್ನು ಯಾವನು ಎಂಟುಜನ ಬ್ರಾಹ್ಮಣರಿಗೆ ಈ ಉಪನಿಷತ್ತನ್ನು ಪಾಠಹೇಳಿ ಕಲಿಸಿಕೊಡುತ್ತಾನೋ ಅಂಥವನು ಸೂರ್ಯನಂತೆ ತೇಜಸ್ವಿಯಾಗುತ್ತಾನೆ. (9) ಸೂರ್ಯಗ್ರಹಣಕಾಲದಲ್ಲಿ ಈ ಉಪನಿಷತ್ತನ್ನು ಮಹಾನದೀತೀರದಲ್ಲಾಗಲಿ, ಗಣಪತಿಯ ವಿಗ್ರಹದ

ಸನ್ನಿಧಿಯಲ್ಲಾಗಲಿ ಜಪಿಸಿದರೆ ಮಂತ್ರಸಿದ್ಧಿಯನ್ನು ಹೊಂದುವನು ಮತ್ತು ಮಹಾವಿಘ್ನಗಳಿಂದಲೂ ಮಹಾದೋಷಗಳಿಂದಲೂ ಮಹಾಪಾಪಗಳಿಂದಲೂ ಮುಕ್ತನಾಗುತ್ತಾನೆ. ಮತ್ತು ಸರ್ವವನ್ನೂ ಬಲ್ಲವನಾಗುತ್ತಾನೆ– ಎಂಬಿದು ಫಲಶ್ರುತಿಯಾಗಿದೆ. ಇಂಥ ಮಹಿಮಾನ್ವಿತವಾದ ಉಪನಿಷತ್ತು ಪರಮಾತ್ಮನನ್ನೇ ಗಣಪತಿಯೆಂದು ಸ್ತುತಿಸಿ ಹೇಳಿರುವದಲ್ಲದೆ ನಾನಾರೀತಿಯ ಫಲಪ್ರಾಪ್ತಿಗೆ ಈ ಮಂತ್ರಗಳನ್ನು ಬಳಸುವ ಕ್ರಮವನ್ನೂ ತಿಳಿಸಿಕೊಟ್ಟಿದೆ. ನಾವೆಲ್ಲರೂ ಈ ಉಪನಿಷದಧ್ಯಯನಾನುಷ್ಠಾನಗಳನ್ನು ಕೈಗೊಂಡು ಶ್ರೀಮಹಾಗಣಪತಿಯ ಕೃಪೆಗೆ ಪಾತ್ರರಾಗೋಣ.

*****

## ಗಣೇಶಾಥರ್ವಶೀರ್ಷಸ್ವಾಹಾಕಾರಮಂತ್ರಾಃ

ಓಂ ಲಂ ನಮಸ್ತೇ ಗಣಪತಯೇ । ತ್ವಮೇವ ಪ್ರತ್ಯಕ್ಷಂ ತತ್ತ್ವಮಸಿ । ತ್ವಮೇವ ಕೇವಲಂ ಕರ್ತಾಽಸಿ । ತ್ವಮೇವ ಕೇವಲಂ ಧರ್ತಾಽಸಿ । ತ್ವಮೇವ ಕೇವಲಂ ಹರ್ತಾಽಸಿ । ತ್ವಮೇವ ಸರ್ವಂ ಖಲ್ವಿದಂ ಬ್ರಹ್ಮಾಸಿ । ತ್ವಂ ಸಾಕ್ಷಾದಾತ್ಮಾಸಿ ನಿತ್ಯಂ ಸ್ವಾಹಾ ॥ 1 ॥

ಓಂ ಋತಂ ವಚ್ಮಿ । ಸತ್ಯಂ ವಚ್ಮಿ ಸ್ವಾಹಾ ॥ 2 ॥

ಓಂ ಅವತ್ವಂ ಮಾಮ್ । ಅವ ವಕ್ತಾರಮ್ । ಅವ ಶ್ರೋತಾರಮ್ । ಅವ ದಾತಾರಮ್ । ಅವ ಧಾತಾರಮ್ । ಅವಾನೂಚಾನಮವಶಿಷ್ಯಮ್ । ಅವ ಪಶ್ಚಾತ್ತಾತ್ । ಅವ ಪುರಸ್ತಾತ್ । ಅವೋತ್ತರಾತ್ತಾತ್ । ಅವ ದಕ್ಷಿಣಾತ್ತಾತ್ । ಅವ ಚೋರ್ಧ್ವಾತ್ತಾತ್ । ಅವಾ ಧರಾತ್ತಾತ್ । ಸರ್ವತೋ ಮಾಂ ಪಾಹಿ ಪಾಹಿ ಸಮಂತಾತ್ ಸ್ವಾಹಾ ॥ 3 ॥

ಓಂ ತ್ವಂ ವಾಙ್ಮಯಸ್ತ್ವಂ ಚಿನ್ಮಯಃ । ತ್ವಮಾನಂದಮಯಸ್ತ್ವಂ ಬ್ರಹ್ಮಮಯಃ । ತ್ವಂ ಸಚ್ಚಿದಾನಂದಾದ್ವಿತೀಯೋಽಸಿ । ತ್ವಂ ಪ್ರತ್ಯಕ್ಷಂ ಬ್ರಹ್ಮಾಸಿ । ತ್ವಂ ಜ್ಞಾನಮಯೋ ವಿಜ್ಞಾನಮಯೋಽಸಿ ಸ್ವಾಹಾ ॥ 4 ॥

ಓಂ ಸರ್ವಂ ಜಗದಿದಂ ತ್ವತ್ತೋ ಜಾಯತೇ । ಸರ್ವಂ ಜಗದಿದಂ ತ್ವತ್ತಸ್ತಿಷ್ಠತಿ । ಸರ್ವಂ ಜಗದಿದಂ ತ್ವಯಿ ಲಯಮೇಷ್ಯತಿ । ಸರ್ವಂ ಜಗದಿದಂ ತ್ವಯಿ ಪ್ರತ್ಯೇತಿ । ತ್ವಂ ಭೂಮಿರಾಪೋಽ ನಲೋಽನಿಲೋ ನಭಃ । ತ್ವಂ ಚತ್ವಾರಿ ವಾಕ್ಪದಾನಿ ಸ್ವಾಹಾ ॥ 5 ॥

ಓಂ ತ್ವಂ ಗುಣತ್ರಯಾತೀತಃ । ತ್ವಂ ಅವಸ್ಥಾತ್ರಯಾ ತೀತಃ । ತ್ವಂ ದೇಹತ್ರಯಾತೀತಃ । ತ್ವಂ ಕಾಲತ್ರಯಾತೀತಃ । ತ್ವಂ ಮೂಲಾಧಾರೇ ಸ್ಥಿತೋಽಸಿ ನಿತ್ಯಮ್ । ತ್ವಂ ಶಕ್ತಿತ್ರಯಾತ್ಮಕಃ । ತ್ವಾಂ ಯೋಗಿನೋ ಧ್ಯಾಯಂತಿ ನಿತ್ಯಮ್ । ತ್ವಂ ಬ್ರಹ್ಮಾ ತ್ವಂ ವಿಷ್ಣುಸ್ತ್ವಂ

ರುದ್ರಸ್ತ್ವಮಿಂದ್ರಸ್ತ್ವಮಗ್ನಿಸ್ತ್ವಂ ವಾಯುಸ್ತ್ವಂ ಸೂರ್ಯಸ್ತ್ವಂ ಚಂದ್ರಮಾಸ್ತ್ವಂ ಬ್ರಹ್ಮ ಭೂರ್ಭುವಸ್ಸುವರೋಂ ಸ್ವಾಹಾ ॥ 6 ॥

ಓಂ ಗಣಾದಿಂ ಪೂರ್ವಮುಚ್ಚಾರ್ಯ ವರ್ಣಾದಿಂಸ್ತದನಂತರಂ । ಅನುಸ್ವಾರಃ ಪರತರಃ । ಅರ್ಧೇಂದುಲಸಿತಮ್ । ತಾರೇಣ ರುದ್ಧಮ್ । ಏತತ್ತವ ಮನುಸ್ವರೂಪಮ್ । ಗಕಾರಃ ಪೂರ್ವರೂಪಮ್ । ಅಕಾರೋ ಮಧ್ಯಮ ರೂಪಮ್ । ಅನುಸ್ವಾರಶ್ಚಾಂತ್ಯರೂಪಮ್ । ಬಿಂದುರುತ್ತರರೂಪಮ್ । ನಾದಸ್ಸಂಧಾನಮ್ । ಸಗ್ಂಹಿತಾ ಸಂಧಿಃ । ಸೈಷಾ ಗಣೇಶವಿದ್ಯಾ। ಗಣಕ ಋಷಿಃ । ನಿಚೃದ್ಗಾಯತ್ರೀಛಂದಃ । ಶ್ರೀಮಹಾಗಣಪತಿರ್ದೇವತಾ । ಓಂ ಗಂ ಗಣಪತಯೇ ನಮಃ ಸ್ವಾಹಾ ॥ 7 ॥

ಓಂ ಏಕದಂತಾಯ ವಿದ್ಮಹೇ ವಕ್ರತುಂಡಾಯ ಧೀಮಹಿ । ತನ್ನೋ ದಂತೀ ಪ್ರಚೋದಯಾತ್ ಸ್ವಾಹಾ ॥ 8 ॥

ಓಂ ಏಕದಂತಂ ಚತುರ್ಹಸ್ತಂ ಪಾಶಮಂಕುಶಧಾರಿಣಮ್ । ರದಂ ಚ ವರದಂ ಹಸ್ತೈರ್ಬಿಭ್ರಾಣಂ ಮೂಷಕಧ್ವಜಮ್ । ರಕ್ತಂ ಲಂಬೋದರಂ ಶೂರ್ಪಕರ್ಣಕಂ ರಕ್ತವಾಸಸಮ್ । ರಕ್ತಗಂಧಾನುಲಿಪ್ತಾಂಗಂ ರಕ್ತಪುಷ್ಪೈಃ ಸುಪೂಜಿತಮ್ । ಭಕ್ತಾನುಕಂಪಿನಂ ದೇವಂ ಜಗತ್ಕಾರಣಮಚ್ಯುತಮ್ । ಆವಿರ್ಭೂತಂ ಚ ಸೃಷ್ಟ್ಯಾದೌ ಪ್ರಕೃತೇಃ ಪುರುಷಾತ್ಪರಮ್ । ಏವಂ ಧ್ಯಾಯತಿ ಯೋ ನಿತ್ಯಂ ಸ ಯೋಗೀ ಯೋಗೀನಾಂ ವರಃ ಸ್ವಾಹಾ ॥ 9 ॥

ಓಂ ನಮೋ ವ್ರಾತಪತಯೇ ನಮೋ ಗಣಪತಯೇ ನಮಃ ಪ್ರಮಥಪತಯೇ ನಮಸ್ತೇಽಸ್ತು ಲಂಬೋದರಾಯೈಕದಂತಾಯ ವಿಘ್ನವಿನಾಶಿನೇ ಶಿವಸುತಾಯ ಶ್ರೀವರದಮೂರ್ತಯೇ ನಮಃ ಸ್ವಾಹಾ ॥ 10 ॥

# ವೇ॥ ಬ್ರ॥ ಶ್ರೀ ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು
## (1928 - 2007)



ಅಧ್ಯಾತ್ಮ ವಿದ್ಯಾಪ್ರವೀಣ ವೇ॥ ಬ್ರ॥ ಶ್ರೀ ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿಗಳು ತಾ॥ 2-6-1928ರಂದು ನರಸಿಂಹರಾಜಪುರದಲ್ಲಿ ಜನಿಸಿದರು. ಇವರ ಪೂಜ್ಯ ತಂದೆಯವರು ಶೃಂಗೇರಿಯ ಕೃಷ್ಣಯಜುರ್ವೇದ ಸಲಕ್ಷಣ ಘನಾಂತ ಸ್ಮಾರ್ತಪ್ರಯೋಗ ವಿದ್ವಾಂಸರಾಗಿದ್ದ ವೇ॥ ಶ್ರೀಕಂಠಘನಪಾಠಿಗಳವರು ಮತ್ತು ತಾಯಿಯವರು ಸೌ॥ ಕಮಲಮ್ಮನವರು. ಶ್ರೀ ಮೂರ್ತಿಯವರು ಒಂಬತ್ತನೆಯ ವಯಸ್ಸಿನಲ್ಲಿಯೇ ಬ್ರಹ್ಮಚರ್ಯಾಶ್ರಮವನ್ನು ಸ್ವೀಕರಿಸಿ ತಂದೆಯವರಲ್ಲಿಯೇ ಉಪಯುಕ್ತವಾದ ವೇದಭಾಗವನ್ನು ಅಭ್ಯಾಸ ಮಾಡಿದರು. ಆದರೆ ತಮ್ಮ 14ನೇ ವಯಸ್ಸಿನಲ್ಲಿ ಪಿತೃವಿಯೋಗವಾದ್ದರಿಂದ ಮುಂದೆ ಬೇಲೂರಿನ ಸಂಸ್ಕೃತ ಪಾಠಶಾಲೆಯಲ್ಲಿ 4 ವರ್ಷ ವ್ಯಾಸಂಗ ಮಾಡಿ, ಚಂಪೂ ನಾಟಕ (ಸಾಹಿತ್ಯ) ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ನಂತರ 1947ರಲ್ಲಿ ಹೊಳೆನರಸೀಪುರದಲ್ಲಿ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳಿಂದ ಸ್ಥಾಪಿತವಾಗಿದ್ದ "ಅಧ್ಯಾತ್ಮ ವಿದ್ಯಾನಿಲಯ"ದಲ್ಲಿ ಶ್ರೀಗಳಿಂದಲೇ 5 ವರ್ಷ ಕಾಲ ಶಾಂಕರಭಾಷ್ಯಪ್ರಸ್ಥಾನಗಳನ್ನು ಅಧ್ಯಯನ ಮಾಡಿ 1952ರಲ್ಲಿ "ಅಧ್ಯಾತ್ಮ ವಿದ್ಯಾಪ್ರವೀಣ" ಎಂಬ ಪ್ರಶಸ್ತಿಯನ್ನು ಪಡೆದರು. ನಂತರ ಕಾರ್ಯಾಲಯದಲ್ಲೇ ಪಂಡಿತರಾಗಿ ನೇಮಕಗೊಂಡು ಪಾಠ, ಪ್ರವಚನ, ವೇದಾಂತಪ್ರಚಾರ, ಗ್ರಂಥಪ್ರಕಾಶನ, ಗ್ರಂಥರಚನೆ ಮುಂತಾದ ಹಲವಾರು ಕಾರ್ಯಗಳನ್ನು ನಡೆಸಿಕೊಡುತ್ತಾ ಜಯಪ್ರಿಯರಾಗಿ ಶ್ರೀ ಶ್ರೀಗಳವರ ಶಿಷ್ಯರಲ್ಲಿ ಗಣ್ಯರಾಗಿದ್ದು ಕಾರ್ಯಾಲಯದ ಪುರೋಭಿವೃದ್ಧಿಗೆ ಬಹುಮುಖವಾಗಿ ಕಾರಣರಾದರು.

ಶ್ರೀ ಶ್ರೀಗಳು 1975ರಲ್ಲಿ ಬ್ರಹ್ಮೀಭೂತರಾದ ಮೇಲೆ ಶ್ರೀ ಮೂರ್ತಿಗಳೇ ಅಧ್ಯಾತ್ಮ ಪ್ರಕಾಶ ಮಾಸಪತ್ರಿಕೆಯ ಸಂಪಾದಕರಾದರು. 1997-98 ಮತ್ತು 2001-02 ಈ ಅವಧಿಯಲ್ಲಿ ಇವರು ನಡೆಸಿಕೊಟ್ಟ ಶಾಂಕರಭಾಷ್ಯಾನುಸಾರ "ಬ್ರಹ್ಮಸೂತ್ರಭಾಷ್ಯ" ಮತ್ತು "ಭಗವದ್ಗೀತಾ ಭಾಷ್ಯ" ಗಳ ವೇದಾಂತ ಶಿಬಿರಗಳು ಚಿರಸ್ಮರಣೀಯವಾಗಿವೆ. ಈ ಶಿಬಿರಗಳಲ್ಲಿನ ಪ್ರವಚನಗಳು ಸಿ. ಡಿ. (MP3) ರೂಪದಲ್ಲಿ ಈಗಲೂ ಕಾರ್ಯಾಲಯದಲ್ಲಿ ಲಭ್ಯವಿದೆ. ಇಷ್ಟಲ್ಲದೆ ಶ್ರೀ ಮೂರ್ತಿಗಳು ವೇದ, ವೇದಾಂತ, ಸಂಪ್ರದಾಯ, ಸ್ತೋತ್ರ ಇತ್ಯಾದಿ ವಿಷಯಗಳ ಸುಮಾರು 30 ಗ್ರಂಥಗಳನ್ನೂ ರಚಿಸಿರುತ್ತಾರೆ. ಈ ಗ್ರಂಥಗಳೆಲ್ಲವೂ ಕಾರ್ಯಾಲಯದಲ್ಲಿ ದೊರೆಯುತ್ತವೆ.

ಇಂತಹ ಪುಣ್ಯಜೀವಿಗಳು ತಾ॥ 4-2-2007ರಂದು ತಮ್ಮ 79ನೇ ವಯಸ್ಸಿನಲ್ಲಿ ಹೊಳೆನರಸೀಪುರದಲ್ಲಿ ಕೀರ್ತಿಶೇಷರಾದರು. ಪೂಜ್ಯರ ಸುಮಾರು 55 ವರ್ಷಗಳ ಕಾಲದ ನಿಃಸ್ವಾರ್ಥಸೇವೆಯನ್ನು ಕಾರ್ಯಾಲಯವು ಸದಾಕಾಲವೂ ಅತ್ಯಂತ ಭಕ್ತಿಯಿಂದ ಸ್ಮರಿಸುತ್ತದೆ.

ಗಣಗಳ ಒಡೆಯನೇ ಗಣಪತಿ. ಅಂದರೆ ಆಧ್ಯಾತ್ಮಿಕವಾಗಿ ಇಂದ್ರಿಯಾದಿ ಸಮೂಹಗಳು, ಆಧಿಭೌತಿಕವಾಗಿ ಪ್ರಪಂಚ, ಆಧಿದೈವಿಕವಾಗಿ ದೇವಾದಿಗಳು – ಇವೆಲ್ಲಕ್ಕೂ ಒಡೆಯನು ಗಣಪತಿಯು. ಅವನನ್ನು ಸ್ತುತಿಸುವ ಮಂತ್ರಗಳು ಅಥರ್ವಶಿರವೆಂಬ ಮಂತ್ರಭಾಗದಲ್ಲಿ ಪಠಿತವಾಗಿವೆ. ಇಲ್ಲಿ ಗಣಪತಿಯ ಸಗುಣ-ನಿರ್ಗುಣರೂಪಗಳನ್ನು ಅನಾವರಣಗೊಳಿಸಿವೆ. ಮೊದಲು ನಮಸ್ಕಾರವನ್ನು ಹೇಳಿ, ಅವನೇ ಜಗತ್ತಿನ ಸೃಷ್ಟಿಸ್ಥಿತಿಲಯ ಕರ್ತನೆಂದೂ, ಅವನೇ ನಮ್ಮೆಲ್ಲರ ಆತ್ಮನಾಗಿದ್ದಾನೆಂದು ಹೊಗಳಿದೆ. ನಮ್ಮ ಜೀವನದಲ್ಲಿ ಬರುವ ತಾಪತ್ರಯಗಳ ರಕ್ಷಣೆಯನ್ನು ಎಲ್ಲೆಡೆಯಿಂದಲೂ ಮಾಡು ಎಂದು ಪ್ರಾರ್ಥಿಸಿದೆ. ಅವನೇ ಬ್ರಹ್ಮವಾಗಿದ್ದಾನೆ ಎನ್ನುತ್ತ ನೀನು ಇವೆಲ್ಲವನ್ನೂ ಮೀರಿರುವವನು ಎಂದು ಅನುಸಂಧಾನವನ್ನು ಮಾಡಿದೆ. ಅನಂತರ ತೈತ್ತಿರೀಯ ಉಪನಿಷತ್ತಿನಲ್ಲಿ ಸಂಹಿತೋಪಾಸನೆಯನ್ನು ತಿಳಿಸಿದಂತೆ ಇಲ್ಲಿ ಗಣೇಶವಿದ್ಯೆಯನ್ನು ಹೇಳಿ ಮತ್ತೆ ಅವನ ಸಗುಣಸ್ವರೂಪವನ್ನು ಧ್ಯಾನಿಸಿ, ವರವನ್ನ ಕೊಡುವ ಮೂರ್ತಿಯು ಎಂದು ನಮಸ್ಕಾರ ಪೂರ್ವಕವಾಗಿ ಸ್ತುತಿಸಿ ಉಪನಿಷತ್ತು ಕೊನೆಗೊಳ್ಳುತ್ತದೆ. ಫಲಶ್ರುತಿಯಲ್ಲಿ ಈ ವಿದ್ಯೆಗೆ ಅಧಿಕಾರಿ, ಉಪಾಸನೆಗೆ ಕಾಲ, ಹೋಮಾದಿಗಳಿಗೆ ದ್ರವ್ಯಾದಿಗಳನ್ನು ತಿಳಿಸಿದೆ.

ಇಲ್ಲಿ ಈ ಗಣಪತಿ ಅಥರ್ವಶೀರ್ಷ ಉಪನಿಷತ್ತಿನ ಸರಳ ವಿವರಣೆಯು ಇದೆ. ಗಣಪತಿಯನ್ನು ಉಪಾಸಿಸಿ ಕೃತಕೃತ್ಯರಾಗುವಂತೆ ವಿಷಯವನ್ನು ನಿರೂಪಿಸಲಾಗಿದೆ. ಅಧ್ಯಯನಮಾಡುವವರಿಗೆ ಆ ಗಣಪತಿಯು ಸರ್ವವಿಘ್ನಗಳನ್ನೂ ನಿವಾರಿಸಿ ಅನುಗ್ರಹಿಸಲಿ.

2022 ₹ 30/-